

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 28 ಮಂಗಳವಾರ 2023

ಸಂಪುಟ: 44 | ಸಂಚಿಕೆ: 221 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..



ನೀವಾದ್ರೂ ನಮ್ಮ ಕಷ್ಟ ನಿವಾರಿಸೋ ನನ್ನೊಡೆಯಾ...

ಮುಖ್ಯಮಂತ್ರಿ ಮುಂದೆ ಅಳಲು ತೋಡಿಕೊಂಡ ಬೀದರ್‌ನಿಂದ ಚಾಮರಾಜನಗರದವರೆಗಿನ ಸಂತ್ರಸ್ತ ಜನ

॥ ವೃದ್ಧಾಪ್ಯ ವೇತನ ನೀಡಿಲ್ಲ ॥ ಜಾತಿ ಪ್ರಮಾಣ ಪತ್ರ ಕೊಟ್ಟಿಲ್ಲ ॥ ಮನೆ ಮಂಜೂರು ಮಾಡಿಲ್ಲ ॥ ಭೂಮಿ ತಕರಾರು ತಪ್ಪಿಲ್ಲ ॥ ವಿಕಲಚೇತನರ ಸಮಸ್ಯೆ ನಿವಾರಿಸಿ ॥ ಹೃದಯ ಚಿಕಿತ್ಸೆಗೆ ನೆರವು ನೀಡಿ ॥ ನಮ್ಮ ಭೂಮಿ ರಕ್ಷಿಸಿಕೊಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ಕಣ್ಣೀರಿಟ್ಟ ಜನಸಾಮಾನ್ಯರು







ಬೆಂಗಳೂರು, ನ. 27 (ಕೆಎಂಶಿ)– ಸಚಿವರು, ಜಿಲ್ಲಾಧಿಕಾರಿಗಳು ಕೆಳಹಂತದ ಸಿಬ್ಬಂದಿ ಜನರ ಸಮಸ್ಯೆಗಳಿಗೆ ಸ್ಪಂದಿಸದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವೃದ್ಧಾಪ್ಯ ವೇತನ ಸೇರಿದಂತೆ ಅನೇಕ ಸಣ್ಣ–ಪುಟ್ಟ ಅಹವಾಲುಗಳನ್ನು ಪರಿಹರಿಸುವ ಸ್ಥಿತಿ ಒದಗಿ ಬಂದಿದೆ. 6 ತಿಂಗಳ ಮಗುವಿನಿಂದ ಹಿಡಿದು 97 ವರ್ಷದ ವೃದ್ಧರೂ ಕಿಲೋ ಮೀಟರ್‌ವರೆಗೆ ಸರದಿ ಸಾಲಿನಲ್ಲಿ ನಿಂತು ಮುಖ್ಯಮಂತ್ರಿ ಅವರ ಬಳಿ ಸಮಸ್ಯೆ ಬಿನ್ನವಿಸಿಕೊಂಡರು.

ಪಂಚಾಯತ್ ಕಾರ್ಯದರ್ಶಿಗಳು ಮಾಡಬೇಕಾದ ಸಣ್ಣ–ಪುಟ್ಟ ಕೆಲಸವನ್ನೂ ಮಾಡಬೇಕಾದ ಪರಿಸ್ಥಿತಿ ಸ್ವತಃ ಮುಖ್ಯಮಂತ್ರಿಗೆ ಮನವರಿಕೆ ಆಯಿತು. ತಾವು ಅಧಿಕಾರಕ್ಕೆ ಬಂದ ನಂತರ ಮುಖ್ಯಮಂತ್ರಿ ಅವರು ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳ ಜೊತೆಗೂಡಿ, ಬೀದರ್‌ನಿಂದ ಚಾಮರಾಜನಗರದವರೆಗೂ ಬಂದಿದ್ದ ಜನರ ದುಃಖ–ದುಮ್ಮಾನಗಳನ್ನು ಆಲಿಸಿ, ಸ್ಥಳದಲ್ಲೇ ಪರಿಹರಿಸಿದರು.

ಸ್ಥಳದಲ್ಲೇ ಪರಿಹಾರ ಒದಗಿಸಲಾಗದ ಅರ್ಜಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಯ ನಿಗದಿ ಪಡಿಸಿ ಪರಿಹರಿಸಿ ತಮ್ಮ ಗಮನಕ್ಕೆ ತರುವಂತೆ ಆದೇಶಿಸಿದರು.

ಕೆಲವು ಸಮಸ್ಯೆಗಳಿಗೆ ಸಂಜೆ ವೇಳೆಗೆ ಪರಿಹಾರ ದೊರಕಿಸಿ ತಮ್ಮ ಸಚಿವಾಲಯಕ್ಕೆ ತಿಳಿಸುವಂತೆ ಕಟ್ಟುನಿಟ್ಟಿನ ಆದೇಶ ಮಾಡಿದರು. ಅರ್ಜಿಗಳ ಸ್ವೀಕಾರಕ್ಕೆ ಪ್ರತ್ಯೇಕ 20 ಕೌಂಟರ್ ವ್ಯವಸ್ಥೆ ಮಾಡಿ ಅಲ್ಲಿಗೆ ಬಂದಂತಹವರ ಸಮಸ್ಯೆಗಳನ್ನು ಮುಖ್ಯ ಕಾರ್ಯದರ್ಶಿ ಸೇರಿದಂತೆ ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಬಗೆಹರಿಸುವ ವ್ಯವಸ್ಥೆ ಮಾಡಲಾಗಿತ್ತು. ಇದೇ ಕಾಲಕ್ಕೆ ಜಿಲ್ಲಾಧಿಕಾರಿಗಳೂ ಸೇರಿದಂತೆ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಜನತಾ ದರ್ಶನ ಮುಗಿಯುವವರೆಗೂ ತಮ್ಮ ಕಚೇರಿಯಲ್ಲೇ ಇದ್ದು, ಮುಖ್ಯಮಂತ್ರಿ ಹಾಗೂ ಹಿರಿಯ ಅಧಿಕಾರಿಗಳು ನೀಡುವ ಆದೇಶವನ್ನು ಪಾಲಿಸುವಂತಹ ಏರ್ಪಾಡು ಮಾಡಿದ್ದರು. ವೃದ್ಧಾಪ್ಯ ವೇತನವಲ್ಲದೆ, ಜಾತಿ ಪ್ರಮಾಣಪತ್ರ, ಮನೆ ಮಂಜೂರು, ಭೂ ತಕರಾರು, ವಿಕಲಚೇತನರ ಸಮಸ್ಯೆ, ಅನಾರೋಗ್ಯ ಪೀಡಿತರು ತಮ್ಮ ಅಹವಾಲು ಮತ್ತು ದೂರುಗಳನ್ನು ಮುಖ್ಯಮಂತ್ರಿ ಬಳಿ ತೋಡಿಕೊಂಡರು. ಒಂದು ಸಣ್ಣ ಸಮಸ್ಯೆಯನ್ನು ಬಗೆಹರಿಸದ ಜಿಲ್ಲಾ ಆಡಳಿತದ ಬಗ್ಗೆ ಕೆಲವೊಮ್ಮೆ ಕೆಂಡಾಮಂಡಲ ರಾದ ಮುಖ್ಯಮಂತ್ರಿ, ಇಂತಹವುಗಳನ್ನು ಸ್ಥಳದಲ್ಲಿಯೇ ಪರಿಹರಿಸಿಕೊಟ್ಟರು. ಪಂಚಾಯತ್ ಮತ್ತು ಕಂದಾಯ ಇಲಾಖೆ ಕಾರ್ಯದರ್ಶಿಗಳು ನಮ್ಮ ● 9ನೇ ಪುಟಕ್ಕೆ

ಬಹುತೇಕ ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ; ಉಳಿದವಕ್ಕೆ ಕಾಲಮಿತಿಯೊಳಗೆ ಪರಿಹಾರ ಕಲ್ಪಿಸಲು ಕಟ್ಟಾಜ್ಞೆ

ಬೆಂಗಳೂರುವರೆಗೆ ತಂದರೆ ಸ್ಥಳೀಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಮುಖ್ಯಮಂತ್ರಿ ಎಚ್ಚರಿಕೆ

ಬೆಂಗಳೂರು, ನ.27(ಕೆಎಂಶಿ)– ಜಿಲ್ಲಾ ಮಟ್ಟದಲ್ಲೇ ಬಗೆಹರಿಯಬೇಕಾದ ಸಮಸ್ಯೆಗಳನ್ನು ವಿಧಾನಸೌಧದವರೆಗೂ ತಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಮುಂಜಾನೆಯಿಂದ ಸಂಜೆವರೆಗೂ ಜನಸ್ಪಂದನಾ ಏರ್ಪಡಿಸಿ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಿ, ಪರಿಹರಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನವರೆಗೆ ಸಮಸ್ಯೆಗಳನ್ನು ಇಟ್ಟುಕೊಂಡು ಬಂದರೆ ಅದು ಅಧಿಕಾರಿಗಳ ವೈಫಲ್ಯ ಇದನ್ನು ನಾನು ಸಹಿಸುವುದಿಲ್ಲ.

ಜನರು ದುಡ್ಡು ಖರ್ಚು ಮಾಡಿಕೊಂಡು ಬೆಂಗಳೂರಿನವರೆಗೂ ಬರುವುದಾದರೆ ನೀವು ಏನು ಕೆಲಸ ಮಾಡುತ್ತೀರಿ, ಅರ್ಜಿಗಳ ವಿಲೇವಾರಿ ಮಾಡದಿರುವುದೇ ಭ್ರಷ್ಟಾಚಾರದ ಮತ್ತೊಂದು ರೂಪ ● 9ನೇ ಪುಟಕ್ಕೆ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೊಡವ ಸಮಾಜದಲ್ಲಿ 'ಪುತ್ತರಿ ಹಬ್ಬ'ವನ್ನು ಕೊಡವ ಸಮುದಾಯದವರು ಸೋಮವಾರ ಶ್ರದ್ಧಾಭಕ್ತಿಯಿಂದ ಆಚರಿಸಿದರು. (ಪೂರ್ಣ ವರದಿ ಪುಟ-5)

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884171888

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯುವೆಲ್ಸ್
THOLASI JEWELS
₹ 5735/-
ಅಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221-200926

ಬಸ್‌ನಲ್ಲಿ ಪ್ರಯಾಣಿಸುವಾಗ ಯಾರೇನೇ ಕೊಟ್ಟರೂ ತಿನ್ನಬೇಡಿ! ಕುಡಿಯಬೇಡಿ!!

ವೃದ್ಧೆಗೆ ಕಾಫಿಯಲ್ಲಿ ಮತ್ತು ಬರುವ ಪದಾರ್ಥ ಹಾಕಿ

ಚಿನ್ನದ ಸರ, ಬಳೆ ಕದ್ದ ನಯವಂಚಕ



(ಸಂಗ್ರಹ ಚಿತ್ರ)

ಮೈಸೂರು, ನ.27–ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ವೃದ್ಧೆಗೆ ಕಾಫಿ ಜೊತೆ ಮತ್ತು ಬರಿಸುವ ಔಷಧಿ ಬೆರೆಸಿಕೊಟ್ಟು ಚಿನ್ನಾಭರಣ ದೋಚಿದ ಘಟನೆ ನಡೆದಿದೆ.

ಸಿದ್ಧಾರ್ಥನಗರ ನಿವಾಸಿ ಅಂಬುಜಾಕ್ಷಮ್ಮ(71) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ನವೆಂಬರ್ 25ರಂದು ಮಧ್ಯಾಹ್ನ 1.30ರ ಸುಮಾರಿನಲ್ಲಿ ಮೈಸೂರಿಗೆ ಬರುವ ಸಲುವಾಗಿ ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ತೆರಳಿದ್ದಾರೆ. ಟಿಕೆಟ್ ಪಡೆಯುವ ಕೌಂಟರ್‌ನಲ್ಲಿ ಜನ ಹೆಚ್ಚಾಗಿದ್ದುದರಿಂದ ಸುಮಾರು 40 ವರ್ಷದ ಅಪರಿಚಿತ ವ್ಯಕ್ತಿಯೋರ್ವ ಅಂಬುಜಾಕ್ಷಮ್ಮನವರಿಗೆ ತಾನೇ ಟಿಕೆಟ್ ಖರೀದಿಸಿ ಕೊಡುವುದಾಗಿ ಹಣ ಪಡೆದು ಟಿಕೆಟ್ ಖರೀದಿಸಿದ್ದಲ್ಲದೇ ಬಸ್‌ನಲ್ಲಿ ತಾನೇ ಸೀಟ್ ಹಿಡಿದು ಅಂಬುಜಾಕ್ಷಮ್ಮ ನವರ ಪಕ್ಕದಲ್ಲೇ ಕುಳಿತಿದ್ದಾನೆ.

ಬಸ್‌ನಲ್ಲಿ ಹೋಗುವಾಗ ಚಿನ್ನಾಭರಣ ಧರಿಸಬಾರದು. ಕಳ್ಳರ ಹಾವಳಿ ಹೆಚ್ಚಾಗಿದೆ ಎಂದು ಆತ ಹೇಳಿದಾಗ ಅಂಬುಜಾಕ್ಷಮ್ಮ ತನ್ನ ಕತ್ತಿನಲ್ಲಿದ್ದ 65 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಳಚಿ ಬ್ಯಾಗ್‌ನಲ್ಲಿ ಇಟ್ಟು ಕೊಂಡಿದ್ದಾರೆ. ಆದರೆ, ಕೈನಲ್ಲಿದ್ದ ಚಿನ್ನದ ಬಳೆ ಕಳಚಲು ಸಾಧ್ಯವಾಗದೇ ಹಾಗೇ ಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಬಸ್‌ನಿಂದ ಇಳಿದು ಹೋದ ಆತ, ಎರಡು ಕಪ್‌ಗಳಲ್ಲಿ ಕಾಫಿ ● 9ನೇ ಪುಟಕ್ಕೆ

ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಮೈಸೂರು ವೈದ್ಯ ಡಾ.ಚಂದನ್ ಬಲ್ಲಾಳ್ ಬಂಧನ



ಚಂದನ್ ಬಲ್ಲಾಳ್

ಮೈಸೂರು, ನ. 27– ರಾಜ್ಯವನ್ನೇ ಬೆಚ್ಚಿ ಬೀಳಿಸಿದ ಭ್ರೂಣ ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮೈಸೂರಿನ ಉದಯಗಿರಿಯ ಮಾತಾ ಆಸ್ಪತ್ರೆಯ ವೈದ್ಯ ಡಾ.ಚಂದನ್ ಬಲ್ಲಾಳ್‌ನನ್ನು ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈಗಾಗಲೇ ಈ ಪ್ರಕರಣದಲ್ಲಿ ತಮಿಳುನಾಡಿನ ವೈದ್ಯ ಡಾ. ತುಳಸಿರಾಮ್, ಮೈಸೂರಿನ ಮಾತಾ ಆಸ್ಪತ್ರೆಯ ವ್ಯವಸ್ಥಾಪಕಿ ಸಿ.ಎಂ. ಮೀನಾ, ರಿಸೆಪ್ಷನಿಸ್ಟ್ ರಿಜ್ಮಾ ಖಾನುಮ್, ಲ್ಯಾಬ್ ಟೆಕ್ನಿಷಿಯನ್ ನಿಸಾರ್, ಮಧ್ಯವರ್ತಿಗಳಾದ ಶಿವಲಿಂಗೇಗೌಡ ಅಲಿಯಾಸ್ ಶಿವ, ನಯನ್‌ಕುಮಾರ್ ಅಲಿಯಾಸ್ ನಯನ್, ವೀರೇಶ್, ನಳಿನ್‌ಕುಮಾರ್ ಸೇರಿದಂತೆ 8 ಮಂದಿಯನ್ನು ಬಂಧಿಸಿದ್ದರು. ಇದೀಗ ತಲೆಮರೆಸಿಕೊಂಡಿದ್ದ ಡಾ. ಚಂದನ್ ಬಲ್ಲಾಳ್‌ನನ್ನು ಕೂಡ ಬಂಧಿಸಲಾಗಿದೆ.

ಈ ಕುಖ್ಯಾತ ತಂಡವು ಕಳೆದ 3 ವರ್ಷಗಳಿಂದ ಸುಮಾರು 900 ಭ್ರೂಣಗಳ ಹತ್ಯೆ ಮಾಡಿತ್ತು. ಬೆಂಗಳೂರಿನಲ್ಲಿ ಗರ್ಭಿಣಿಯರನ್ನು ● 6ನೇ ಪುಟಕ್ಕೆ

ಆಲೆಮನೆಯಲ್ಲಿ ಇಂತಹದೊಂದು ಸಂಚಿನ ಬಗ್ಗೆ ಯಾರಿಗೂ ಅನುಮಾನವೇ ಬರಲಿಲ್ಲವೇ?

ಇದೊಂದು ಯಕ್ಷಪ್ರಶ್ನೆ



ಮಂಡ್ಯ, ನ. 27– ಸುದೀರ್ಘ ಮೂರು ವರ್ಷಗಳ ಕಾಲ ಸತತವಾಗಿ ಮಂಡ್ಯ ತಾಲೂಕು ದುದ್ದ ಹೋಬಳಿಯ ಹಾಡ್ಯ ಗ್ರಾಮದ ಜನವಸತಿ ಪ್ರದೇಶದಲ್ಲಿರುವ ಆಲೆಮನೆಯಲ್ಲಿ ಭ್ರೂಣ ಲಿಂಗ ಪತ್ತೆ ನಡೆಯುತ್ತಿದ್ದ ವಿಚಾರ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಆಗಮಿಸುವವರೆಗೂ ಯಾರಿಗೂ ಗೊತ್ತಾಗಲೇ ಇಲ್ಲವೇ? ಇದಂತೂ ಅಚ್ಚರಿಯ ಸಂಗತಿಯಾಗಿದೆ. ಆಲೆಮನೆಗೆ ಹೊಂದಿಕೊಂಡಂತೆಯೇ ಹಾಲೋ ಬ್ರಿಕ್ಸ್‌ನಿಂದ ನಿರ್ಮಿಸಲಾಗಿದ್ದ ಶೆಡ್‌ನಲ್ಲಿ ಭ್ರೂಣ ಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡುವ ಉಪಕರಣಗಳನ್ನು ಜೋಡಿಸಲಾಗಿತ್ತು. ಆರೋಪಿಗಳು ಪೊಲೀಸರಿಗೆ ನೀಡಿರುವ ಹೇಳಿಕೆಯಂತೆ ತಿಂಗಳೊಂದಕ್ಕೆ 25ರಿಂದ 30 ಭ್ರೂಣ ಹತ್ಯೆಗಳು ನಡೆಯುತ್ತಿತ್ತು. ಹೆಣ್ಣು ಭ್ರೂಣವನ್ನು ಮಾತ್ರವೇ ಹತ್ಯೆ ಮಾಡಲಾಗುತ್ತಿದ್ದು, ಗಂಡು ಭ್ರೂಣ ಪತ್ತೆಯಾದರೆ ಖುಷಿಯಾಗಿ ಗರ್ಭಿಣಿ ಸ್ತ್ರೀಯರು ತಮ್ಮ ಊರಿಗೆ ಮರಳುತ್ತಿದ್ದರು. ಹಾಗೇ ನೋಡಿದರೆ ಈ ಆಲೆಮನೆಯಲ್ಲಿ ತಿಂಗಳೊಂದಕ್ಕೆ ಸುಮಾರು 50ಕ್ಕೂ ಹೆಚ್ಚು ಗರ್ಭಿಣಿ ಸ್ತ್ರೀಯರಿಗೆ ಭ್ರೂಣಲಿಂಗ ಪತ್ತೆ ಮಾಡಲಾಗುತ್ತಿತ್ತು ಎಂದು ಅಂದಾಜಿಸಲಾಗುತ್ತಿದೆ. ವರ್ಷವಿಡೀ ಆಲೆಮನೆ ನಡೆಯದಿದ್ದರೂ ತಿಂಗಳಿಗೆ ಸುಮಾರು 50ಕ್ಕೂ ಹೆಚ್ಚು ಮಹಿಳೆಯರು ● 6ನೇ ಪುಟಕ್ಕೆ



Inauguration of New Multispeciality Hospital

ಬೃಂದಾವನ ಚಿತ್ರಾಸ್ ಆಸ್ಪತ್ರೆ

BRINDAVAN CHITRAS HOSPITAL

Wednesday 29th November 2023

Facilities

- 24x7 Emergency ICU Service
- 24x7 Trauma Accident & Casualty
- Department of Orthopaedics
- Department of Neuro Surgery
- Department of Medical Gastroenterology
- Department of Surgical Gastroenterology & Minimal Asseces Surgery
- Department of Internal Medicine & Diabetology
- Department of Gynecology and Obstetrics
- Department of Pediatrics
- Department of Pediatric Surgery
- Department of IVF
- Department of General Surgery
- Department of Anesthesia
- Department of Urology & Nephrology
- Department of ENT
- Department of Dermatology
- Department of Vascular Surgery
- Ultrasound and Digital X-Ray
- 24x7 Lab
- 24x7 Ambulance Service
- Cashless Insurance Facilities Available

25/1A, Irwin Road, Mysuru - 01

For more information contact : 0821-2445954 / 4266455 / 4247808

chitrashospital@yahoo.com www.chitrashospital.com, www.ivfchitras.com

From: Management, Brindavan Hospital and Chitra's Hospital

ಕನಕದಾಸ ಜಯಂತಿ ಪ್ರಚಾರ ರಥಕ್ಕೆ ಚಾಲನೆ



ಮೈಸೂರು, ನ.27–ಭಕ್ತ ಕನಕದಾಸರ 536ನೇ ಜಯಂತಿ ಯಶಸ್ಸಿಗೆ ಸಹಕರಿಸುವಂತೆ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ ಮನವಿ ಮಾಡಿದರು.

ನಗರದ ನಂಜುಮಳಿಗೆ ವೃತ್ತದಲ್ಲಿ ನ.30ರಂದು ಸರ್ಕಾರದ ವತಿಯಿಂದ ನಡೆಯಲಿರುವ 536ನೇ ಕನಕ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕೃಷ್ಣರಾಜ ಯುವ ಬಳಗದ ಗೌರವಾಧ್ಯಕ್ಷ ಹಾಗೂ ಕೇಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ (ಬಸಪ್ಪ) ಪ್ರಚಾರ ರಥಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಕನಕದಾಸರು ನಾಡಿನ ಉದ್ದಗಲಕ್ಕೂ ಕಾಲ್ನಡಿಗೆಯಲ್ಲಿ ಸಂಚರಿಸಿ ಭಕ್ತಿಭಾವ, ವೈರಾಗ್ಯಗಳನ್ನು ಸಾರಿ ಸಮಾಜವನ್ನು ಜಾಗೃತಿಗೊಳಿಸಿದರು. ನವ ಸಮಾಜ ನಿರ್ಮಾಣ ಮಾಡಲು ಕನಕದಾಸರ ಚಿಂತನೆ, ತತ್ವ ಮತ್ತು ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ನ.30ರಂದು ನಡೆಯಲಿರುವ ಕನಕ ಜಯಂತಿ ಯಶಸ್ವಿಗೊಳಿಸುವ ಮೂಲಕ ಈ ಬಾರಿ ಅದ್ಧೂರಿಯಾಗಿ ಆಚರಿಸಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಕುರುಬ ಸಮಾಜವನ್ನು ಸದೃಢಗೊಳಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸುವ ಮೂಲಕ ವಿಶಿಷ್ಟ ರೀತಿಯ ಕನಕ ಜಯಂತಿ ಕಾರ್ಯಕ್ರಮಕ್ಕೆ ಸಹಕಾರ ನೀಡಬೇಕು. ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ತಪ್ಪದೆ ಭಾಗವಹಿಸಬೇಕು ಎಂದರು.

ತೀರ್ಥಕುಮಾರ್, ರವಿಚಂದ್ರ, ಎಸ್ ಎನ್ ರಾಜೇಶ್, ಕಂಸಾಳೆ ರವಿ, ನವೀನ್ ಕೆಂಪಿ, ಮಂಜು, ಮಂಜುನಾಥ್, ಇನ್ನಿತರರು ಈ ವೇಳೆ ಹಾಜರಿದ್ದರು.

ನ.30ರಂದು ಕನಕದಾಸರ 536ನೇ ಜಯಂತಿ



ಮೈಸೂರು,ನ.27–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನ.30ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕಲಾಮಂದಿರದಲ್ಲಿ ದಾಸಶ್ರೇಷ್ಠ–ಸಂತಕವಿ ಕನಕದಾಸರ 536ನೇ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಶ್ರೀ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶ್ರೀ ಶಿವಾನಂದಪುರಿ ಸ್ವಾಮೀಜಿ ಹಾಗೂ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಚಿವ ಕೆ.ವೆಂಕಟೇಶ್ ಗೌರವ ಉಪಸ್ಥಿತಿ ವಹಿಸುವರು.

ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ವಿಧಾನಸಭಾ ಶಾಸಕರಾದ ತನ್ವೀರ್ ಸೇಟ್, ಜಿ.ಟಿ.ದೇವೇಗೌಡ, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವ ನಾರಾಯಣ್, ರವಿಶಂಕರ್, ಟಿ.ಎಸ್. ಶ್ರೀವತ್ಸ, ಸಿ.ಅನಿಲ್‌ಕುಮಾರ್ ಹಾಗೂ ವಿಧಾನಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಎ.ಎಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಪಾಲ್ಗೊಳ್ಳುವರು. ಮೈಸೂರಿನ ಸಾಹಿತಿಗಳಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಮುಖ್ಯ ಭಾಷಣಕಾರರಾಗಿ ಭಾಗವಹಿಸುವರು.



ಮೈಸೂರಿನ ಕನ್ನೇಗೌಡನ ಕೊಪ್ಪಲಿನಲ್ಲಿ(ಕೆಜಿ ಕೊಪ್ಪಲು) ಇತ್ತೀಚೆಗೆ ನೆರವೇರಿದ ಶ್ರೀ ಮಾರಮ್ಮ ದೇವಾಲಯದ 16ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವದಲ್ಲಿ ಕ್ರೀಡಾ ಸಾಧಕರಾದ ನೀಲಾ, ಕಿಶನ್, ಧನುಷ್ ಗೌಡ ಹಾಗೂ ಹೇಮಂತ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ರಾಮೇಗೌಡರು, ಮಾಜಿ ಕಾರ್ಪೋರೇಟರ್ ಎಂ.ಶಿವಕುಮಾರ್, ವಕೀಲ ಬಸವರಾಜು, ಮಹಾದೇವಪ್ಪ, ಸೋಮಣ್ಣ, ದತ್ತ, ರಾಜ್‌ಕುಮಾರ್, ಶಿವಣ್ಣ ಮತ್ತಿತರರಿದ್ದರು.



ಪದವಿ ಪೂರ್ವ ಶಿಕ್ಷಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು ಮಡಿಕೇರಿ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು 2023–24ರಲ್ಲಿ ಕೊಡಗು ಜಿಲ್ಲೆಯ ಪೊನ್ನಂಪೇಟೆಯ ಸಿಐಟಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡರು.

ಎಲ್.ಕೆ.ಅತೀಕ್, ಸಿಎಂ ಅಪರ ಮುಖ್ಯ ಕಾರ್ಯದರ್ಶಿ



ಬೆಂಗಳೂರು: ಮುಖ್ಯಮಂತ್ರಿಗಳ ಅಪರ ಮುಖ್ಯಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್ ನೇಮಕ ಮಾಡಲಾಗಿದೆ. ಈವರೆಗೂ ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅತೀಕ್, ಸಿಎಂ ಅಪರ ಮುಖ್ಯ ಕಾರ್ಯದರ್ಶಿ ಜತೆಗೆ ಹಣಕಾಸು ಇಲಾಖೆ ಹುದ್ದೆಯಲ್ಲೂ ಮುಂದುವರಿಯಲಿದ್ದಾರೆ. ಮುಖ್ಯಮಂತ್ರಿಗಳ ಅಪರ ಮುಖ್ಯಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್ ಅವರನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಿದೆ. ನ.30ರಂದು ರಜನೀಶ್ ಗೋಯಲ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಅಂತರಶಾಲಾ ಮಟ್ಟದ ಭಾವಗೀತೆ, ಜನಪದಗೀತೆ ಸ್ಪರ್ಧೆ ವಿಜೇತರು



ಮೈಸೂರು,ನ.27–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥವಾಗಿ ಅಂತರಶಾಲಾ ಮಟ್ಟದ ಭಾವಗೀತೆ ಮತ್ತು ಜನಪದಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಹಲವಾರು ಶಾಲೆಗಳ ಮಕ್ಕಳು ಭಾಗವಹಿಸಿದ್ದು, ವಿಜೇತ ವಿದ್ಯಾರ್ಥಿಗಳಿಗೆ ಪಾರಿತೋಷಕ ಮತ್ತು ನಗದು ಬಹುಮಾನ ವಿತರಿಸಲಾಯಿತು. ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ನಿವೃತ್ತ ಕನ್ನಡ ಉಪನ್ಯಾಸಕ ಜಿ.ಎ ಶಿವಲಿಂಗಯ್ಯ, ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಸದಸ್ಯ ಎಸ್ ಸತ್ಯಾನಂದ, ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್.ಸುಧಾ, ತೀರ್ಪುಗಾರರಾದ ರಾಧಿಕ ಸತ್ಯಪ್ರಕಾಶ್, ಸುನಂದಾ, ಶೃತಿ ಇನ್ನಿತರರು ಉಪಸ್ಥಿತರಿದ್ದರು.

ಮೀಟರ್ ಬಡ್ಡಿ ವ್ಯವಹಾರ ನಡೆಸುವವರ ವಿರುದ್ಧ ಕಾನೂನು ಕ್ರಮ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ



ತುಮಕೂರು: ಮೀಟರ್ ಬಡ್ಡಿ ವ್ಯವಹಾರ ನಡೆಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೋಮವಾರ ಹೇಳಿದ್ದಾರೆ.

ಮೀಟರ್ ಬಡ್ಡಿ ವ್ಯವಹಾರ ಕಿರುಕುಳದಿಂದಾಗಿ ತುಮಕೂರಿನಲ್ಲಿ ನಿನ್ನೆ ಒಂದೇ ಕುಟುಂಬದ ಐವರು ಆತ್ಮಹತ್ಯೆಗೆ ಶರಣಾಗಿದ್ದು, ಆತ್ಮಹತ್ಯೆಗೂ ಮುನ್ನ ಕರೀಬ್ ಸಾಬ್ ಎಂಬುವವರು ಡೆತ್ ನೋಟ್ ಬರೆದಿಟ್ಟಿದ್ದರು. ಇದರಂತೆ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಇಂದು ಗೃಹ ಸಚಿವ ಪರಮೇಶ್ವರ್ ಅವರು ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರೀಬ್ ಸಾಬ್ ಡೆತ್ ನೋಟ್‌ನಲ್ಲಿ ಉಲ್ಲೇಖಿಸಿದ್ದ ಐದು ಜನರನ್ನು ವಶಕ್ಕೆ ಪಡೆಯಲಾಗಿದೆ. ಆತ್ಮಹತ್ಯೆಯ ಹಿಂದೆ ಬಡ್ಡಿ ವ್ಯವಹಾರ ಇದೆ ಎಂದು ಜನರು ಮಾತನಾಡುತ್ತಿದ್ದಾರೆ. ಅದನ್ನು ಗಂಭೀರವಾಗಿ ತೆಗೆದುಕೊಂಡು, ಬಡ್ಡಿ ವ್ಯವಹಾರವನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಬಡ್ಡಿ ವ್ಯವಹಾರ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳುತ್ತೇವೆ. ತನಿಖೆಯ ನಂತರ ಆತ್ಮಹತ್ಯೆಗೆ ಕಾರಣ ಏನು ಎಂಬುವುದು ತಿಳಿಯಲಿದೆ ಎಂದು ಡಾ.ಪರಮೇಶ್ವರ್ ಹೇಳಿದರು.

ನಗರ ಮತ್ತು ಜಿಲ್ಲೆಯಲ್ಲಿ ಅಮಾಯಕರಿಗೆ ಸಾಲ ಕೊಟ್ಟು ಬಡ್ಡಿ ಪಡೆಯುವುದು ಜಾಸ್ತಿಯಾಗಿದೆ. ಮೀಟರ್ ಬಡ್ಡಿ ಮಾಡುವವರ, ದಂಧೆ ನಡೆಸುವವರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ. ಇಂತಹ ಘಟನೆ ಮರುಕಳಿಸಬಾರದು. ಇದನ್ನು ತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಗೃಹ ಸಚಿವರು ತಿಳಿಸಿದರು.

ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿ; ಶ್ವೇತಪತ್ರ ಹೊರಡಿಸಲು ಬೆಳಗಾವಿ ಅಧಿವೇಶನದಲ್ಲಿ ಆಗ್ರಹ

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿಕೆ

ಬೆಂಗಳೂರು, ನ. 27(ಕೆಎಂಶಿ)– ರಾಜ್ಯ ಸರ್ಕಾರ ಆರ್ಥಿಕವಾಗಿ ಸಂಪೂರ್ಣ ದಿವಾಳಿಯಾಗಿದ್ದು, ಹಣಕಾಸಿನ ಸ್ಥಿತಿಗತಿ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಒತ್ತಾಯಿಸುವುದಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐದು ಗ್ಯಾರಂಟಿ ಯೋಜನೆಗಳ ಪೈಕಿ ವಿದ್ಯುತ್, ಗೃಹಲಕ್ಷ್ಮಿ, ಬಿಪಿಎಲ್ ಕುಟುಂಬದ ಪ್ರತಿ ಯೂನಿಟ್‌ಗೆ 10 ಕೆ.ಜಿ. ಅಕ್ಕಿ ಜಾರಿ ಅರೆಬರೆಯಾಗಿದ್ದು, ಭರವಸೆಗಳ ಈಡೇರಿಕೆಗೆ ಸರ್ಕಾರದ ಬಳಿ ಹಣ ಇಲ್ಲದಂತಾಗಿದೆ.

ರಾಜ್ಯದ ಬೊಕ್ಕಸ ಬರಿದಾಗಿದೆ, ಬರಗಾಲದಿಂದ ತತ್ತರಿಸುತ್ತಿರುವ ರೈತರಿಗೆ ಪರಿಹಾರ ನೀಡಲು ಸಾಧ್ಯವಾಗದೆ ಕೇಂದ್ರದತ್ತ ಬೊಟ್ಟು ಮಾಡಿ ತೋರಿಸಲಾಗುತ್ತಿದೆ. ಇದು ಸಂವೇದನಾರಹಿತ ಸರ್ಕಾರವಾಗಿದೆ ಎಂದರು. ಬರಪೀಡಿತ ಅನೇಕ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ಸಂದರ್ಭದಲ್ಲಿ ಸರ್ಕಾರದ ನಿಜಬಣ್ಣ ಬಯಲಾಗಿದೆ, ಜನ ಸಂಕಷ್ಟದಲ್ಲಿದ್ದರೂ ತನಗೆ ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿರುವುದು ಕಂಡುಬಂದಿತು. ಕೇಂದ್ರ ಸರ್ಕಾರದ ವಿರುದ್ಧ ಗೂಬೆ ಕೂರಿಸುವ ಮೊದಲು ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ಏನೆಂಬುದನ್ನು ಸ್ಪಷ್ಟಪಡಿಸಲಿ. ಬಿಜೆಪಿ ಅಧಿಕಾರದಲ್ಲಿದ್ದಾಗ ಕೇಂದ್ರದ ನೆರವಿಗೆ ಕಾಯದೆ ರೈತರ ಸಂಕಷ್ಟಕ್ಕೆ ಧಾವಿಸಿದ್ದೆವು, ಎನ್‌ಡಿಆರ್‌ಎಫ್ ಮಾರ್ಗಸೂಚಿಗಿಂತ ದುಪ್ಪಟ್ಟು ಪರಿಹಾರ ನೀಡಿದ್ದೆವು, ನಂತರ ಕೇಂದ್ರದ ನೆರವು ಖಜಾನೆಗೆ ಬಂತು.



ಕೊಳವೆ ಬಾವಿ ಕೊರೆಸಲು, ಜಾನುವಾರುಗಳಿಗೆ ಮೇವು ಖರೀದಿಸಲು ಆದೇಶ ಹೊರಡಿಸಿಲ್ಲ, ಕೊಳವೆ ಬಾವಿಗಳಿಗೆ ಆದ್ಯತೆ ಮೇರೆಗೆ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. ಎಲ್ಲದಕ್ಕೂ ಲಂಚ ಕೊಡಬೇಕು, ಇಲ್ಲದಿದ್ದರೆ ಯಾವುದೇ ಕೆಲಸ ಆಗುತ್ತಿಲ್ಲ ಎಂದು ರೈತರು ದೂರು ನೀಡುತ್ತಿದ್ದಾರೆ ಎಂದರು. ಬರ ಕಾಮಗಾರಿಗಳಿಗೆ ಹಣದ ಕೊರತೆ ಇಲ್ಲ ಎನ್ನುತ್ತಾರೆ, ನಿಜವೇ ಆಗಿದ್ದಲ್ಲಿ ತಕ್ಷಣ ಹಣ ಬಿಡುಗಡೆ ಮಾಡಲಿ. ಮುಖ್ಯಮಂತ್ರಿಯವರ ಜನತಾದರ್ಶನ ಕಾರ್ಯ 'ಬೋಗಸ್ ದರ್ಶನ' ಎಂದು ಲೇವಡಿ ಮಾಡಿದ ಅವರು, ಕೆಲಸ ಮಾಡದ ಮಂತ್ರಿಗಳನ್ನು ಕರೆಯಿಸಿ ಮೊದಲು ಅವರ ದರ್ಶನ ಮಾಡಬೇಕಿತ್ತು ಎಂದು ಲೇವಡಿ ಮಾಡಿದರು.

ಸೀಮಿತ ಸಂಖ್ಯೆ ಜನರ ಅಹವಾಲು ಕೇಳಿದರೆ ಏನು ಪ್ರಯೋಜನ, ದಿಢೀರ್ ಜನತಾದರ್ಶನ ಮಾಡುತ್ತಿದ್ದಾರೆ, ದೀರ್ಘ ಕಾಲದ ನಿದ್ದೆಯಿಂದ ಈಗ ಎದ್ದಿದ್ದಾರೆ. ಸಂಪುಟದ ಸಚಿವರು ತೆಲಂಗಾಣ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳಿಂದ ಕರ್ನಾಟಕದಲ್ಲಿ ಕ್ರಾಂತಿ ಆಗಿದೆ ಎಂದು ಬುರುಡೆ ಭಾಷಣ ಬಿಗಿಯುತ್ತಿದ್ದಾರೆ. ಅಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಡಿದಿರುವ ಬರಗಾಲ ನಿವಾರಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲಾ ಸಚಿವರನ್ನು ಅಲ್ಲಿಗೆ ನಿಯೋಜಿಸಿದ್ದಾರೆ. ಇಲ್ಲಿ ಜನ ತತ್ತರಿಸುತ್ತಿದ್ದರೂ ಕೇಳುವವರು ದಿಕ್ಕಿಲ್ಲ ಎಂದು ಕಿಡಿಕಾರಿದರು.

ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ

ಮೈಸೂರು, ನ.27– ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಅವರಿಗೆ 'ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿ' ನೀಡಿ, ಗೌರವಿಸಲಾಗುವುದು.



ಚಂದನ್‌ಗೌಡ

ಚಂದನ್‌ಗೌಡ ಅವರ ಮಣ್ಣಿನ ಸೇವೆ ಹಾಗೂ ಸಮಾಜ ಸೇವೆಯನ್ನು ಗುರುತಿಸಿ ಅವರನ್ನು ಈ ಬಾರಿಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಮೈಸೂರಿನ ಕಲಾಮಂದಿರದಲ್ಲಿ ನ.29ರಂದು ನಡೆಯಲಿರುವ 'ಕನ್ನಡಾಂಬೆ ಹಬ್ಬ'ದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವೇದಿಕೆಯ ಪ್ರಕಟಣೆ ತಿಳಿಸಿದೆ.

ಗೂಡ್ಸ್ ರೈಲು ಡಿಕ್ಕಿ: ಮರಿ ಸೇರಿ ಮೂರು ಆನೆಗಳ ಸಾವು

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಬಕ್ಸಾ ಹುಲಿ ಸಂರಕ್ಷಿತ ಅರಣ್ಯದಲ್ಲಿ ಗೂಡ್ಸ್ ರೈಲು ಡಿಕ್ಕಿ ಹೊಡೆದ ಪರಿಣಾಮ 3 ಆನೆಗಳು ಸಾವನ್ನಪ್ಪಿವೆ. ರಾಜಭಟ್ಖಾವಾ ಮತ್ತು ಕಲ್ಚಿನಿ ರೈಲು ನಿಲ್ದಾಣಗಳ ನಡುವಿನ ಶಿಖಾರಿ ಗೇಟ್ ಬಳಿ ಬೆಳಗ್ಗೆ 7 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಒಂದು ಮರಿ ಮತ್ತು ಎರಡು ವಯಸ್ಕ ಆನೆಗಳು ಸಾವನ್ನಪ್ಪಿವೆ. ಅಲಿಪುರ್ದೌರ್ ಜಿಲ್ಲೆಯ ಹುಲಿ ಸಂರಕ್ಷಿತ ಪ್ರದೇಶದ ಪಶ್ಚಿಮ ರಾಜಭಟ್ಖಾವಾ ಶ್ರೇಣಿಯಲ್ಲಿ ಸಂಭವಿಸಿದ ಈ ಘಟನೆಯು ಭಾರತದಲ್ಲಿ ರೈಲು ಡಿಕ್ಕಿಯಿಂದ ಆನೆಗಳು ಸಾವನ್ನಪ್ಪುವುದು ಸಾಮಾನ್ಯ ಘಟನೆಗಳಲ್ಲಿ ಒಂದಾಗಿದೆ. ಈ ವರ್ಷದ ಆರಂಭದಲ್ಲಿ, ಪಶ್ಚಿಮ ಬಂಗಾಳದ ಅಲಿಪುರ್ದಾರ್ ಜಿಲ್ಲೆಯ ಚಪ್ರಮರಿ ಮೀಸಲು ಅರಣ್ಯದೊಳಗೆ ರೈಲು ಹಳಿ ದಾಟಲು ಪ್ರಯತ್ನಿಸುತ್ತಿದ್ದ ಗರ್ಭಿಣಿ ಆನೆ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದಿತ್ತು. ಭಾರತದಲ್ಲಿ ಪ್ರತಿ ವರ್ಷ ಸರಾಸರಿ 20 ಆನೆಗಳು ರೈಲು ಡಿಕ್ಕಿಯಿಂದ ಸಾಯುತ್ತವೆ ಎಂದು ಸರ್ಕಾರದ ಅಂಕಿಅಂಶಗಳು ತೋರಿಸುತ್ತವೆ. ರೈಲು ಅಪಘಾತಗಳು ಪಶ್ಚಿಮ ಬಂಗಾಳದಲ್ಲಿ ಅಸ್ವಾಭಾವಿಕ ಆನೆಗಳ ಸಾವಿಗೆ ಒಂದು ಕಾರಣವಾಗಿದೆ ಮತ್ತು ಅದನ್ನು ತಡೆಯಲು ಸರ್ಕಾರವು ಪ್ರಯತ್ನಿಸುತ್ತಿದೆ.



ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಕಾರ್ಯಗಳನ್ನು ಕಾಂಗ್ರೆಸ್ ಮುಖಂಡ ಜೆ.ಜೆ. ಆನಂದ, ಸೋಮವಾರ ಮೈಸೂರು ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಬರುವ ಗೋಕುಲ್‌ದಾಸ್ ಗಾರ್ಮೆಂಟ್ಸ್ ಇಂಡಸ್ಟ್ರಿ ಕಾರ್ಮಿಕ ಮಹಿಳೆಯರಿಗೆ ಮನವರಿಕೆ ಮಾಡಿಕೊಟ್ಟರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಮನೋಹರ, ಪ್ರೇಮ ಹರೀಶ್ ಇತರರು ಉಪಸ್ಥಿತರಿದ್ದರು.

ಭಾರತೀಯರಿಗೆ ಡಿ.1ರಿಂದ ಮಲೇಷ್ಯಾ ವೀಸಾ ಮುಕ್ತ ಪ್ರವೇಶ!

ನವದೆಹಲಿ: ಭಾರತ ಹಾಗೂ ಚೀನಾದ ಪ್ರಜೆಗಳಿಗೆ 30 ದಿನಗಳ ಕಾಲ ವೀಸಾ ಮುಕ್ತ ಪ್ರವೇಶ ನೀಡುವುದಾಗಿ ಮಲೇಷ್ಯಾ ಘೋಷಿಸಿದೆ. ಡಿ.1ರಿಂದ ಈ ವಿನಾಯ್ತಿ ಜಾರಿಗೊಳ್ಳಲಿದೆ ಎಂದು ಅಲ್ಲಿನ ಪ್ರಧಾನಿ ಅನ್ವರ್ ಇಬ್ರಾಹಿಮ್ ಘೋಷಣೆ ಮಾಡಿದ್ದಾರೆ. ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಥಾಯ್ಲೆಂಡ್ ಹಾಗೂ ಶ್ರೀಲಂಕಾಗಳ ಸಾಲಿನಲ್ಲಿ ಮಲೇಷ್ಯಾ ಸಹ ಹೆಜ್ಜೆ ಇಟ್ಟಿದೆ. ಟರ್ಕಿ, ಜೋರ್ಡಾನ್ ಸೇರಿದಂತೆ ಪಶ್ಚಿಮ ಏಷ್ಯಾದ ರಾಷ್ಟ್ರಗಳು ಗಲ್ಫ್ ರಾಷ್ಟ್ರಗಳ ಜೊತೆಗೆ ಹೆಚ್ಚುವರಿಯಾಗಿ ಈ ವಿನಾಯ್ತಿ ನೀಡಲಾಗುತ್ತಿದೆ. ವೀಸಾ ವಿನಾಯಿತಿಯು ಉನ್ನತ ಭದ್ರತಾ ಸ್ಕ್ರೀನಿಂಗ್‌ಗೆ ಒಳಪಟ್ಟಿರುತ್ತದೆ ಎಂದು ದೇಶದ ಹಣಕಾಸು ಸಚಿವರೂ ಆಗಿರುವ ಇಬ್ರಾಹಿಂ ಹೇಳಿರುವುದನ್ನು ಬರ್ನಾಮಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ಮಲೇಷ್ಯಾಕ್ಕೆ ಎಲ್ಲಾ ಪ್ರವಾಸಿಗರು ಮತ್ತು ಸಂದರ್ಶಕರಿಗೆ ಪ್ರಾಥಮಿಕ ಪ್ರದರ್ಶನಗಳನ್ನು ನಡೆಸಲಾಗುವುದು. ಭದ್ರತೆಯು ಬೇರೆ ವಿಷಯವಾಗಿದೆ. ಕ್ರಿಮಿನಲ್ ದಾಖಲೆಗಳು ಅಥವಾ ಭಯೋತ್ಪಾದನೆಯ ಅಪಾಯವಿದ್ದರೆ, ಅವರನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ ಎಂದು ಪ್ರಧಾನಿ ಹೇಳಿದ್ದಾರೆ.

ನಾಳೆ ಸಂವಹನ ಸಿರಿ ಪ್ರಶಸ್ತಿ ಪ್ರದಾನ; ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಮೈಸೂರು,ನ.27–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸಂವಹನ ಟ್ರಸ್ಟ್, ಸಂವಹನ ಮತ್ತು ಮೈಸೂರು ಕನ್ನಡ ಸಾಹಿತ್ಯ ಕೂಟದ ಸಂಯುಕ್ತಾಶ್ರಯದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ವಿವಿಧ ಲೇಖಕರ ಹತ್ತು ಕೃತಿಗಳ ಲೋಕಾರ್ಪಣೆ, ಹಿರಿಯ ಸಾಹಿತಿಗಳಿಗೆ ಸನ್ಮಾನ, ಸಂವಹನ ಸಿರಿ ಪ್ರಶಸ್ತಿ ಪ್ರದಾನ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ನ.29 (ಬುಧವಾರ) ಸಂಜೆ 5 ಗಂಟೆಗೆ ಮೈಸೂರು ವಿಜಯನಗರ ಮೊದಲ ಹಂತದಲ್ಲಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಲಾಗಿದೆ.


ಕೃತಿಯನ್ನು ಬೆಂಗಳೂರು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ.ರಾಮಚಂದ್ರೇಗೌಡ ಬಿಡುಗಡೆ ಮಾಡಲಿದ್ದಾರೆ. ಕೃತಿ ಕುರಿತು ಮೈಸೂರು ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ, ಮೈಸೂರು ಜೆಎಸ್‌ಎಸ್ ಕಾಲೇಜು ವಿಶ್ರಾಂತ ಪ್ರಾಧ್ಯಾಪಕಿ ಡಾ.ಹೆಚ್.ಟಿ.ಶೈಲಜಾ ಮಾತನಾಡಲಿದ್ದಾರೆ. ಮೈಸೂರು ಕನ್ನಡ ಸಾಹಿತ್ಯ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅಭಿನಂದಿತರ ಕುರಿತು ಮಾತನಾಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ ಉಪಸ್ಥಿತರಿರುವರು. ಇದೇ ವೇಳೆ ಅಂತಾರಾಷ್ಟ್ರೀಯ ಜನಪದ ಗಾಯಕ, ರಾಷ್ಟ್ರ ಪ್ರಶಸ್ತಿ ವಿಜೇತ ಅಮ್ಮ ರಾಮಚಂದ್ರರಿಂದ ಕನ್ನಡ ಗೀತ ಗಾಯನವಿದೆ.

ಏಳು ಮಹಾ ಕಾವ್ಯಗಳ ಕರ್ತೃ ಡಾ.ಲತಾ ರಾಜಶೇಖರ್ ಅಭಿನಂದಿತರು. ಡಾ. ಎಂ. ಮಹೇಂದ್ರಮೂರ್ತಿ ದೇವನೂರು ಅವರಿಗೆ 'ಸಂವಹನ ಸಿರಿ' ಯುವ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಸಿ.ನಾಗಣ್ಣ (ಸಾಹಿತ್ಯ), ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ (ಸಂಕೀರ್ಣ), ಜವರಪ್ಪ (ಮಾಧ್ಯಮ) ಅವರನ್ನು ಅಭಿನಂದಿಸಲಾಗುವುದು. ಅಲ್ಲದೆ ಈ ಸಂದರ್ಭದಲ್ಲಿ ಸಿಪಿಕೆಯವರ 'ಪರಿಗ್ರಹಣ', ಡಾ.ಚಂದ್ರಶೇಖರಯ್ಯರ 'ಕಾರಮಕ್ಕ', ಡಾ. ಎಂ.ರಂಗಸ್ವಾಮಿ ಅವರ 'ಚಾಮುಂಡರಾಯನ ಲೋಕೋಪಕಾರ: ಒಂದು ಅಧ್ಯಯನ', ಪ್ರೊ.ವೈ.ಎಸ್.ಗೌರಮ್ಮರ 'ದಾರ್ಶನಿಕ ಕುವೆಂಪು', ಎಚ್.ಆರ್. ಲೀಲಾವತಿ ಅವರ 'ವಚನ ಸಿರಿ', ಸ.ಚ. ಮಹದೇವ ನಾಯಕ್‌ರ 'ಮರಿತಿಮ್ಮ', ಜಿ.ಮುರಿಗೆಪ್ಪಗೌಡರ 'ಕರ್ಣ ರಸಾಯನ', ಆರ್.ಸಿ ಅನುರಾಧರ 'ನರ ರಾಕ್ಷಸರು', ಪ್ರಸನ್ನಮೂರ್ತಿ ಗುರುವಿನಪುರ ಅವರ 'ತೆಂಕಣ ಸೀಮೆಯ ಕತೆಗಳು' ಮತ್ತು ಕೆ.ಪಿ. ಕೆಂಡಗಣ್ಣಪ್ಪರ 'ಸಂಸಾರ ಶೃಂಗಾರ ಜೀವನ ನುಡಿ ಹನಿಗಳು' ಕೃತಿಗಳನ್ನು ಬಿಡುಗಡೆ ಮಾಡಲಾಗುವುದು. ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಯುಕ್ತ ಎಲ್ಲಾ ಪುಸ್ತಕಗಳಿಗೆ ಶೇಕಡಾ 50 ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು.

ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

ಮೈಸೂರು,ನ.27–ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ನ.29ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕ ಜಿ.ಟಿ. ದೇವೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ ಅಧ್ಯಕ್ಷತೆ ವಹಿಸುವರು. ನಿನಾದ ಮ್ಯೂಸಿಕಲ್ ಟ್ರಸ್ಟ್ ಹಾಗೂ ಸಂಗೀತ ನಿರ್ದೇಶಕ ಪ್ರಸನ್ನಕುಮಾರ್, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಬಿ. ಹುಚಗೊಂಡರ್, ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರೊ. ಪುಟ್ಟರಾಜ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.11.2023 ಮಂಗಳವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ರಾಮಕೃಷ್ಣ ದುಂಡಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಗೀತಾ ವೈಪುಟ್ಟಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಬಸವಣ್ಣನವರ ವಚನಗಳು, 12.45 ಭಾವ ಸಾಮರಸ್ಯಕ್ಕೆ ಭಾಷೆ, ಮಾತನಾಡುತ್ತಾರೆ ಡಾ.ಬಿ.ವಿ.ವಸಂತಕುಮಾರ್, 1.20 ಭಾವಗೀತೆಗಳು–ಸಿ.ವಿಶ್ವನಾಥ್, 3.00 ಪ್ರೊ.ಆರ್.ಎನ್.ದೊರೆಸ್ವಾಮಿ–ವೀಣಾವಾದನ, 4.00 ಕಥಾ ಕಾಲಕ್ಷೇಪ–ಭಕ್ತ ಮಯೂರಧ್ವಜ, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ನ್ಯಾನೋ ರಸಗೊಬ್ಬರದ ಬಳಕೆ ಕುರಿತು ಮೈಸೂರಿನ IFFCO ಸಂಸ್ಥೆಯ ಕ್ಷೇತ್ರ ಅಧಿಕಾರಿ ಕೆ.ಎಸ್. ಮನೋಜ್ ಅವರೊಂದಿಗೆ ಸಂದರ್ಶನ, 9.30 ಮೈಸೂರು ಚಂದನ್ ಕುಮಾರ್– ವೇಣುವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಸುಮಿತ್ರಾ ವಿಶ್ವನಾಥ್, ವ್ಯಾಖ್ಯಾನ– ಪರಮೇಶ್ವರ್ ವಿ. ಹೆಗ್ಡೆ, 10.30 ಸವಿನೆನಪು

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀವಾಣಿ ವಿಲಾಸ ಅರಸು ಮಹಿಳಾ ಪದವಿಪೂರ್ವ ಮತ್ತು ಪದವಿ ಕಾಲೇಜು:** ಕನ್ನಡ ಹಬ್ಬ, ಮುಖ್ಯ ಅತಿಥಿಗಳು : ಕನ್ನಡ ಉಪನ್ಯಾಸಕರಾದ ಶ್ರೀಮತಿ ಕೆ. ಮಾಲತಿ, ಅಧ್ಯಕ್ಷತೆ: ಟ್ರಸ್ಟ್ ಉಪಾಧ್ಯಕ್ಷೆ ಶ್ರೀಮತಿ ಭಾರತಿ ಶ್ರೀಧರರಾಜ್ ಅರಸ್, ಉಪಸ್ಥಿತರು : ಕೆ.ಎಸ್. ತ್ಯಾಗರಾಜು, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಉಪನ್ಯಾಸ, ಪ್ರಾಧ್ಯಾಪಕ ಪ್ರೊ. ಎಸ್. ಚಂದ್ರಶೇಖರ್ ಅವರಿಂದ ಭಾರತದ ಸಂವಿಧಾನ ಮತ್ತು ಸಮಾಜ ಕುರಿತು ಉಪನ್ಯಾಸ, ಅಧ್ಯಕ್ಷತೆ : ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಎಸ್. ಯಶೋಧ, ಸ್ಥಳ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಉಪಾಧ್ಯಕ್ಷ ಸಿ.ಆರ್. ನಾಗರಾಜ್, ಮುಖ್ಯ ಅಭ್ಯಾಗತರು : ವಿದ್ಯಾ ವಾಚಸ್ಪತಿ ವಿದ್ವಾನ್ ಉಮಾಕಾಂತ ಭಟ್ಟ, ಸ್ಥಳ: ಟಿ.ಪಿ.ಕೈಲಾಸಂ ರಂಗ ಮಂಟಪ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ :** ಡಾ. ಎಸ್.ಜಿ. ರಾಮದಾಸ ರೆಡ್ಡಿ ಅವರಿಗೆ ಗುರುವಂದನಾ ಕಾರ್ಯಕ್ರಮ, ಪೌರಕಾರ್ಮಿಕರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎನ್. ರಾಗಿಣಿ, ಪ್ರಾಸ್ತಾವಿಕ ನುಡಿ : ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಎಂ.ಎಲ್. ಮಂಜುಳ, ಉಪಸ್ಥಿತರು ; ಪ್ರೊ. ಬಿ. ಚಂದ್ರಶೇಖರ್, ಡಾ. ಈ.ಸಿ. ನಿಂಗರಾಜ್‌ಗೌಡ, ಜನಪದ ಗಾಯಕ ಅಮ್ಮ ರಾಮಚಂದ್ರ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘ :** ಕನ್ನಡ ರಾಜ್ಯೋತ್ಸವ ಸಮಾರಂಭ, ಉದ್ಘಾಟನೆ : ಸಾಹಿತಿ ಸತೀಶ್ ಜವರೇಗೌಡ, ಅಧ್ಯಕ್ಷತೆ: ಬಿ.ಎಸ್. ಪ್ರಶಾಂತ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ನಾಗರಾಜು, ಅತಿಥಿಗಳು : ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಕೆ. ಸವಿತಾ, ರಾಜೇಶ್ ಕೆ. ಖಾದರ್, ಶ್ರೀಮತಿ ಕೆ. ದೀವಕ, ಶಫಿಉದ್ದೀನ್ ಖಾನ್, ಜಯಪ್ರಕಾಶ್‌ರಾಜ್ ಅರಸ್, ಸಿ.ಎ. ಜಯಕುಮಾರ್, ಮಹೇಂದ್ರ ಸಾಲಿಯಾನ, ಗಿರೀಶ್, ಸ್ಥಳ: ಕಿರು ರಂಗಮಂದಿರ, ಕುಕ್ಕರಹಳ್ಳಿ ಕೆರೆ ಹತ್ತಿರ, ಬೆಳಗ್ಗೆ 11ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು :** ರಾಷ್ಟ್ರೀಯ ಐಕ್ಯತಾ ದಿನದ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಭಾಷಣಕಾರರು : ವಿಶ್ರಾಂತ ಪ್ರಾಂಶುಪಾಲ ಡಾ. ಕೆ. ಕಾಳಚನ್ನೇಗೌಡ, ಮುಖ್ಯ ಅತಿಥಿಗಳು : ಕುಬೇರ್ ಪಿ. ಗೌಡ, ಶ್ರೀಮತಿ ಎಸ್. ಪ್ರಭಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಭಾರತೀಯ ಸ್ಟೇಟ್ ಬ್ಯಾಂಕ್:** ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಮೈಸೂರು ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ, ಉಪಸ್ಥಿತರು: ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಜಿಪಂ ಮುಖ್ಯ ಸಭಾಂಗಣ, ಮಧ್ಯಾಹ್ನ 12ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ :** ರಂಗ ತರಬೇತಿ ಶಿಬಿರ, ಉದ್ಘಾಟನೆ : ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಚಿಂತಕ ಡಾ. ದಿನಮಣಿ ಬಿ.ಎಸ್., ನಿರ್ದೇಶಕ ಕೃಷ್ಣ ಜನಮನ, ಸ್ಥಳ: ಕಲಾಮಂದಿರದ ರಂಗ ತಾಲೀಮು ಕೊಠಡಿ, ಸಂಜೆ 4.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು :** ಕನ್ನಡ ರಾಜ್ಯೋತ್ಸವ ಸಮಾರಂಭ, ಉದ್ಘಾಟನೆ : ಪ್ರಾಧ್ಯಾಪಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಉಪಸ್ಥಿತರು : ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಕೆ. ಸೌಭಾಗ್ಯವತಿ, ಸ್ಥಳ: ಕೊಠಡಿ ಸಂಖ್ಯೆ 21, ವಿ.ವಿ. ಸಂಜೆ ಕಾಲೇಜು, ಸಂಜೆ 6ಕ್ಕೆ.

■ **ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ :** ಕನ್ನಡ ರಾಜ್ಯೋತ್ಸವ ಸಮಾರಂಭ, ಉಪಸ್ಥಿತರು: ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಸ್ಥಳ: ಕಚೇರಿ ಆವರಣ, ಡಿ. ದೇವರಾಜ ಅರಸು ರಸ್ತೆ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಕನಕದಾಸ ಜಯಂತಿ ಹಿನ್ನೆಲೆ

ಕನಕ ರಥಕ್ಕೆ ಮಾಜಿ ಶಾಸಕ ಎಂಕೆಎಸ್ ಚಾಲನೆ



ಮೈಸೂರು, ನ.27(ಎಸ್‌ಬಿಡಿ)– ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ 'ಕನಕ ರಥ'ಕ್ಕೆ ಚಾಲನೆ ನೀಡಲಾಯಿತು.

ನಗರದ ಪುರಭವನ ಆವರಣದಲ್ಲಿ ಕನಕದಾಸರ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಸೋಮವಾರ 'ಕನಕ ರಥ'ಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಚಾರಕ್ಕೆ ಹಸಿರು ನಿಶಾನೆ ತೋರಿದರು.

ಈ ವೇಳೆ ಮಾತನಾಡಿದ ಅವರು, ಸಿದ್ಧಾರ್ಥನಗರದ ಕನಕಭವನದಲ್ಲಿ ನ.30ರಂದು ಕನಕದಾಸರ ಜಯಂತ್ಯುತ್ಸವ ಆಯೋಜಿಸಲಾಗಿದ್ದು, ಸ್ವಾಮೀಜಿಗಳು, ಮುಖ್ಯಮಂತ್ರಿಗಳು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸುವುದರ ಜೊತೆಗೆ ಸಾಧಕರನ್ನು ಗೌರವಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರಿನಲ್ಲಿ ಈ ಬಾರಿ ಕನಕದಾಸರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಮೂರು ಬಾರಿ ಪೂರ್ವಭಾವಿ ಸಭೆ ನಡೆಸಿ, ಹಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ದಾಸಶ್ರೇಷ್ಠ ಕನಕದಾಸರ ಆಚಾರ–ವಿಚಾರ, ಪರಂಪರೆಯನ್ನು ಸಾರುವ ಹಲವು ಸ್ತಬ್ಧಚಿತ್ರಗಳು ಹಾಗೂ 25ಕ್ಕೂ ಹೆಚ್ಚು ಸಾಂಸ್ಕೃತಿಕ ಕಲಾತಂಡಗಳನ್ನೊಳಗೊಂಡ ಮೆರವಣಿಗೆ ನಡೆಸಲು ನಿರ್ಧರಿಸಲಾಗಿದೆ ಎಂದರು.


ಭಕ್ತ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ನಾಡಿನಲ್ಲಿ ಜ್ಞಾನದ ಜ್ಯೋತಿ ಹಚ್ಚಿದ್ದರು. ಎಲ್ಲರೂ ಕನಕದಾಸರ ಸಂದೇಶವನ್ನು ಅರ್ಥೈಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ 'ಕನಕ ರಥ'ದ ಮೂಲಕ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸಾರ್ವಜನಿಕರನ್ನು ಕನಕದಾಸರ ಜಯಂತ್ಯುತ್ಸವಕ್ಕೆ ಆಹ್ವಾನಿಸಲಾಗುತ್ತಿದೆ. ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಸೇರಿದಂತೆ ಎಲ್ಲರೂ 'ಕನಕ ರಥ'ವನ್ನು ಸಂಭ್ರಮದಿಂದ ಬರಮಾಡಿಕೊಂಡು, ಕಾರ್ಯಕ್ರಮದಲ್ಲಿ ಹೆಚ್ಚು ಜನ ಭಾಗವಹಿಸಲು ಪ್ರೇರೇಪಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ಬ್ಯಾಂಕ್ ಎಂ.ಪುಟ್ಟಸ್ವಾಮಿ, ಸಂಚಾಲಕ ಎಂ.ಶಿವಣ್ಣ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಬಿ.ಎಂ.ರಾಮು, ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ನಾಡನಹಳ್ಳಿ ರವಿ, ಮಹದೇವೇಗೌಡ, ವಿಶ್ವ ಕಲಾವಿದರಾದ ಶೇಷ, ಗೋಲ್ಡನ್ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ನಗರ ಪೊಲೀಸ್ ಸರಹದ್ದು ವಿಸ್ತರಿಸಲು ಚಿಂತನೆ

●ಗಡಿ ನಕ್ಷೆಯೊಂದಿಗೆ ಪ್ರಸ್ತಾವನೆ ಸಿದ್ಧಪಡಿಸಲು ತಯಾರಿ ●ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳ ಸಲಹೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ●ಕಾನೂನು-ಸುವ್ಯವಸ್ಥೆ, ಅಪರಾಧ ತಡೆ, ಪತ್ತೆ ಕಾರ್ಯ ಪ್ರಗತಿಗೆ ವಿನೂತನ ಪ್ರಯೋಗ



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ.



ಮೈಸೂರು ನಗರ ಪೊಲೀಸ್ ಘಟಕದ ಪ್ರಸ್ತುತ ಎಲ್ಲೆ ನಕ್ಷೆ.

ಮೈಸೂರು,ನ.27(ಆರ್‌ಕೆ)– ಮೈಸೂರು ನಗರ ಪೊಲೀಸ್ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಲು ಪೊಲೀಸ್ ಕಮಿಷ್ನರೇಟ್ ಆಡಳಿತ ಚಿಂತನೆ ನಡೆಸಿದೆ.

ಈ ಕುರಿತಂತೆ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಪೂರ್ವಭಾವಿಯಾಗಿ ಚರ್ಚಿಸಿದ್ದು, ಪರಿಷ್ಕೃತ ಗಡಿ ನಕ್ಷೆಯೊಂದಿಗೆ ಪ್ರಸ್ತಾವನೆ ಸಿದ್ಧಪಡಿಸಲು ಪ್ರಕ್ರಿಯೆ ಆರಂಭಿಸಿದ್ದಾರೆ. ಕಳೆದ 15 ವರ್ಷದಿಂದೀಚೆಗೆ ಮೈಸೂರು ನಗರ ವಿಸ್ತಾರವಾಗಿ ಬೆಳೆದಿದ್ದು, ಕೆಲ ಗ್ರಾಮಗಳಿಗೆ ಹೊಂದಿಕೊಂಡಂತೆ ವಸತಿ ಬಡಾವಣೆಗಳು, ವಾಣಿಜ್ಯ ಕೇಂದ್ರ ಮತ್ತು ಕೈಗಾರಿಕೆಗಳು ಅಭಿವೃದ್ಧಿಗೊಂಡಿರುವುದರಿಂದ ನಗರ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿಗೆ ಅವುಗಳನ್ನು ಸೇರಿಸಿಕೊಂಡು ಕಾನೂನು–ಸುವ್ಯವಸ್ಥೆ, ಅಪರಾಧ ಪ್ರಕರಣಗಳ ನಿಯಂತ್ರಣ ಮತ್ತು ತಡೆಯಲು ಈ ಪ್ರಯೋಗಕ್ಕೆ ನಗರ ಪೊಲೀಸ್ ಘಟಕವು ಮುಂದಾಗಿದೆ.

ಮೈಸೂರು ಜಿಲ್ಲಾ ಪೊಲೀಸ್ ಘಟಕದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ, ಬನ್ನೂರು ಠಾಣೆ, ವರುಣ ಠಾಣೆ, ಕಡಕೊಳ ಔಟ್‌ಪೋಸ್ಟ್ ಠಾಣೆ, ಜಯಪುರ, ಇಲವಾಲ, ಕೆಆರ್‌ಎಸ್ ಹಾಗೂ ಶ್ರೀರಂಗಪಟ್ಟಣ ಠಾಣಾ ವ್ಯಾಪ್ತಿಯ ಪ್ರದೇಶಗಳೀಗ ಮೈಸೂರು ನಗರಕ್ಕೆ ಹೊಂದಿಕೊಂಡಿದ್ದು, ತೀವ್ರ ಜನ, ವಾಹನ ಸಂದಣಿಯಿಂದ ಕೂಡಿದೆ.

ನಗರ ಪೊಲೀಸ್ ಕಾರ್ಯವ್ಯಾಪ್ತಿಯಲ್ಲಿ ಯಾವುದೇ ಗಲಾಟೆ, ಘರ್ಷಣೆ, ಕೊಲೆ, ಸುಲಿಗೆ, ಅಪರಾಧ, ಅಪಘಾತಗಳು ಸಂಭವಿಸಿದಲ್ಲಿ ತಕ್ಷಣವೇ ಸ್ಥಳಕ್ಕೆ ಹೋಗಲು ನಗರ ಪೊಲೀಸರಿಗೆ ವಾಹನ, ಸಿಬ್ಬಂದಿಗಳ ಲಭ್ಯತೆ ಇದೆ. ಜೊತೆಗೆ ವ್ಯಾಪ್ತಿ ಬಗ್ಗೆ ಗೊಂದಲ ಉಂಟಾಗಿ ಕ್ಷಿಪ್ರ ಕಾರ್ಯಾಚರಣೆಗೆ ತೊಂದರೆಯಾಗುತ್ತದೆ.

ಈ ಹಿಂದೆ ಗ್ರಾಮಾಂತರ ಪ್ರದೇಶದಂತಿದ್ದ ಹಳ್ಳಿಗಳು ಅಭಿವೃದ್ಧಿಗೊಂಡಿದ್ದು, ವಾಣಿಜ್ಯ ಚಟುವಟಿಕೆಗಳು ವ್ಯಾಪಕವಾಗಿದೆ. ಆದರೆ ಅವು ಜಿಲ್ಲಾ ಪೊಲೀಸ್ ಘಟಕದ ಠಾಣಾ ವ್ಯಾಪ್ತಿಯಲ್ಲಿವೆ. ಆ ಪ್ರದೇಶದಲ್ಲಿ ಅಪರಾಧ ಪ್ರಕರಣಗಳಾದರೆ, ಅಪಘಾತ ಸಂಭವಿಸಿದರೆ ಅಥವಾ ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾಗುವ ಘಟನೆಗಳಾದಲ್ಲಿ ತಕ್ಷಣ ಸ್ಥಳಕ್ಕೆ ತೆರಳಲು ಜಿಲ್ಲಾ ಗ್ರಾಮಾಂತರ ಠಾಣೆಗಳಲ್ಲಿ ಸಿಬ್ಬಂದಿ, ವಾಹನ, ಇನ್ನಿತರ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿರುವುದಿಲ್ಲ.

ಮೈಸೂರು ನಗರ ಪೊಲೀಸ್ ಠಾಣೆಗಳಲ್ಲಿ ಹೆಚ್ಚಿನ ಸಂಖ್ಯೆಯ ಅಧಿಕಾರಿಗಳು, ಸಿಬ್ಬಂದಿ, ವಾಹನಗಳು ಹಾಗೂ ಅತ್ಯಾಧುನಿಕ ಸಲಕರಣೆಗಳಿರುವುದರಿಂದ ಕಾನೂನು–ಸುವ್ಯವಸ್ಥೆ ಸಮಸ್ಯೆಯನ್ನು ಶೀಘ್ರ ಇತ್ಯರ್ಥಗೊಳಿಸಲು ಸಾಧ್ಯವಾಗುತ್ತದೆಯಾದ್ದರಿಂದ ನಗರ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲು ಅನುಕೂಲವಾಗುತ್ತದೆ.

40–50 ವರ್ಷಗಳ ಹಿಂದೆ ನಿಗದಿಗೊಳಿಸಿದ್ದ ಸಿಟಿ ಪೊಲೀಸ್ ಆಯುಕ್ತರ ಸರಹದ್ದಿಗಿಂತ ಈಗ ಹೊಸ ಹೊಸ ಬಡಾವಣೆಗಳು, ಕೈಗಾರಿಕೆ, ವಾಣಿಜ್ಯ ಉದ್ಯಮಗಳು ಅಭಿವೃದ್ಧಿಯಾಗಿವೆ. ಆದರೆ, ಆ ಪ್ರದೇಶಗಳು ಗ್ರಾಮಾಂತರ ಜಿಲ್ಲಾ ಪೊಲೀಸ್ ಘಟಕದ ಸರಹದ್ದಿಗೆ ಬರುತ್ತಿವೆ. ಪ್ರಸ್ತುತ ಜಯಪುರ, ಇಲವಾಲ, ಶ್ರೀರಂಗಪಟ್ಟಣ, ಬನ್ನೂರು, ವರುಣ, ಕಡಕೊಳ ಪೊಲೀಸ್ ಠಾಣಾ ವ್ಯಾಪ್ತಿಯ ಕೆಲ ಭಾಗ ಮೈಸೂರು ನಗರಕ್ಕೆ ಹೊಂದಿಕೊಂಡಂತಿವೆ.

ಇದೀಗ ಮೈಸೂರು ನಗರ ಕಿಲೋಮೀಟರ್‌ಗಟ್ಟಲೆ ಬೆಳೆದಿದ್ದು, ಅಪರಾಧ, ಅಪಘಾತಗಳು, ಘರ್ಷಣೆಗಳು ಆಗಿಂದಾಗ್ಗೆ ಸಂಭವಿಸುತ್ತಿರುವುದರಿಂದ ಜಿಲ್ಲಾ ಪೊಲೀಸ್ ಘಟಕದ ಠಾಣೆಗಳಿಗೆ ನಿರ್ವಹಣೆ ಕಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ಅವುಗಳನ್ನು ನಗರ ಪೊಲೀಸ್ ವ್ಯಾಪ್ತಿಗೆ ಸೇರಿಸಲು ಡಿಪಿಆರ್ ತಯಾರಿಸಲಾಗುತ್ತಿದೆ.

ರಿಂಗ್ ರೋಡ್ ಹೊರಗಿರುವ ಮೈಸೂರು ನಗರದ ಸುತ್ತಲಿನ ಹೊಸ ಬಡಾವಣೆಗಳು, ಕೆಲ ಗ್ರಾಮಗಳು, ಕೈಗಾರಿಕಾ ಪ್ರದೇಶಗಳನ್ನು ಸೇರಿಸಿಕೊಂಡು ಸಿಟಿ ಪೊಲೀಸ್ ಸರಹದ್ದನ್ನು ವಿಸ್ತರಿಸಲು ಪ್ರಯತ್ನಿಸಲಾಗಿದೆ. ಅದರಂತೆ ರೂಪಾನಗರ, ಎಸ್‌ಬಿಎಂ ಲೇಔಟ್, ಮಂಡಕಳ್ಳಿ ವಿಮಾನ ನಿಲ್ದಾಣ, ಮರಸೆ ಗ್ರಾಮ, ದಡದಹಳ್ಳಿ, ಕೇರ್ಗಳ್ಳಿ, ಹುಯಿಲಾಳು, ರಾಜೀವ್‌ನಗರ 3ನೇ ಹಂತ, ಕಾಮನಕೆರೆಹುಂಡಿ, ಮಹದೇವಪುರ, ಬನ್ನೂರು, ತಿ.ನರಸೀಪುರ ರಸ್ತೆಯ ಕೆಲ ಗ್ರಾಮಗಳೂ ನಗರ ಪೊಲೀಸ್ ಘಟಕದ ವ್ಯಾಪ್ತಿಗೆ ಸೇರಲಿವೆ. ನಗರ ಪೊಲೀಸ್ ಘಟಕದ ಪರಿಷ್ಕೃತ ಗಡಿ ಪ್ರದೇಶದ ನಕ್ಷೆ ತಯಾರಿಸಿ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದ, ಶಾಸಕರೊಂದಿಗೆ ಚರ್ಚಿಸಿದ ಬಳಿಕ ಅಂತಿಮ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಅಧಿಕಾರಿಗಳು ಮುಂದಾಗಿದ್ದಾರೆ.



ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಮೈಸೂರು ವಲಯದ ಬ್ಯಾಸ್ಕೆಟ್ ಬಾಲ್ ಪುರುಷರ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಮಾನಂದವಾಡಿ ರಸ್ತೆಯ ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ತಂಡದೊಂದಿಗೆ ಭಾರತೀಯ ಬ್ಯಾಸ್ಕೆಟ್ ಬಾಲ್ ಆಟಗಾರರು ಹಾಗೂ ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಡಾ.ಎಂ.ಆರ್.ಸವಿತಾ ಪ್ರಶಾಂತ್, ಎನ್‌ಐಇ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಭಾಗದ ಮುಖ್ಯಸ್ಥ ಡಾ. ಎಸ್. ಪರಮೇಶ್ವರ ಇನ್ನಿತರರು ಉಪಸ್ಥಿತರಿದ್ದಾರೆ.

ಇಂದು ಸೌಹಾರ್ದ ಸಹಕಾರಿಗಳಿಗೆ ತರಬೇತಿ

ಮೈಸೂರು,ನ.27(ಪಿಎಂ)–ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ನ.28ರಂದು ಮೈಸೂರು ಮತ್ತು ಕೊಡಗು ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಶಾಲೆಯ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೇಷನ್ ಸಭಾಂಗಣದಲ್ಲಿ ತರಬೇತಿ ಕಾರ್ಯಕ್ರಮ ನಡೆಯಲಿದ್ದು, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಮಾಜಿ ನಿರ್ದೇಶಕ ಹೆಚ್.ವಿ.ರಾಜೀವ್ ಉದ್ಘಾಟಿಸಲಿದ್ದಾರೆ. ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಪ್ರಾಂತ್ಯದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಚೇರಿ ಜಂಟಿ ನಿರ್ದೇಶಕ ರವಿ, ಮೈಸೂರು ವಿಭಾಗದ ಸಹಕಾರ ಸಂಘಗಳ ಉಪನಿಬಂಧಕ ಆರ್.ಮಂಜುನಾಥ್, ಕೆಆರ್ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಲಕ್ಕಪ್ಪ ಕುಕ್ಕಡಿ, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕ ಹೆಚ್.ಎನ್.ನವೀನ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ನ್ಯುಮೋನಿಯಾ ಪ್ರಕರಣ ಒಂದೂ ವರದಿಯಾಗಿಲ್ಲ

ಆದರೂ ಎಚ್ಚರಿಕಾ ಕ್ರಮ: ಡಿಹೆಚ್‌ಓ



ಮೈಸೂರು, ನ. 27 (ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ನ್ಯುಮೋನಿಯಾ ಪ್ರಕರಣ ವರದಿಯಾಗಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಚೀನಾದಲ್ಲಿ ನ್ಯುಮೋನಿಯಾ ಉಲ್ಬಣವಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ದೇಶಾದ್ಯಂತ ಆರೋಗ್ಯಾಧಿಕಾರಿಗಳಿಗೆ ಹೈ ಅಲರ್ಟ್ ಘೋಷಿಸಿರುವ ಹಿನ್ನೆಲೆಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಇವರು, ಸದ್ಯ ಜಿಲ್ಲೆಯಲ್ಲಿ ನ್ಯುಮೋನಿಯಾ ಪ್ರಕರಣಗಳು ಕಂಡು ಬಂದಿಲ್ಲ. ಆದಾಗ್ಯೂ ಇಲಾಖೆ ಮಾರ್ಗದರ್ಶನದಂತೆ ಪರಿಸ್ಥಿತಿ ನಿರ್ವಹಣೆಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ನ್ಯುಮೋನಿಯಾ ಅಂದರೆ ಶ್ವಾಸಕೋಶ ಮತ್ತು ಜ್ವರಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆ ಬಗ್ಗೆ ಜಾಗತಿಕ ಎಚ್ಚರಿಕೆ ಇರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಕ್ರಮ ವಹಿಸಲಾಗುತ್ತಿದೆ. ರಾಜ್ಯ ಇಲಾಖೆಯಿಂದಲೂ ಸುತ್ತೋಲೆ ನೀಡಲಾಗಿದೆ. ಈಗಾಗಲೇ ಜ್ವರ ಹಾಗೂ ಅದರಿಂದ ಸಂಭವಿಸಬಹುದಾದ ಆರೋಗ್ಯ ಸಮಸ್ಯೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಮಾರ್ಗಸೂಚಿ ಸಿದ್ಧಪಡಿಸಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು ಹಾಗೂ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಆರೋಗ್ಯ ಸಿಬ್ಬಂದಿಗೆ ಈ ಬಗ್ಗೆ ಮಾಹಿತಿ ನೀಡಿ, ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರು ಪಲ್ಟಿ; ಅದೃಷ್ಟವಶಾತ್ ಪ್ರಾಣಾಪಾಯ ಇಲ್ಲ




ಮೈಸೂರು, ನ.27 (ಪಿಎಂ)– ಕಾರೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗುವ ಮೂಲಕ ನಿಂತಿದ್ದ ದ್ವಿಚಕ್ರ ವಾಹನಗಳು ಜಖಂಗೊಂಡ ಘಟನೆ ಬೆಮೆಲ್ ಕಾರ್ಖಾನೆಯ ಮುಖ್ಯ ದ್ವಾರದ ಎದುರು ಸೋಮವಾರ ನಡೆದಿದೆ. ಕೂರ್ಗಳ್ಳಿಯಲ್ಲಿರುವ ಬೆಮೆಲ್ ಕಾರ್ಖಾನೆ ಮುಖ್ಯ ದ್ವಾರದ ಎದುರು ಕೆಆರ್‌ಎಸ್ ರಸ್ತೆಯಲ್ಲಿ ಇಂದು ಬೆಳಗ್ಗೆ ಈ ದುರ್ಘಟನೆ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ. ಕಾರು ಪಲ್ಟಿಯಾಗಿ ಬಿದ್ದ ರಭಸಕ್ಕೆ ಕಾರ್ಖಾನೆ ಕಾರ್ಮಿಕರ ಮೂರು ದ್ವಿಚಕ್ರ ವಾಹನಗಳು ಜಖಂಗೊಂಡಿದ್ದವು.

ಅಪಘಾತದಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಕಾರಿನ ಮಾಲೀಕರು ಹಾಗೂ ದ್ವಿಚಕ್ರ ವಾಹನ ಮಾಲೀಕರು ರಾಜೀ ಮಾಡಿಕೊಂಡಿದ್ದು, ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ವಿವಿ ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪ್ರಜಾ ಪಾರ್ಟಿಯಿಂದ ಸಂವಿಧಾನ ದಿನಾಚರಣೆ



ಮೈಸೂರು,ನ.27(ಪಿಎಂ)–ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ವತಿಯಿಂದ ಸೋಮವಾರ ಸಂವಿಧಾನ ದಿನವನ್ನು ಆಚರಿಸಲಾಯಿತು. ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ವಾಚಿಸಿ, ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ಪಾರ್ಟಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ರಾಜ್ಯ ಉಪಾಧ್ಯಕ್ಷರಾದ ಮೋಹನ್‌ದಾಸ್, ಸಿಂಹ ಶಿವುಗೌಡ, ಮೈಸೂರು ನಗರ ಅಧ್ಯಕ್ಷ ಆರ್.ಶ್ರೀನಿವಾಸ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಟೀಫನ್ ಜೋಸೆಫ್, ಮೈಸೂರು ಜಿಲ್ಲಾ ಸಂಚಾಲಕರಾದ ನಾಗಸುಂದರ್, ಅಂತೋಣಿ, ಪದಾಧಿಕಾರಿಗಳಾದ ಡಿ.ಶಂಕರ್, ರಾಮಸ್ವಾಮಿ, ಎಸ್. ಲೋಕೇಶ್, ವಕೀಲರಾದ ಜಿ.ಸಿ.ಸೋಮೇಶ್, ಮರಿಸ್ವಾಮಿ ನಾಯಕ, ಚೆಲುವರಾಯಸ್ವಾಮಿ ಮತ್ತಿತರರು ಹಾಜರಿದ್ದರು.



ಮೈಸೂರಿನ ಟೌನ್‌ಹಾಲ್ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಸಂವಿಧಾನ ಪೀಠಿಕೆ ಬೋಧಿಸುವ ಮೂಲಕ ಜಿಲ್ಲಾ ಸಂಘದ ವತಿಯಿಂದ ಸಂವಿಧಾನ ಸಮರ್ಪಣಾ ದಿನ ಆಚರಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಸಂಘದ ಅಧ್ಯಕ್ಷ ಡಾ.ಎಂ.ಡಿ. ಶಿವರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ನಿಕಟಪೂರ್ವ ಅಧ್ಯಕ್ಷ ಹರೀಶ್‌ಬಾಬು, ಜಿಲ್ಲಾ, ತಾಲೂಕು ಸಂಘದ ಪದಾಧಿಕಾರಿಗಳು ಹಾಜರಿದ್ದರು.



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಸೋಮವಾರ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ 261ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರು ಬಾನ್ಸುರಿ ವಾದನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ಪಂಡಿತ್ ಕಿರಣ್ ಗೋಡ್ಖಿಂಡಿ ಇದ್ದಾರೆ.

ರಾಚಪ್ಪಾಜಿಗೆ ಪಿಹೆಚ್.ಡಿ ಪದವಿ



ಮೈಸೂರು,ನ.27–ಡಾ. ಕೆ.ಸಿ.ಸುರೇಶ ಅವರ ಮಾರ್ಗದರ್ಶನದಲ್ಲಿ ಆರ್.ರಾಚಪ್ಪಾಜಿ ಅವರು ಕೊಂಗಳ್ಳಿ ಗ್ರಾಮದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಕಥನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹೆಡಿಯಾಲ ಬಳಿ ಹುಲಿ ಸೆರೆಗಾಗಿ ರಾತ್ರಿಯಿಡೀ ಮುಂದುವರೆದ ಕಾರ್ಯಾಚರಣೆ

● ಜಾನುವಾರು ಕಳೇಬರದ ಬಳಿ ಪ್ರತ್ಯೇಕ ಎರಡು ತಂಡ ನಿಯೋಜನೆ ● ಸಹಾಯಕರೊಂದಿಗೆ ಬೋನಿನಲ್ಲಿ ಕುಳಿತ ಪಶುವೈದ್ಯರು





ಮೈಸೂರು,ನ.27(ಎಂಟಿವೈ)–ನಂಜನಗೂಡು ತಾಲೂಕು ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದಲ್ಲಿ ಮಹಿಳೆ ಹಾಗೂ ಜಾನುವಾರು ಕೊಂದಿರುವ ಹುಲಿ ಸೆರೆ ಕಾರ್ಯಾಚರಣೆ ರಾತ್ರಿಯಿಡೀ ಮುಂದುವರೆದಿದ್ದು, ಎರಡು ಪ್ರತ್ಯೇಕ ಸ್ಥಳದಲ್ಲಿ ಹುಲಿ ಕೊಂದಿದ್ದ ಜಾನುವಾರು ಕಳೇಬರದ ಮುಂದೆ ಪಶುವೈದ್ಯರಿಬ್ಬರು ಬೋನಿನಲ್ಲಿ ಕುಳಿತು ರಾತ್ರಿಯಿಡೀ ಕಾದಿದ್ದಾರೆ.

ಕಳೆದ ಮೂರು ದಿನಗಳಿಂದ ಅರಣ್ಯ ಇಲಾಖೆ ಹುಲಿ ಸೆರೆಗೆ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದೆ. ಕಾರ್ಯಾಚರಣೆ ನಡುವೆಯೇ ಭಾನುವಾರ ಎರಡು ಪ್ರತ್ಯೇಕ ಸ್ಥಳದಲ್ಲಿ ಜಾನುವಾರುಗಳನ್ನು ಹತ್ಯೆ ಮಾಡಿ ಹುಲಿ ಅರಣ್ಯ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಿತ್ತು. ಕೊಂದ ಜಾನುವಾರು ತಿನ್ನಲು ಬಂದೇ ಬರುತ್ತದೆ ಎಂಬ ನಂಬಿಕೆ ಮೇಲೆ ಭಾನುವಾರ ರಾತ್ರಿಯಿಡೀ ವಾಹನದಲ್ಲಿ ಕುಳಿತ್ತಿದ್ದ ಅರಣ್ಯ ಸಿಬ್ಬಂದಿಗೆ ಹುಲಿ ದರ್ಶನ ನೀಡಲೇ ಇಲ್ಲ. ವಾಹನ ಇರುವಿಕೆಯಿಂದ ಹುಲಿ ಜಾನುವಾರು ಕಳೇಬರ ತಿನ್ನಲು ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗಿನಿಂದಲೇ ಹೊಸ ವಿಧಾನದಲ್ಲಿ ಕಾರ್ಯಾಚರಣೆ ಆರಂಭಿಸಿರುವ ಅರಣ್ಯಾಧಿಕಾರಿಗಳು ಜಾನುವಾರು ಮೃತದೇಹ ಬಿದ್ದಿರುವ ಸ್ಥಳದ ಸಮೀಪ ಬೋನ್‌ವೊಂದನ್ನು ಇಟ್ಟು, ಅದರಲ್ಲಿ ಅರವಳಿಕೆ ತಜ್ಞರು ಹಾಗೂ ಸಹಾಯಕ ಸಿಬ್ಬಂದಿಯನ್ನಿರಿಸಿ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ನಿನ್ನೆ ಸಂಜೆ 6.30 ಹಾಗೂ ಇಂದು ಬೆಳಗ್ಗೆ 6.45ರಲ್ಲಿ ಹುಲಿ ಜಾನುವಾರುವಿನ ಕಳೇಬರವನ್ನು ತಿಂದು ಹೋಗಿರುವುದು ಕ್ಯಾಮರಾದಲ್ಲಿ ಸೆರೆಯಾಗಿದೆ.

ಒಂದು ಸ್ಥಳದಲ್ಲಿ ಬಂಡೀಪುರದ ಪಶುವೈದ್ಯ ಡಾ.ವಾಸಿಂ ಮಿರ್ಜಾ ಹಾಗೂ ಸಹಾಯಕರೊಬ್ಬರು ಬೋನಿನಲ್ಲಿ ಅಡಗಿ ಕುಳಿತಿದ್ದರೆ, ಮತ್ತೊಂದು ಸ್ಥಳದಲ್ಲಿ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪಶುವೈದ್ಯ ಡಾ.ಪ್ರದೀಪ್ ಹಾಗೂ ಸಹಾಯಕರನ್ನು ಬೋನಿನಲ್ಲಿರಿಸಲಾಗಿದೆ. ಈ ಎರಡೂ ಬೋನ್ ಸುತ್ತಲೂ ಗಿಡ ಸೇರಿದಂತೆ ಇನ್ನಿತರ ಸೊಪ್ಪಿನಿಂದ ಮುಚ್ಚಲ್ಪಟ್ಟಿದ್ದು, ಅದರೊಳಗೆ ಇರುವ ಪಶುವೈದ್ಯರ ಬಳಿ ಅರವಳಿಕೆ ಮದ್ದು ಹಾಗೂ ಇನ್ನಿತರ ಔಷಧಿ ನೀಡಲಾಗಿದೆ. ಇದರೊಂದಿಗೆ ಬೋನ್‌ನಲ್ಲಿರುವ ಇಬ್ಬರಿಗೂ ಕುಡಿಯುವ ನೀರು ಹಾಗೂ ಆಹಾರ ಪೂರೈಸಲಾಗಿದೆ. ಸೋಮವಾರ ರಾತ್ರಿಯಿಡೀ ಬೋನ್‌ನಲ್ಲಿರುವ ಈ ತಂಡ ಜಾನುವಾರು ಮೃತದೇಹ ತಿನ್ನಲು ಬರುವ ಹುಲಿಗೆ ಅರವಳಿಕೆ ಚುಚ್ಚುಮದ್ದು ನೀಡಿ, ಹುಲಿ ಸೆರೆಗೆ ಸನ್ನದ್ಧವಾಗಿದೆ. ಮಹಿಳೆ ಕೊಂದಿದ್ದ ಸ್ಥಳದಿಂದ 1 ಕಿ.ಮಿ ದೂರದ ಕಾಳನಮುಂಟಿ ಸೋಲಾರ್ ಶೆಡ್ ಹಾಗೂ ಓಂಕಾರ ಮತ್ತು ಹೆಡಿಯಾಲ ಗಡಿ ಭಾಗ ಕಲ್ಲಾರೆಕಂಡಿ ಸ್ಥಳದಲ್ಲಿ ಪಶುವೈದ್ಯರು ಬೋನ್‌ನಲ್ಲಿ ಅಡಗಿ ಬಲೆ ಬೀಸಿದ್ದಾರೆ.

ಹುಲಿ ಸೆರೆ ಕಾರ್ಯಾಚರಣೆ ಕ್ಲಿಷ್ಟಕರವಾಗಿದ್ದು, ಕಾಡೊಳಗೆ ಕುರುಚಲು ಗಿಡ, ಮರ ಹಾಗೂ ಮುಳ್ಳಿನ ಪೊದೆಗಳು ಯಥೇಚ್ಛವಾಗಿರುವುದರಿಂದ ಹುಲಿ ಪತ್ತೆ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದೆ. ಈಗಾಗಲೇ 300ಕ್ಕೂ ಹೆಚ್ಚು ಮಂದಿ ಅರಣ್ಯ ಸಿಬ್ಬಂದಿ, 3 ಸಾಕಾನೆ ಬಳಸಲಾಗುತ್ತಿದೆ. ಹುಲಿ ಬೋನ್‌ಗೆ ಬೀಳುವುದಿಲ್ಲ. ಅದನ್ನು ಅರವಳಿಕೆ ಮದ್ದು ನೀಡಿಯೇ ಸೆರೆ ಹಿಡಿಯಬೇಕಾಗಿದೆ. ಕಾಡಿನ ಪ್ರದೇಶದಲ್ಲಿ ಹುಲಿ ಜಾಡು ಪತ್ತೆಯಾದರೆ, ಸಾಕಾನೆ ಮೂಲಕವೇ ತೆರಳಿ ಕಾರ್ಯಾಚರಣೆ ನಡೆಸಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಕಾಡಂಚಿನ ಗ್ರಾಮದುದ್ದಕ್ಕೂ ಅರಣ್ಯ ಸಿಬ್ಬಂದಿ ಪಹರೆ ಕಾಯುವ ಮೂಲಕ ಹುಲಿಯಿಂದ ಮತ್ತೆ ಯಾವುದೇ ಅನಾಹುತ ಸಂಭವಿಸದಂತೆ ನೋಡಿಕೊಳ್ಳಲು ಕಟ್ಟೆಚ್ಚರ ವಹಿಸಿದ್ದಾರೆ. ಇದರಿಂದ ವಿವಿಧ ಗ್ರಾಮಗಳ ಜನ ಕಾಡಂಚಿನ ಸ್ಥಳಕ್ಕೆ ಜಾನುವಾರು ಮೇಯಿಸಲು ಕರೆದೊಯ್ಯುವುದನ್ನು ನಿಲ್ಲಿಸಿದ್ದಾರೆ. ಆದರೂ, ಕೆಲವು ಜಾನುವಾರುಗಳು ಕಾಡಂಚಿನ ಪ್ರದೇಶಕ್ಕೆ ಮೇಯಲು ತಾವೇ ಹೋಗುತ್ತಿರುವುದರಿಂದ ಹುಲಿಗೆ ಬಲಿಯಾಗುತ್ತಿವೆ. ಇದು ಅರಣ್ಯ ಇಲಾಖಾ ಸಿಬ್ಬಂದಿಗೆ ತಲೆ ನೋವಾಗಿದ್ದರೆ, ಗ್ರಾಮಸ್ಥರಿಗೂ ಆತಂಕ ಸೃಷ್ಟಿಸಿದೆ. ಸ್ಥಳದಲ್ಲಿ ಮೈಸೂರು ವೃತ್ತದ ಸಿಎಫ್ ಡಾ. ಮಾಲತಿ ಪ್ರಿಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಬಿ.ರಮೇಶ್ ಕುಮಾರ್, ಬಂಡೀಪುರ ಹೆಡಿಯಾಲ ವಲಯದ ಎಸಿಎಫ್ ಪರಮೇಶ್, ಹೆಡಿಯಾಲ ಆರ್‌ಎಫ್‌ಓ ಎ.ಆರ್.ನಾರಾಯಣ, ಹೆಚ್ಚುವರಿ ಆರ್‌ಎಫ್‌ಓ ನರೇಶ್ ಹಾಗೂ ಇನ್ನಿತರರು ಮೊಕ್ಕಾಂ ಹೂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತಿ : "ಇತ್ತೀಚೆಗೆ ಸಿಗರೇಟು ಸೇದುವುದಕ್ಕೂ ನಿನ್ನ ಆಕ್ಷೇಪಣೆಯಿಲ್ಲ, ಮದ್ಯ ಸೇವಿಸುವುದಕ್ಕೂ ನಿನ್ನ ಆಕ್ಷೇಪಣೆಯಿಲ್ಲ, ಏಕೆ?

ಪತ್ನಿ : "ಅಂಥಾದ್ದೇನೂ ಇಲ್ಲ, ಮೊನ್ನೆ ಜೀವವಿಮಾ ಏಜೆಂಟ್ ಬಂದು ಪಾಲಿಸಿಯ ಲಾಭಾಂಶಗಳ ಬಗ್ಗೆ ಪೂರ್ತಿ ಮಾಹಿತಿ ನೀಡಿ ಹೋದ ಕಣ್ರೀ...!

ಮೈಸೂರು ಮಿತ್ರ

ಮಂಗಳವಾರ, 28 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಂತಹ ತಿಳಿದವರಿದ್ದರೂ ಪ್ರಸಂಗವಶಾತ್ ಅವರಿಗೆ ನಾಲ್ಕು ಮಾತು ಹೇಳಲಿಕ್ಕೆ ಎರಡನೆಯವರು ಬೇಕಾಗುತ್ತದೆ – ಗಳಿಗನಾಥ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿವೇಕ ಇಲ್ಲದ ಅದೃಷ್ಟ ತೂತುಗಳಿರುವ ಚೀಲವಿದ್ದಂತೆ

ನಿಮ್ಮ ಪತ್ರಗಳು

ಭ್ರೂಣ ಹತ್ಯೆ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಿ

ಮಾನ್ಯರೆ,

ನೀವು ರಾಜ್ಯದ ಯಾವುದೇ ಖಾಸಗಿ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂಗಳಿಗೆ ಹೋದರೆ, ಬಾಗಿಲಲ್ಲೇ ದೊಡ್ಡದಾಗಿ 'ಮೊಗ್ಗನ್ನು ಚಿವುಟದಿರಿ' ಅರಳಲು ಬಿಡಿ, ಹೆಣ್ಣು ಭ್ರೂಣ ಹತ್ಯೆ ಮಹಾಪಾಪ ಎಂಬ ಪೋಸ್ಟರ್ ರಾರಾಜಿಸುತ್ತಿದೆ.

ಇದು ವೈದ್ಯರ ತಿಳುವಳಿಕೆಗಾಗಿ ಅಥವಾ ಸಾರ್ವಜನಿಕರಿಗಾಗಿ, ಮೈಸೂರಿನ ಖಾಸಗಿ ನರ್ಸಿಂಗ್ ಹೋಂನ ವೈದ್ಯರು ಮತ್ತು ಅಲ್ಲಿನ ಸಿಬ್ಬಂದಿ, ಕಳೆದ ಮೂರು ವರ್ಷಗಳಲ್ಲಿ ಸುಮಾರು 900 ಹೆಣ್ಣು ಭ್ರೂಣ ಹತ್ಯೆ ಮಾಡಿರುವ ಘೋರ ಕೃತ್ಯ ಬಯಲಾಗಿದೆ.

ಒಂದು ಹೆಣ್ಣು ಭ್ರೂಣ ಹತ್ಯೆ ಒಂದು ಕೊಲೆಗೆ ಸಮಾನ. ಅಂದರೆ ಈಗ 900 ಕೊಲೆಗಳಾಗಿವೆ. ಇವರಿಗೆ ಗಲ್ಲು ಶಿಕ್ಷೆಯಲ್ಲದೇ ಬೇರೆ ಶಿಕ್ಷೆಯೇ ಇಲ್ಲ ಎನ್ನಿಸುತ್ತದೆ. ಈ ಕಾರಣದಿಂದಲೇ ಈಗಾಗಲೇ ರಾಜ್ಯದಲ್ಲಿ ವರದಿವೊಂದರ ಪ್ರಕಾರ ಹೆಣ್ಣಿನ ಸಂತತಿ ಕುಸಿಯುತ್ತಿದೆ. 1000 ಪುರುಷರಿಗೆ 950 ಸ್ತ್ರೀಯರು ಇದ್ದಾರೆ ಎಂಬುದು ವರದಿ ಮಾಡಿದೆ.

ಸುಲಭವಾಗಿ ಹಣ ಮಾಡಬಹುದೆಂದು ಕೆಲವು ವೈದ್ಯರು ಇಂತಹ ನೀಚ ಕೃತ್ಯಕ್ಕೆ ಇಳಿಯುವುದು, ವೈದ್ಯಕೀಯ ವೃತ್ತಿಗೇ ಮಾಡುವ ಮಹಾಪಾಪ. ಇಂತಹ ಪ್ರಕರಣಗಳು ಬೆಳಕಿಗೆ ಬಂದಾಗ ಸರ್ಕಾರ ಕಠಿಣ ಶಿಕ್ಷೆ ವಿಧಿಸದೇ ಹೋದರೆ, ಮುಂದಿನ ದಿನಗಳಲ್ಲಿ ಗಂಡು ಮಕ್ಕಳಿಗೆ ಹೆಣ್ಣು ಸಿಗದೇ ಹೋಗಲೂಬಹುದು. ಎಲ್ಲಾ ಹೆಣ್ಣು ಮಕ್ಕಳಿಗೆ ಸರ್ಕಾರ ಉಚಿತ ಶಿಕ್ಷಣ ನೀಡುವ ಜೊತೆಗೆ ಉದ್ಯೋಗ ಖಾತರಿ ನೀಡುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು.

– ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

ಕುರಿ, ಮೇಕೆ ಮಾಂಸ ಮಾರಾಟ ಮಳಿಗೆಗಳ ಸ್ಥಾಪನೆ ಒಳ್ಳೆಯ ಉದ್ದೇಶ

ಮಾನ್ಯರೆ,

ಕರ್ನಾಟಕ ಸರ್ಕಾರವು ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ನಂದಿನಿ ಹಾಲಿನ ಉತ್ಪನ್ನಗಳ ಮಳಿಗೆ ಮಾದರಿಯಲ್ಲಿಯೇ ರಾಜ್ಯದಾದ್ಯಂತ ತನ್ನ ಮಳಿಗೆಗಳ ಮೂಲಕ ಪ್ಯಾಕ್ ಮಾಡಿದ ಕುರಿ ಮತ್ತು ಮೇಕೆ ಮಾಂಸವನ್ನು ಸೂಕ್ತವಾದ ಬೆಲೆಯಲ್ಲಿ ಮಾರಾಟ ಮಾಡಲು ಯೋಚಿಸುತ್ತಿದೆ.

ನಂದಿನಿ ಬೂತಿನ ಮಾದರಿಯಲ್ಲೇ ಕುರಿ ಮತ್ತು ಮೇಕೆ ಮಾಂಸದ ಮಳಿಗೆಯನ್ನು ಸ್ಥಾಪಿಸಲು ಸರ್ಕಾರವು ಯೋಜಿಸುತ್ತಿರುವುದು ಒಳ್ಳೆಯ ಉದ್ದೇಶವಾಗಿದೆ. ಆದರೆ ಹಾಲಿನಲ್ಲಿ ನಿಗದಿತ ದಿನಾಂಕ ಇರುತ್ತದೆ. ಆದರೆ ಮಾಂಸದಲ್ಲಿ ಇರುವುದಿಲ್ಲ. ಆದ್ದರಿಂದ ಹಾಲನ್ನು ಹೇಗೆ ಪ್ಯಾಕ್ ಮಾಡಿ, ಬಳಕೆಗೆ ಸೂಕ್ತ ದಿನಾಂಕವನ್ನು ನಮೂದಿಸುತ್ತಾರೋ ಹಾಗೆ ಮಾಂಸದ ಮಳಿಗೆಯಲ್ಲೂ ಸಹ ನಿಗದಿತ ದಿನಾಂಕವನ್ನು ಸೂಚಿಸಿದರೆ, ಗ್ರಾಹಕರು ಮಾರುಕಟ್ಟೆ ಅಂಗಡಿಗಳ ಬದಲಿಗೆ ಇಂತಹ ಮಳಿಗೆಯಲ್ಲಿ ಖರೀದಿಸುತ್ತಾರೆ ಹಾಗೂ ಹಾಲಿನ ಗುಣಮಟ್ಟವನ್ನು ಪರೀಕ್ಷಿಸಿ ಹೇಗೆ ಬಿಡುತ್ತಾರೋ ಅದೇ ರೀತಿಯಲ್ಲಿ ಮಾಂಸದ ಗುಣಮಟ್ಟ ನಿಗದಿ ಮಾಡಿದರೆ ಜನರಿಗೆ ಸಹಾಯವಾಗುತ್ತದೆ. ಜನರು ಹಾಲಿನ ಮಳಿಗೆಯಲ್ಲಿ ಹೇಗೆ ಹಾಲನ್ನು ಖರೀದಿಸುತ್ತಾರೋ ಹಾಗೆ ಮಾಂಸದ ಮಳಿಗೆಯಲ್ಲೂ ಸಹ ಖರೀದಿಸುತ್ತಾರೆ ಹಾಗೂ ಅವರಿಗೆ ಸಮಯ ಉಳಿತಾಯವಾಗುತ್ತದೆ. ಇದು ಸರ್ಕಾರದ ಒಂದು ಒಳ್ಳೆಯ ಯೋಜನೆಯಾಗಿದ್ದು ಇದನ್ನು ಆದಷ್ಟು ಬೇಗ ಜಾರಿಗೆ ತಂದರೆ ಜನರಿಗೆ ಅನುಕೂಲವಾಗುತ್ತದೆ.

–ಕೀರ್ತನ ಎಂ.ಕೆ., ಮೈಸೂರು.

ಕಾವೇರಿ ನೀರು ಬಿಡುಗಡೆ ಜವಾಬ್ದಾರಿ ನಿರ್ವಹಣಾ ಸಮಿತಿಗೆ ವಹಿಸಿ

ಮಾನ್ಯರೆ,

ಕಾವೇರಿ ನದಿಯ ಅಣೆಕಟ್ಟು ಕರ್ನಾಟಕದಲ್ಲಿದ್ದರೂ ಆ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ತಮಿಳುನಾಡು ಬಿಡುತ್ತಿಲ್ಲ. ಇದು ರಾಜ್ಯದ ಪಾಲಿಗೆ ಮತ್ತು ರೈತರಿಗೆ ಮರಣಶಾಸನವಾಗಿದೆ. ಕಾವೇರಿ ವಿವಾದ ಶುರುವಾದಾಗಿನಿಂದ ಈವರೆಗೆ ಒಂದು ಬಾರಿಯೂ ಕರ್ನಾಟಕದ ಪರವಾಗಿ ನ್ಯಾಯಾಲಯದಿಂದಾಗಲೀ ಅಥವಾ ನೀರು ನಿರ್ವಹಣಾ ಸಮಿತಿಯಿಂದಾಗಲೀ ನ್ಯಾಯ ದೊರಕಿಲ್ಲ. ಬರಿ ವಾದ–ಪ್ರತಿವಾದ ಆಲಿಸಿಯೇ ತೀರ್ಪು ನೀಡಿದರೆ ಹೇಗೆ? ವಸ್ತುಸ್ಥಿತಿಯನ್ನು ಏಕೆ ಅರಿಯುತ್ತಿಲ್ಲ ಎಂಬುದೇ ಎಲ್ಲರನ್ನು ಕಾಡುತ್ತಿರುವ ಪ್ರಶ್ನೆ. ಇಷ್ಟಾಗಿಯೂ ಕಾವೇರಿ ನೀರು ನಿರ್ವಹಣಾ ಸಮಿತಿಯು ತಮಿಳುನಾಡಿಗೆ ಇನ್ನು ಒಂದು ತಿಂಗಳ ಕಾಲ 2700 ಕ್ಯುಸೆಕ್ ನೀರು ಹರಿಸುವಂತೆ ಆದೇಶಿಸಿರುವುದು ಗಾಯದ ಮೇಲೆ ಉಪ್ಪು ಸುರಿದಂತಾಗಿದೆ. ಕಾವೇರಿಗಾಗಿ ರಾಜ್ಯ ಸರ್ಕಾರ ಕೋಟ್ಯಾಂತರ ಹಣ ವ್ಯಯಿಸುತ್ತಿದೆ. ಇತ್ತ ಹಣವೂ ಪೋಲು ಅತ್ತ ನೀರು ಪೋಲಾದರೆ ರಾಜ್ಯದ ಜನರ ಗತಿ ಏನು. ಆದ್ದರಿಂದ ಇದರ ಜವಾಬ್ದಾರಿಯನ್ನು ನಿರ್ವಹಣಾ ಸಮಿತಿಗೆ ವಹಿಸಿ. ಡ್ಯಾಂನಲ್ಲಿ ನೀರು ಇರುತ್ತೋ ಬಿಡುತ್ತೋ ಗೊತ್ತಿಲ್ಲ. ರಾಜ್ಯದ ರೈತರ ಬೆಳೆಗೆ ಮತ್ತು ಸಮರ್ಪಕ ಕುಡಿಯುವ ನೀರಿಗೆ ತೊಂದರೆಯಾಗದಂತೆ ಸಮಿತಿಯೇ ನಿರ್ವಹಿಸಲಿ. ಯಾವ ಅಧಿಕಾರಿಗಳಿಗೂ ಈ ಜವಾಬ್ದಾರಿ ಬೇಡ. ಆದೇಶ ಮಾಡುವವರಿಗೆ ಇದರಿಂದ ವಾಸ್ತವತೆಯಾದರೂ ತಿಳಿಯಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಭಾಗ್ಯ ಮಹದೇಶ್ ಪುನಃ ನಗರಪಾಲಿಕೆ ಸದಸ್ಯರಾಗಲಿ !!

ಮಾನ್ಯರೇ,

ನಿಕಟಪೂರ್ವ ಮೈಸೂರು ನಗರಪಾಲಿಕೆ ಸದಸ್ಯರಾದ ಭಾಗ್ಯ ಮಹದೇಶ್ ತಮ್ಮ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುವುದರ, ಮೂಲಕ ವಾರ್ಡ್ ನಂ.19ರ ನಿವಾಸಿಗಳ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಅತೀ ಹೆಚ್ಚು ಅನುಕೂಲ ಮಾಡಿಕೊಟ್ಟಿದ್ದಾರೆ. ಮೊನ್ನೆ ಚೆಲುವಾಂಬ ಪಾರ್ಕ್ ವಾಯುವಿಹಾರಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗ್ಯ ಮಹದೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ತಾವು ಈ ಪಾರ್ಕಿನಲ್ಲಿ ಕಳೆದ 20 ವರ್ಷಗಳಿಂದ ವಾಯುವಿಹಾರಕ್ಕೆ ಬರುತ್ತಿರುವುದಾಗಿ ತಿಳಿಸಿ, ಈ ಪ್ರದೇಶ ಬೇರೆ ವಾರ್ಡ್ ವ್ಯಾಪ್ತಿಗೆ ಸೇರಿದ್ದರೂ, ಯಾರಿಗೆ ಏನೇ ಸಮಸ್ಯೆ ಇದ್ದರೂ ತಮಗೆ ದೂರವಾಣಿ ಮೂಲಕ ತಿಳಿಸಿದರೆ ಆ ಸಮಸ್ಯೆಯನ್ನು ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ. ಇವರ ಮತ್ತೊಂದು ವಿಶೇಷವೆಂದರೆ ಯಾರು ಯಾವಾಗ ಕರೆ ಮಾಡಿದರೂ ತಕ್ಷಣ ಪ್ರತಿಕ್ರಿಯಿಸುತ್ತಾರೆ. ಇವರು ಪುನಃ ಚುನಾವಣೆಯಲ್ಲಿ ಗೆದ್ದು, ಸಾರ್ವಜನಿಕರಿಗೆ ಮತ್ತಷ್ಟು ಸೇವೆ ಕಲ್ಪಿಸಲಿ ಎಂದು ಮೊಹಲ್ಲಾ ನಿವಾಸಿಗಳ ಆಶಯ.

– ರಾಜೇಶ್, ಒಂಟಿಕೊಪ್ಪಲು, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ತಲ್ಲಣಿಸದಿರು ತಾಳು ಮನವೇ...!

ಒಮ್ಮೊಮ್ಮೆ ನಮ್ಮ ತಾಳ್ಮೆ, ನಮ್ಮ ಸಹಿಷ್ಣುತೆ, ಬೇರೆಯವರಿಗೆ ದೌರ್ಬಲ್ಯದಂತೆ ಕಾಣುತ್ತದೆ. ಗೂಳಿ ಗುಟುರು ಹಾಕಿದಂತೆ ಮಾತಾಡುವವರು ಹೀರೋಗಳಂತೆ ಕಾಣುತ್ತಿರುತ್ತಾರೆ. ಕಚೇರಿಯಲ್ಲಿ, ಒಮ್ಮೆ ನನ್ನ ಗೆಳೆಯನೊಬ್ಬ ಅವನ ಮೇಲಾಧಿಕಾರಿ ಕಪಾಳಕ್ಕೆ ಹೊಡೆದಂತೆ ಮಾತಾಡಿಬಿಟ್ಟಿದ್ದರು. ಆತ ತುಂಬ ಸೂಕ್ಷ್ಮ, ದಕ್ಷ ಕೆಲಸಗಾರ, ಸಮಯದ ಪರಿವೆಯೇ ಇಲ್ಲದೆ ಕೆಲಸ ಮಾಡುತ್ತಿದ್ದ ಕೆಲಸಗಾರ ಮತ್ತೂ ಆತನ ಅಧಿಕಾರಿಯಾಗಿದ್ದ, ಪ್ರಾಮಾಣಿಕ, ದುಡ್ಡು ಮಾಡುವ ಅಯಕಟ್ಟಿನ ಜಾಗದಲ್ಲಿದ್ದರೂ ದುಡ್ಡು ಅವನ ಆದ್ಯತೆ ಆಗಿರಲಿಲ್ಲ. ನಿರುಪದ್ರವಿ ಜೀವಿ. ಆದರೆ ಅವನ ಮೇಲಾಧಿಕಾರಿಗೆ ಕೂಡ ಅವನನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ ಎಂಬಂತೆ ಅನಿವಾರ್ಯತೆ ಸೃಷ್ಟಿಯಾಗಿದ್ದಂತಹ ಅಧಿಕಾರಿ ಆತ. ಆದರೆ ಈತನಿಗಿಂತ ವಯೋಮಾನದಲ್ಲಿ ಚಿಕ್ಕವರಾದ ಮೇಲಾಧಿಕಾರಿಯೊಬ್ಬರು ಈತನಿಗೆ 'ಬಾಸ್' ಆಗಿ ಬಂದರು. ಅವರ ವೇಗಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದ ಈತನ ಮೇಲೆ ವಿನಾ ಕಾರಣ ಯಾರದೋ ಮೇಲಿನ ಕೋಪ ತಂದು ವಿಪರೀತ ಸ್ಟ್ರೆಸ್‌ಗೆ ಒಳಗಾಗಿ ಆ ಮೇಲಾಧಿಕಾರಿ ಈತನಿಗೆ ಎಲ್ಲರೆದುರೆ ಬೈದು ಬಿಟ್ಟರು. ಆದರೆ ಕೆಲಸದಲ್ಲಿ, ಪರಿಣಿತ, ಶ್ರದ್ಧೆ ಶಿಸ್ತು, ದಕ್ಷತೆ ಎಲ್ಲದರಲ್ಲೂ ಪರಿಪೂರ್ಣನಾಗಿದ್ದ ಈ ವ್ಯಕ್ತಿ ಮಾತ್ರ ಎಲ್ಲರೆದುರು ಆ ಮೇಲಾಧಿಕಾರಿಗೆ ತಿರುಗಿ ಮಾತಾಡದೆ ಎದ್ದು ಹೊರಟು ಬಿಟ್ಟರು. ಆಚೆ ಬಂದ ಮೇಲೆ ಆತನ ಗೆಳೆಯರ ವೃಂದ ಮತ್ತೆ ಆತನನ್ನು ಹಂಗಿಸಿ ಮಾತಾಡಿದರು. ಅಲ್ಲಿ ನೀನೇಕೆ ತಿರುಗಿ ಮಾತನಾಡಲಿಲ್ಲ! ನನ್ನಂಥವನಾಗಿದ್ದರೆ, ಹಾಗೆ ಮಾಡುತ್ತಿದ್ದೆ, ಹೀಗೆ ಮಾತಾಡುತ್ತಿದ್ದೆ, ಸರಿಯಾಗಿ ಉತ್ತರ ಕೊಡುತ್ತಿದ್ದೆ, ಏನೆಂದು ತಿಳಿದುಕೊಂಡಿದ್ದಾರೆ ಅವರು, ಇಷ್ಟೆಲ್ಲಾ ಕೆಲಸ ಮಾಡಿಯೂ ಮುಖಕ್ಕೆ ಮಂಗಳಾರತಿ ಮಾಡಿಸಿಕೊಳ್ಳಬೇಕು ಎಂದರೆ ಯಾರಿಗೆ ತಾನೆ ಮನಸ್ಸು ಬರುತ್ತದೆ ಎಂಬಿತ್ಯಾದಿ ವೈಖರಿಗಳು, ವೀರಾವೇಶದ ನುಡಿಗಳು ಆ ವ್ಯಕ್ತಿಯನ್ನು ಕಂಗೆಡಿಸಿ ಮನಸ್ಸಿನ ಮೂಲೆಯಲ್ಲೆಲ್ಲೋ ಹೌದಲ್ಲ; ನಾನು ಮಾತಾಡಬೇಕಿತ್ತು. ನಾನೇಕೆ ಮೌನಿಯಾದೆ, ಕೆಲಸ ಮಾಡಿಯೂ ಬೈಸಿಕೊಳ್ಳುವುದು ಯಾವ ನ್ಯಾಯ, ಸುಖಾಸುಮ್ಮನೆ ವಿನಾ ಕಾರಣ ಯಾರಾದರೂ ನಮ್ಮನ್ನು ಹಂಗಿಸಿ ಹಿಂಸಿಸಿದಾಗ ಸುಮ್ಮನಿರುವುದು ಕೂಡ ದೌರ್ಬಲ್ಯವೇ ಅಲ್ಲವೇ? ನಮ್ಮ ಮನಸ್ಸಿಗೆ ಘಾಸಿಯಾದರೂ ನಮಗೆ ಅಪಮಾನವಾದರೂ ಸುಮ್ಮನಿರಬೇಕೇಕೆ? ಎದುರಿಗಿದ್ದ ಜನ ತಪ್ಪು ತಿಳಿಯುವುದಿಲ್ಲವೆ?

ಶಾಂತಿ, ಸಮಾಧಾನ ಸಹೃದಯತೆಗಳು ಎಲ್ಲಿ ಪ್ರದರ್ಶನವಾಗಬೇಕು ಅಲ್ಲಿಯೇ ಪ್ರದರ್ಶನವಾಗಬೇಕಲ್ಲವೇ, ಮೌನ ನಮ್ಮ ದೌರ್ಬಲ್ಯವಲ್ಲ. ನಮ್ಮ ಸ್ವಭಾವ ಎನ್ನುವುದು ಇಂಥವರಿಗೆ ಅರ್ಥವಾಗುವುದಾದರೂ ಯಾವಾಗ? ಹೀಗೆ ಎಡೆಬಿಡದ ಪ್ರಶ್ನೆಗಳು ಮನಸ್ಸನ್ನು ಬಾಧಿಸುತ್ತಿರುವಾಗ ಆಕಸ್ಮಿಕವಾಗಿ ನಾನವರನ್ನು ಭೇಟಿಯಾದೆ, ಮ್ಲಾನವದನರಾದ ಅವರು ನನ್ನನ್ನು ಒಂದು ಪ್ರಶ್ನೆ ಕೇಳಿದರು. ಸಹನೆ ದೌರ್ಬಲ್ಯವಾ? ಶಕ್ತಿಯಾ ಅಂತ. ನಾನು ಏನೋ ಹೇಳುವಷ್ಟರಲ್ಲಿ ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸ್‌ಗೆ ರಳ್ ಅಂತ ಒಂದು ಮೆಸೇಜ್ ಬಂದು ಅವರು ನನ್ನ ಮಾತಿಗಾಗಿ ಕಾಯುತ್ತ ಹಾಗೆಯೇ ಮೊಬೈಲ್‌ನಲ್ಲಿ ಬಂದ ಮೆಸೇಜ್ ಕಡೆಗೆ ಕಣ್ಣು ಹಾಯಿಸಿದರು. ಆ ಮೆಸೇಜಿನಲ್ಲಿ ಅಂಥಾದ್ದೇನಿತ್ತು ಎಂದು ನನಗೆ ಅರ್ಥವಾಗಲಿಲ್ಲ. ಆದರೆ ಅವರ ಮುಂಗೈ ನನ್ನ ಅಂಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಜೋರಾದ ನಿಟ್ಟುಸಿರೊಂದನ್ನು ಎಳೆದುಕೊಂಡರು. ಒಮ್ಮೆ ಜೋರಾಗಿ ನಕ್ಕುಬಿಟ್ಟರು. ನಾನು ಏನಾಯ್ತು? ಎಂದೆ? ಅವರು ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸಿನಲ್ಲಿದ್ದ ಮೆಸೇಜಿನ ತುಣುಕೊಂದನ್ನು ತೆರೆದು ತೋರಿಸಿದರು. ಅದರಲ್ಲಿ 'I am sorry sir please excuse me' ಎಂಬ ಮೆಸೇಜು ಕಾಣುತ್ತಿತ್ತು. ಅದನ್ನು ಕಳಿಸಿದವರು ಬುದ್ಧಿವಂತ ಐ.ಎ.ಎಸ್ ಅಧಿಕಾರಿ, ಅದು ಬಂದಿದ್ದು ಸಂವೇದನಾಶೀಲ ಸೂಕ್ಷ್ಮ ಮನಸ್ಸಿನ ಅವರ ಕೈಕೆಳಗೆ ಕೆಲಸ ಮಾಡುವ ಹಿರಿಯ ಸಹೋದ್ಯೋಗಿಗೆ. ಅಲ್ಲಿಗೆ ನನಗೆ ಮಾತನಾಡುವ ಅವಕಾಶವೇ ಬರಲಿಲ್ಲ. ಬೇಸರವಾಗಿದ್ದ ಮನಕ್ಕೆ ಬೇಸರ ಮಾಡಿದ್ದವರೇ ಸಮಾಧಾನದ ತಂಪೆರೆದು ತನಗೆ ಅಧಿಕಾರದ ಜೊತೆ ಸಹೃದಯತೆ ಕೂಡ ಇದೆ, ತಪ್ಪನ್ನು ತಿದ್ದಿಕೊಂಡು ನೊಂದುಕೊಂಡವರ ಮನಸ್ಸನ್ನು ಸರಿ ಮಾಡುವ ಸೂಕ್ಷ್ಮತೆಯೂ ಕೂಡ ಇದೆ. ವಯಸ್ಸಿನಲ್ಲಿ ಕಿರಿತನವಿದ್ದರೂ, ಆಲೋಚನೆಯಲ್ಲಿ ಹಿರಿತನವಿದೆ ಎಂಬುದನ್ನು ತೋರಿಸಿಕೊಟ್ಟಿದ್ದರು. ಅಲ್ಲಿಗೆ ಇವರ ತಾಳ್ಮೆ, ಗೆದ್ದಿತ್ತು, ಸಹನೆ ಸಾಕ್ಷಿಯಾಗಿತ್ತು. 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಮಾತು ಘನತೆಯಿಂದ ಅವರನ್ನು ಗೆಲ್ಲಿಸಿತ್ತು. ಆ ಐ.ಎ.ಎಸ್ ಅಧಿಕಾರಿ ಇದನ್ನು ಅಲ್ಲಿಗೇ ಬಿಡಲಿಲ್ಲ. ಇವರನ್ನು ಕರೆದು ಗೌತಮಬುದ್ಧ ಅನುಭವಿಸಿದ ಇಂಥದೇ ಮುಜುಗರದ ಕತೆ ಹೇಳಿದರು.



> **ಬುದ್ಧನಂತಹ ಅಪ್ರತಿಮ ಅರಿವಿನ ಗುರುವಿಗೇ ತಾಳ್ಮೆ ಎನ್ನುವುದು ಅನುರೂಪವಾಗಿತ್ತು ಎಂದ ಮೇಲೆ, ಹೊಲಗದ್ದೆಗಳಲ್ಲಿ, ಕಚೇರಿಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಮನೆಗಳಲ್ಲಿ, ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಿಯೋ, ಮಾಹಿತಿ ಕೊರತೆಯಿಂದಲೋ, ಅಸಹನೀಯ ಸಾಂದರ್ಭಿಕ ಕಾರಣಗಳಿಂದಲೋ ಏನೋ, ಮೇಲಧಿಕಾರಿಗಳೋ, ದೊಡ್ಡವರೆನ್ನಿಸಿಕೊಂಡವರೋ, ಮಾಲೀಕರೋ, ಅಪ್ಪನೋ, ಅಮ್ಮನೋ, ಅಣ್ಣನೋ, ಅಕ್ಕನೋ, ಯಾರೋ ಒಬ್ಬರು ಏನಾದರು ಮನಸ್ಸಿಗೆ ನೋವಾಗುವಂಥ ಮಾತಾಡಿದಾಗ ನಾವೂ ತಿರುಗಿ ಅದನ್ನೇ ಉಲ್ಟಾ ಸೀದಾ ಬಾರಿಸಿ ಮಾತಿನಲ್ಲೇ ವಾಪಸ್ಸು ಕೊಟ್ಟು ವೀರಾಧೀವೀರರಾದರೆ ಅಲ್ಲಿಗೆ ಇಬ್ಬರ ಸಂಬಂಧವೂ ಹಾಳಾಗುತ್ತದೆ.**

ಹೆಂಡತಿ ಯಶೋಧರೆ, ಪುತ್ರ ರಾಹುಲನನ್ನ ಬಿಟ್ಟು ರಾಜತ್ವದಿಂದ ವೈರಾಗ್ಯದ ಕಡೆಗೆ ಹೊರಟ ಸಿದ್ಧಾರ್ಥನನ್ನು ಬುದ್ಧನ ಅವತರಣಿಕೆಯಾಗಿ ಸಮಾಜ ಕೂಡ ಸ್ವೀಕರಿಸಲಿಲ್ಲ. ಕೆಲವರು ಬುದ್ಧನನ್ನು ಅಪಮಾನಿಸಿ ಮುಜುಗರಗೊಳಿಸಿದರು ಎಂಬುದಕ್ಕೆ ಸಿದ್ಧಾರ್ಥ ಬುದ್ಧನಾದ ಮೇಲೆ ಪಾಟಲೀಪುತ್ರದ ಬೀದಿಯಲ್ಲಿ ತನ್ನ ಶಿಷ್ಯರೊಂದಿರೊಡಗೂಡಿ ತೆರಳುತ್ತಿರುವಾಗ ಮಾರ್ಗ ಮಧ್ಯದಲ್ಲಿ ಶಿಷ್ಯನೊಬ್ಬ ಗುರುಗಳಿಗೆ 'ಹಸಿವು' ಎಂದನಂತೆ. ಅದೇ ಬೀದಿಯಲ್ಲಿ ವಾಸವಿದ್ದ ಅನುಕೂಲಸ್ಥರೊಬ್ಬರ ಮನೆಯ ಮುಂದೆ ಎರಡೂ ಕೈನೀಡಿ ಬೇಡಿದ ಗೌತನಬುದ್ಧನಿಗೆ ಎಂಥ ಮುಜುಗರ ಕಾದಿತ್ತು ಎಂದರೆ ಆ ಮನೆಯ ಜನ ಜತ್ವ, ಶ್ರೀಮಂತಿಕೆ ಅಧಿಕಾರ ತ್ಯಜಿಸಿ ಹೀಗೆ ಬೌದ್ಧ ಭಿಕ್ಷುವಾಗಿ ಪರಿವರ್ತಿತವಾದ ಬುದ್ಧನ ಬದಲಾವಣೆ ಆ ಜನಕ್ಕೆ ಇಷ್ಟವಾಗುವುದಿಲ್ಲ. ಕೈನೀಡಿ ಬೇಡಿದ ಬುದ್ಧನ ಕೈಗೆ ಎಂಜಲು ಉಗುಳಿ ಇದೇ ನಮ್ಮ ಭಿಕ್ಷೆ ಎನ್ನುತ್ತಾ ರಾಜನಾಗಿದ್ದವನು ಹೀಗಾಗಬೇಕಿತ್ತೆ ಎನ್ನುವ ನೆಟ್ಟ ನೋಟದಲ್ಲಿ ಬುದ್ಧನನ್ನು ನೋಡುತ್ತಾರೆ. ಬುದ್ಧ ವಿಚಲಿತಗೊಳ್ಳಲಿ, ಅಪಮಾನಿತನಾಗಲಿ, ಮತ್ತೆ ಪ್ರತೀಕಾರದಿಂದ ರಾಜಪ್ರಭುತ್ವದ ಕಡೆಗೆ ತೆರಳಿ ಬುದ್ಧತ್ವಕ್ಕೆ ವಿಮುಖನಾಗಿ ಸಿದ್ಧಾರ್ಥನಾಗಲಿ ಎನ್ನುವ ತವಕದಲ್ಲಿ ಹಾಗೆ ಮಾಡುತ್ತಾರೆ. ಆದರೆ ಬುದ್ಧ ಅವರು ಉಗುಳಿದ ಎಂಜಲನ್ನು ತನ್ನ ಬಟ್ಟೆಗೆ ಒರೆಸಿಕೊಂಡು ನೀವು ಕೊಟ್ಟ ಎಂಜಲಿನ ಭಿಕ್ಷೆ ನನಗಾಯಿತು. ಈಗ ಹಸಿದ ನನ್ನ ಶಿಷ್ಯಂದಿರಿಗೇನಾದರೂ ಕೊಡಿ ಎಂದು ಮತ್ತೆ ಕೈಚಾಚುತ್ತಾನೆ. ಆದರೆ ಕೈಚಾಚಿದ ಗೌತಮಬುದ್ಧನ ಕೈಗೆ ಭಿಕ್ಷೆ ನೀಡಲು ಅಲ್ಲಿ ನಿಂತಿದ್ದವರೆಲ್ಲ ಬುದ್ಧನ ಪ್ರಬುದ್ಧತೆ, ಶಾಂತಿ, ಸಮಾಧಾನ, ಸಹನೆ, ತಾಯ್ತನ. ಉದ್ವಿಗ್ನತೆಗೊಳಗಾಗದೇ ಗೆದ್ದು ನಿಂತ ಆತ್ಮಶಕ್ತಿಗಳ ಮುಂದೆ ನಿಲ್ಲಲಾಗದೆ ಅಲ್ಲಿದ್ದವರೆಲ್ಲ ಬುದ್ಧನ ಪಾದಗಳ ಮೇಲೆ ಬಿದ್ದು ಪಶ್ಚಾತ್ತಾಪದ ಕಣ್ಣೀರಿನಲ್ಲಿ ತೊಯ್ದು ತೊಪ್ಪೆಯಾಗಿರುತ್ತಾರೆ. ನಂತರ ಅವರ ತಪ್ಪಿನ ಅರಿವಾಗಿ ಅರಿವಿಗೆ, ಗುರುವಿಗೆ, ಸಹನೆಗೆ ಇರುವ ಶಕ್ತಿ ಎಂಥದ್ದು ಎಂಬುದಕ್ಕೆ ಮನಸೋತು ಬುದ್ಧನ ಅನುಯಾಯಿಗಳಾಗುತ್ತಾರೆ. ಅದಕ್ಕೇ 'ಬುದ್ಧಂ ಶರಣಂ ಗಚ್ಛಾಮಿ' ಎನ್ನುವುದು. ಬುದ್ಧನಂತಹ ಅಪ್ರತಿಮ ಅರಿವಿನ ಗುರುವಿಗೇ ತಾಳ್ಮೆ ಎನ್ನುವುದು ಅನುರೂಪವಾಗಿತ್ತು ಎಂದ ಮೇಲೆ, ಹೊಲಗದ್ದೆಗಳಲ್ಲಿ, ಕಚೇರಿಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಮನೆಗಳಲ್ಲಿ, ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಿಯೋ, ಮಾಹಿತಿ ಕೊರತೆಯಿಂದಲೋ, ಅಸಹನೀಯ ಸಾಂದರ್ಭಿಕ ಕಾರಣಗಳಿಂದಲೋ ಏನೋ, ಮೇಲಾಧಿಕಾರಿಗಳೋ, ದೊಡ್ಡವರೆನ್ನಿಸಿಕೊಂಡವರೋ, ಮಾಲೀಕರೋ, ಅಪ್ಪನೋ, ಅಮ್ಮನೋ, ಅಣ್ಣನೋ, ಅಕ್ಕನೋ, ಯಾರೋ ಒಬ್ಬರು ಏನಾದರು ಮನಸ್ಸಿಗೆ ನೋವಾಗುವಂಥ ಮಾತಾಡಿದಾಗ ನಾವೂ ತಿರುಗಿ ಅದನ್ನೇ ಉಲ್ಟಾ ಸೀದಾ ಬಾರಿಸಿ ಮಾತಿನಲ್ಲೇ ವಾಪಸ್ಸು ಕೊಟ್ಟು ವೀರಾಧೀವೀರರಾದರೆ ಅಲ್ಲಿಗೆ ಇಬ್ಬರ ಸಂಬಂಧವೂ ಹಾಳಾಗುತ್ತದೆ. ಕೆಲಸ ಮಾಡುವ ಜಾಗದಲ್ಲಿ ಆತಂಕದ ವಾತಾವರಣಕ್ಕೆ ನಾವೇ ನಮ್ಮನ್ನು ಸಿಕ್ಕಿಸಿ ತೂಗು ಹಾಕುತ್ತೇವೆ. ಉತ್ತಮ ಬಾಳುವೆಗೆ, ನಿರಂತರ ಆದರಗಳಿಗೆ ಹಾಸುಹೊಕ್ಕಾಗುವುದು ನಮ್ಮ ತಾಳ್ಮೆ, ನಮ್ಮ ಸಹನೆ, 'ಕ್ಷಮಯಾಧರಿತ್ರಿ' ಭೂಮಿಯಂಥ ಕ್ಷಮಾಗುಣ ನಮ್ಮನ್ನು ಆವರಿಸಿದರೆ, ನಮ್ಮ ಮನಸ್ಸೆಂಬ ಮೆಸೇಜ್ ಬಾಕ್ಸಿನಲ್ಲಿ ತಪ್ಪು ಮಾಡಿದವರ ಕ್ಷಮೆಯ ಕುಲುಮೆ ಒಂದಿಲ್ಲೊಂದು ದಿನ ಒಂದಿಲ್ಲೊಂದು ಕ್ಷಣ ತನ್ನ ಅಕ್ಷರದ ಅಚ್ಚಿನ ಮನೆಯಲ್ಲಿ ಕುಟ್ಟುತ್ತಲೇ ಇರುತ್ತದೆ I am sorry please excuse me ಅಂತ! ಏನಂತೀರಿ?

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ



ಮೈಸೂರು, ನ.27–ನಗರದ ಬೋಗಾದಿ ಮುಖ್ಯರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಇತ್ತೀಚೆಗೆ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮಕ್ಕೆ ಸೋಷಿಯಲ್ ಎಜುಕೇಷನ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಮುಖ್ಯಸ್ಥೆ ಡಾ.ಪ್ರೀತಿ ವೆಂಕಟೇಶ್ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳನ್ನು ವೀಕ್ಷಿಸಿ, ಮಾತನಾಡಿ, ಪಾಠದ ಮೂಲಕ ತರಗತಿಯಲ್ಲಿ ಕಲಿತ ಹಲವಾರು ವಿಷಯಗಳ ಮಾದರಿಗಳನ್ನು ತಯಾರಿಸಿದ್ದಾರೆ. ತಾವು ಕಲಿತ ಪಾಠದ ಪ್ರಾಯೋಗಿಕ ಮಾದರಿಗಳನ್ನು ಮಾಡಿ ತಿಳಿಸುವ ಮೂಲಕ ತಾವು ಕ್ರಿಯಾಶೀಲರಾಗಲು ಹಾಗೂ ತಮ್ಮ ಜ್ಞಾನವನ್ನು ಇನ್ನಷ್ಟು ವೃದ್ಧಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸೋಷಿಯಲ್ ಎಜುಕೇಷನ್ ವಿಭಾಗದ ಉಪನ್ಯಾಸಕಿ ಡಾ.ದಿವ್ಯ, ಮಹಾರಾಣಿ ವಿಜ್ಞಾನ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಡಾ.ರೂಪ, ಗಂಗೋತ್ರಿ ಪಬ್ಲಿಕ್ ಶಾಲೆಯ ಅಧ್ಯಕ್ಷ ಟಿ.ರಂಗಪ್ಪ, ಪ್ರಾಂಶುಪಾಲ ಸುನಿಲ್‌ಕುಮಾರ್ ಎಂ.ಎಸ್., ಆಡಳಿತಾಧಿಕಾರಿ ಕಾಂತಿನಾಯಕ್, ಮುಖ್ಯೋಪಾಧ್ಯಾಯ ಫಾರೂಕ್ ಮೊಹಮದ್, ಶಿಕ್ಷಕ ವೃಂದ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಚನಗಳು ವಿದ್ಯಾರ್ಥಿಗಳ ಉಸಿರಾದಾಗ ಮೌಲ್ಯಯುತ ಸಮಾಜ ನಿರ್ಮಾಣ ಸಾಧ್ಯ

ಮರಿಮಲ್ಲಪ್ಪ ಪಪೂ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಅಭಿಮತ



ಮೈಸೂರು, ನ.27– ವಚನಗಳು ವಿದ್ಯಾರ್ಥಿಗಳ ಉಸಿರಾದಾಗ ಮೌಲ್ಯಯುತ ಸಮಾಜ ನಿರ್ಮಾಣ ಸಾಧ್ಯ ಎಂದು ಮೈಸೂರಿನ ಮರಿಮಲ್ಲಪ್ಪ ಪದವಿಪೂರ್ವ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಅಭಿಪ್ರಾಯಪಟ್ಟರು.

ಮೈಸೂರು ತಾಲೂಕಿನ ಕಿರಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಮುದ್ದುಮಾದಪ್ಪ ಅವರ ದತ್ತಿ ಅಂಗವಾಗಿ ಹಮ್ಮಿಕೊಂಡಿದ್ದ 79ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಮತ್ತು 20ನೇ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಬ್ಯಾಗ್ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಕ್ಕಿಂತ ದೊಡ್ಡ ಆಸ್ತಿ ಎಂದರೆ ಶಿಕ್ಷಣ. ಅಂತಹ ಶಿಕ್ಷಣವನ್ನು ಪಡೆಯಲು ಇಂದಿನ ಪೀಳಿಗೆ ಹೆಚ್ಚು ಉತ್ಸುಕರಾಗಬೇಕು. ವಚನ ಸಾಹಿತ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣದಲ್ಲಿ ಅಳವಡಿಸುವುದರಿಂದ ಶಿಕ್ಷಣದ ಘನತೆ ಕೂಡ ಹೆಚ್ಚಾಗುತ್ತದೆ. ವಚನಗಳಲ್ಲಿ ಸತ್ಯ ಇರುವುದರಿಂದ ನೂರಾರು ವರ್ಷಗಳು ಕಳೆದರೂ ಅನೇಕರ ಉಸಿರಾಗಿದೆ. ಅಂತಹ ವಚನ ಸಾಹಿತ್ಯವು ನಮ್ಮ ಜೀವನವನ್ನು ಉತ್ತಮವಾಗಿ ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ ಎಂದರು.

ಕರ್ನಾಟಕದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಮಾತನಾಡಿ, ಜೀವನದಲ್ಲಿ ಗುರಿ ಸ್ಪಷ್ಟವಾಗಿದ್ದು, ಏಕಾಗ್ರತೆ ಮತ್ತು ಪರಿಶ್ರಮದಿಂದ ಸಾಧನೆಯತ್ತ ಹೆಜ್ಜೆ ಹಾಕಿದರೆ ಯಶಸ್ಸು ನಮ್ಮದಾಗುತ್ತದೆ. ನ್ಯಾಯ ಮಾರ್ಗದಿಂದಲ್ಲದೆ ಅಡ್ಡದಾರಿ ಹಿಡಿದು ಪಡೆಯುವ ಗೆಲುವಿಗಿಂತ ಸರಿದಾರಿಯಲ್ಲಿ ನಡೆದು ಪ್ರಯತ್ನಪಟ್ಟ ನಂತರವೂ ಬರಬಹುದಾದ ಸೋಲು ಗೌರವಯುತವಾದುದು. ರಾಜಕಾರಣಿಯೇ ಆಗು, ವೈದ್ಯನೇ ಆಗು, ಶಿಕ್ಷಕನೇ ಆಗು, ನ್ಯಾಯಾಧೀಶನೇ ಆಗು ಮೊದಲು ಮಾನವನಾಗು ಎಂದು ಹೇಳಿದರು.

ನಂತರ 66 ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ವಚನ ವಾಚನ ಮಾಡಿದ 30 ವಿದ್ಯಾರ್ಥಿಗಳಿಗೆ ವಚನ ಪುಸ್ತಕ ಮತ್ತು ವಚನದೀವಿಗೆ ಪ್ರಮಾಣಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ರೂಪ ಕುಮಾರ ಸ್ವಾಮಿ, ವಕೀಲ ರವಿಕುಮಾರ್, ಮುಖ್ಯಶಿಕ್ಷಕಿ ಪುಟ್ಟಮಹದೇವಮ್ಮ, ಶಿಕ್ಷಕರಾದ ಎಂ.ಮಹದೇವಸ್ವಾಮಿ, ಎನ್.ಎಲ್ ಆಶಾ, ಎನ್. ಸರಸ್ವತಿ ಉಪಸ್ಥಿತರಿದ್ದರು.

ಜನಸ್ಪಂದನದ ಅರ್ಜಿಗಳ ಇತ್ಯರ್ಥಕ್ಕೆ 15 ದಿನ ಗಡುವು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ತಮ್ಮ ಗೃಹ ಕಚೇರಿ ಕೃಷ್ಣದಲ್ಲಿ ಸತತ ಏಳು ಗಂಟೆಗಳ ಕಾಲ ಜನತಾದರ್ಶನ ನಡೆಸಿ, ಜನರ ಸಮಸ್ಯೆಗಳನ್ನು ಆಲಿಸಿದರು. ಇಡೀ ದಿನ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಇವುಗಳ ಇತ್ಯರ್ಥಕ್ಕೆ ಸಿಎಂ ಸಿದ್ದರಾಮಯ್ಯ ಅವರು 15 ದಿನ ಗಡುವು ನೀಡಿದ್ದಾರೆ.

ಇಂದು ನಡೆದ ಜನಸ್ಪಂದನ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಇದು ಜನತಾ ದರ್ಶನ ಅಲ್ಲ ಜನಸ್ಪಂದನ ಕಾರ್ಯಕ್ರಮ. ಇಂದು 3,500 ಅರ್ಜಿಗಳು ಬಂದಿವೆ. ಇನ್ನೂ ಜನರು ಬರುತ್ತಿದ್ದಾರೆ. ಎಲ್ಲಾ ಅರ್ಜಿಗಳನ್ನು ಸ್ವೀಕರಿಸಿ ತಕ್ಷಣ ಪರಿಹಾರ ಕೊಡಬೇಕು. ಮುಂದಿನ 15 ದಿನಗಳಲ್ಲಿ ಈ ಎಲ್ಲಾ ಅರ್ಜಿಗಳ ಇತ್ಯರ್ಥ ಆಗಬೇಕು. ಮತ್ತೆ ಜನಸ್ಪಂದನ ಮಾಡಿದಾಗ ಇಷ್ಟು ಅರ್ಜಿ ಬರಬಾರದು ಎಂದರು.

ನಾನು ಬೆಳಗ್ಗೆಯಿಂದಲೇ ಜನರ ಬಳಿಗೆ ತೆರಳಿ ಅವರ ಕುಂದುಕೊರತೆಗಳನ್ನು ಖುದ್ದು ಆಲಿಸಿದ್ದೇನೆ. ಸ್ವೀಕೃತವಾಗಿರುವ ಎಲ್ಲ ಅರ್ಜಿಗಳ ಬಗ್ಗೆ ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಬೋಗಸ್ ಜನತಾ ದರ್ಶನ : ಏತನ್ಮಧ್ಯೆ, ಜನತಾ ದರ್ಶನವನ್ನು ಬೋಗಸ್ ಎಂದು ಪ್ರತಿಪಕ್ಷ ಬಿಜೆಪಿ ಟೀಕಿಸಿದ್ದು, ಅವರೊಬ್ಬರೇ (ಸಿದ್ದರಾಮಯ್ಯ) ಜನತಾ ದರ್ಶನ ನಡೆಸಿದರೆ ಏನೂ ಆಗುವುದಿಲ್ಲ ಎಂದು ಹೇಳಿದೆ.

ಸಿದ್ದರಾಮಯ್ಯ ಅವರು ಜನತಾ ದರ್ಶನ ನಡೆಸುವ ಮೊದಲು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಸಾರ್ವಜನಿಕರಿಗೆ ದರ್ಶನ ಮಾಡಿಸಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.

ಸರ್ಕಾರ ರಚನೆಯಾಗಿ ಏಳು ತಿಂಗಳಾದರೂ ಈಗಲೂ ಸಚಿವರು ಯಾರು ಎಂಬುದು ಜನರಿಗೆ ಗೊತ್ತಿಲ್ಲ. ಮುಖ್ಯಮಂತ್ರಿಗಳು ನಡೆಸುತ್ತಿರುವುದು ಜನತಾ ದರ್ಶನವಲ್ಲ. ಅದೊಂದು ಬೋಗಸ್ ದರ್ಶನ. ಮೊದಲು ಸಂಪುಟದ ಸಚಿವರನ್ನು ಜನತೆಗೆ ಪರಿಚಯ ಮಾಡಿ ಎಂದು ತಿರುಗೇಟು ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಂಗಳವಾರ 28 ನವೆಂಬರ್ 2023

ಮೈಸೂರಲ್ಲಿ ಭಕ್ತಿ ಭಾವ, ಸಂಭ್ರಮದ ಪುತ್ತರಿ ಹಬ್ಬ ಆಚರಣೆ

ಕೊಡವ ಸಮಾಜದಲ್ಲಿ ಸಾಂಪ್ರದಾಯಿಕ ಉಡುಗೆ–ತೊಡುಗೆ, ಧಾರ್ಮಿಕ ವಿಧಿ ವಿಧಾನದ ಜೊತೆಗೆ ನೃತ್ಯ ಸಂಭ್ರಮಾಚರಣೆ



ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆಯಲ್ಲಿರುವ ಕೊಡವ ಗೌಡ ಸಮಾಜದಲ್ಲಿಯೂ ಸೋಮವಾರ 'ಪುತ್ತರಿ ಹಬ್ಬ'ವನ್ನು ಸಂಭ್ರಮದಿಂದ ಆಚರಿಸಲಾಯಿತು.



ವಿಜಯನಗರ 2ನೇ ಹಂತದಲ್ಲಿರುವ ಕೊಡವ ಸಮಾಜ ಸಮುದಾಯ ಭವನದಲ್ಲಿ ಕೊಡವ ಜಾನಪದ ನೃತ್ಯ ಪ್ರದರ್ಶಿಸುತ್ತಿರುವ ಪುಟಾಣಿಗಳು.

ಮೈಸೂರು, ನ.27(ಎಂಕೆ)– ಕಾವೇರಮ್ಮನ ಸ್ಮರಣೆಯೊಂದಿಗೆ ಧಾನ್ಯ ಲಕ್ಷ್ಮಿಯನ್ನು ಮನೆಗೆ ತುಂಬಿಸಿಕೊಳ್ಳುವ ಕೊಡವರ ಸಾಂಪ್ರದಾಯಿಕ 'ಪುತ್ತರಿ(ಹುತ್ತರಿ) ಹಬ್ಬ'ವನ್ನು ಶ್ರದ್ಧಾಭಕ್ತಿಯಿಂದ ಸೋಮವಾರ ಮೈಸೂರಿನಲ್ಲಿ ಆಚರಿಸಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೊಡವ ಸಮಾಜ ಸಮುದಾಯ ಭವನದಲ್ಲಿ ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ಭಕ್ತಿ–ಭಾವ ಹಾಗೂ ಸಂಭ್ರಮ–ಸಡಗರದೊಂದಿಗೆ 'ಪುತ್ತರಿ ಹಬ್ಬ' ಆಚರಿಸಿದ ಸಾವಿರಾರು ಮಂದಿ ಕೊಡವರು, ಕೊಡವರ ದೈವ ಇಗ್ಗುತಪ್ಪ ಹಾಗೂ ತಾಯಿ ಕಾವೇರಿ ಮಾತೆಯ ಅನುಗ್ರಹಕ್ಕಾಗಿ ಗದ್ದೆಯಲ್ಲಿ 'ಕದಿರು'(ಭತ್ತದ ತೆನೆ) ತೆಗೆದು ಪ್ರಾರ್ಥಿಸಿದರು.

ಇಗ್ಗುತಪ್ಪ ದೇವರಿಗೆ ವಿಶೇಷ ಪೂಜಾ ಕೈಂಕರ್ಯದೊಂದಿಗೆ ದೀಪ(ಒಕ್ಕಣಿ ಮಾಡುವ ಕಣದ ಮಧ್ಯದಲ್ಲಿರುವ ದೀಪಾಲಂಕೃತ ಕಂಬ) ಬೆಳಗಿಸಿ ವಿದ್ಯುಕ್ತ ಚಾಲನೆ ನೀಡಲಾಯಿತು. ಪುರುಷರು 'ಕರಿ ಕುಪ್ಪಸ' (ಕುಪ್ಯಾ), 'ಪೀಚೆಕತ್ತಿ', 'ಮಂಡೆತುಣಿ' (ಕೊಡವರ ಪೇಟ), 'ಚೇಲೆ' ಧರಿಸಿ ಗಮನ ಸೆಳೆದರೆ, ತುಂಬು ತೋಳಿನ ಕೆಂಪು ಸೀರೆಯಲ್ಲಿ ಕಂಗೊಳಿಸುತ್ತಿದ್ದ ಮಹಿಳೆಯರು ಕೊಡಗಿನ ಸಾಂಪ್ರದಾಯಿಕ ನೃತ್ಯಗಳ ಪ್ರದರ್ಶನ ನೀಡಿ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಪುತ್ತರಿ ಹಬ್ಬ ಆಚರಣೆಯಲ್ಲಿ ಕೊಡವ ಸಮಾಜ ಯೂತ್ ವಿಂಗ್ ಉದ್ಘಾಟನೆ...



ಪುತ್ತರಿ ಹಬ್ಬ ಆಚರಣೆ ಸಂದರ್ಭದಲ್ಲಿ ಕೊಡವ ಸಮಾಜ ಯೂತ್ ವಿಂಗ್ ಮೈಸೂರು ಅನ್ನು ಕೊಡವ ಸಮಾಜದ ಅಧ್ಯಕ್ಷ ಪೊಂಜಾಂಡ ಗಣಪತಿ ಉದ್ಘಾಟಿಸಿದರು. ಕೊಡವ ಸಮಾಜ ಯೂತ್ ವಿಂಗ್‌ನ ಅಧ್ಯಕ್ಷರಾಗಿ ಕಾಟೇರ ವೇದಿಕ್ ಉತ್ತಯ್ಯ ಆಯ್ಕೆಯಾಗಿದ್ದು, ಉಳಿದ ಪದಾಧಿಕಾರಿಗಳನ್ನು ಸದ್ಯದಲ್ಲಿಯೇ ನೇಮಿಸಲಾಗುವುದು ಎಂದರು.

'ಬೊಳಕಾಟ್(ಸ್ವಾಗತ ಹಾಡು)' ಹಾಡು ಹಾಗೂ ನೃತ್ಯದೊಂದಿಗೆ ಆರಂಭಗೊಂಡ ಪುತ್ತರಿ ಸಡಗರದಲ್ಲಿ 'ಕಾವೇರಮ್ಮ ದೇವಿ ಕಾಪಾಡು', 'ಭಾರತ ದೇಶದ ವೀರ ಪ್ರಜೆಗಳಿಗೆ ಒಳ್ಳೆಯದಾಗಲಿ', 'ನಮೋ ನಮೋ ಸಮಸ್ತೆ ದೇವಿ' ಹಾಡುಗಳ ಸಾಲಿನೊಂದಿಗೆ 'ಉಮ್ಮತಾಟ್' ನೃತ್ಯ ರೋಮಾಂಚನ ನೀಡಿತು.

ಬಳಿಕ ಒಗ್ಗಟ್ಟಿನ ಸಂದೇಶ ನೀಡುವ ಕೊಡವ ಜಾನಪದ ನೃತ್ಯಗಳಾದ 'ಪುತ್ತರಿ ಕೋಲಾಟ', 'ಕತ್ತಿಯಾಟ್', 'ಆಟ್ ಪಾಟ್' ಹಾಗೂ 'ಪರಿಯಕಳಿ' ನೃತ್ಯ ಪ್ರದರ್ಶನ ನೀಡಲಾಯಿತು.

ಕದಿರು ತೆಗೆದು ಧಾನ್ಯಲಕ್ಷ್ಮಿ ಸ್ವಾಗತ: ನಂತರ ರಾತ್ರಿ 8.20ಕ್ಕೆ ಗದ್ದೆಗೆ ತೆರಳಿ, ಕೊಡವ ಸಮಾಜದ ಮುಖಂಡ ಕುಟ್ಟಿಮಡ ಮುತ್ತಪ್ಪ ಅವರು ಗಾಳಿಯಲ್ಲಿ ಗುಂಡು ಹಾರಿಸಿದರೆ, 'ಬಿಳಿ ಕುಪ್ಪಸ' ತೊಟ್ಟ ನಾಯಕಂಡ ರವಿ ಅವರು, ಭೂ ತಾಯಿಯನ್ನು ಪೂಜಿಸಿ ಪೊಲಿ ಪೊಲಿ (ಒಲಿದು ಬಾ ದೇವಾ) ದೇವಾ ಎಂದು ಮೊರೆಯುತ್ತಾ ಕದಿರು ತೆಗೆದು ಎಲ್ಲರಿಗೂ ವಿತರಣೆ ಮಾಡಿದರು. ಬಳಿಕ ಧಾನ್ಯಲಕ್ಷ್ಮಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಲಾಯಿತು. ಕದಿರು ವಿತರಣೆಯಾದ ಬಳಿಕ ತಂಬಿಟ್ಟು ಪ್ರಸಾದ ನೀಡಲಾಯಿತು.

ಸಡಗರ–ಸಂಭ್ರಮ: ಕೊಡವರಿಂದ ತುಂಬಿ ತುಳುಕುತ್ತಿದ್ದ ಭವನದಲ್ಲಿ ಕೊಡವ ಜಾನಪದ ನೃತ್ಯಗಳ ಝೇಂಕಾರ, ನೃತ್ಯ ಪ್ರದರ್ಶನ ನೀಡಿದವರಿಗೆ ದೊರೆತ ಚಪ್ಪಾಳೆಯ ಪ್ರೋತ್ಸಾಹ ಹಬ್ಬದ ಸಂಭ್ರಮದಲ್ಲಿ ಎಲ್ಲರೂ ಮಿಂದೇಳುವಂತೆ ಮಾಡಿತ್ತು. ಪುಟಾಣಿ ಮಕ್ಕಳು ಸೇರಿದಂತೆ ಎಲ್ಲಾ ವಯೋಮಾನದವರು ಹೆಜ್ಜೆ ಹಾಕಿದರಲ್ಲದೆ ಪರಸ್ಪರ ಶುಭಾಶಯಗಳ ವಿನಿಮಯದೊಂದಿಗೆ ಪುತ್ತರಿ ಹಬ್ಬ ಆಚರಿಸಿದರು.

ಬಹುಮಾನ ವಿತರಣೆ: ವಿರಾಜಪೇಟೆ ಬಾಳುಗೋಡುವಿನಲ್ಲಿ ಇತ್ತೀಚೆಗೆ ನಡೆದ ಹಾಕಿ ಹಾಗೂ ಇನ್ನಿತರೆ ಸ್ಪರ್ಧೆಗಳಲ್ಲಿ ಮೈಸೂರು ಕೊಡವ ಸಮಾಜದ ವತಿಯಿಂದ ಭಾಗವಹಿಸಿ ವಿಜೇತರಾದ ತಂಡಗಳಿಗೆ ಬಹುಮಾನ ವಿತರಿಸಿ ಅಭಿನಂದಿಸಲಾಯಿತು. ಅಲ್ಲದೆ ಮುಂದಿನ ದಿನಗಳಲ್ಲಿಯೂ ಮೈಸೂರು ಕೊಡವ ಸಮಾಜದ ವತಿಯಿಂದ ಭಾಗವಹಿಸಿ, ಹೆಚ್ಚಿನ ಸಾಧನೆ ಮಾಡುವಂತೆ ಪ್ರೋತ್ಸಾಹಿಸಲಾಯಿತು.

ಅಧ್ಯಕ್ಷರ ಶುಭಾಶಯ: ಈ ವೇಳೆ ಕೊಡವ ಸಮಾಜ ಮೈಸೂರು ಅಧ್ಯಕ್ಷ ಪೊಂಜಾಂಡ ಗಣಪತಿ, ಎಲ್ಲರನ್ನೂ ಸ್ವಾಗತಿಸಿದರಲ್ಲದೆ ಹಬ್ಬದ ಆಚರಣೆಗೆ ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸಿದರು. ಹಾಗೆಯೇ ಪುತ್ತರಿ ಹಬ್ಬದ ಶುಭಾಶಯ ತಿಳಿಸಿದರು. ಅವರೊಂದಿಗೆ ಉಪಾಧ್ಯಕ್ಷ ಮಾಚಿಮಡ ನಾಣಯ್ಯ, ಕಾರ್ಯದರ್ಶಿ ಕೆಟೋಳ್ಳಿರ ರವಿ ಬೆಳ್ಳಿಯಪ್ಪ, ಖಜಾಂಚಿ ಇಟ್ಟಿರ ಕಾಶಿಯಪ್ಪ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟಿರ ಡಯಾನ ಪೂವಯ್ಯ ಹಾಗೂ ಇನ್ನಿತರ ಪದಾಧಿಕಾರಿಗಳು ಸಾಥ್ ನೀಡಿದರು.

ಖಾಸಗಿ ರೆಸಾರ್ಟ್‌ನಲ್ಲಿ ವಜ್ರದ ನೆಕ್ಲೇಸ್, ಓಲೆ ಕಳವು; ಮುಂಬೈ ಮೇಕಪ್ ಆರ್ಟಿಸ್ಟ್‌ಗಳ ಮೇಲೆ ಸಂಶಯ

- ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು
- ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಘಟನೆ

ಮೈಸೂರು,ನ.27–ಮೈಸೂರಿನ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಆರತಕ್ಷತೆ ಸಂದರ್ಭದಲ್ಲಿ ಕೊಠಡಿಯೊಂದರಿಂದ 8 ಲಕ್ಷ ರೂ. ಮೌಲ್ಯದ ವಜ್ರದ ನೆಕ್ಲೇಸ್ ಹಾಗೂ ವಜ್ರದ ಓಲೆ ಕಳವಾಗಿದ್ದು, ಮುಂಬೈನಿಂದ ಮೇಕಪ್ ಮಾಡಲು ಬಂದಿದ್ದ ಇಬ್ಬರು ಮೇಕಪ್ ಆರ್ಟಿಸ್ಟ್‌ಗಳ ವಿರುದ್ಧ ಸಂಶಯ ವ್ಯಕ್ತಪಡಿಸಿ, ಪೊಲೀಸರಿಗೆ ದೂರು ನೀಡಲಾಗಿದೆ.

ಮೈಸೂರಿನ ಸಿದ್ಧಾರ್ಥನಗರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಾಗಿರುವ ರಾಜೇಂದ್ರಕುಮಾರ್(58) ಎಂಬುವರ ಕುಟುಂಬದವರೇ ವಜ್ರದ ಆಭರಣಗಳನ್ನು ಕಳೆದುಕೊಂಡವರಾಗಿದ್ದು, ರಾಜೇಂದ್ರಕುಮಾರ್ ಅವರ ಪುತ್ರ ವೈಭವ್ ಅವರ ಆರತಕ್ಷತೆ ಸಮಾರಂಭವನ್ನು ಹೂಟಗಳ್ಳಿಯ ಕೆಆರ್‌ಎಸ್ ರಸ್ತೆಯಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ನ.19ರಂದು ಏರ್ಪಡಿಸಲಾಗಿತ್ತು. ರೆಸಾರ್ಟ್‌ನ ಒಂದು ಕೊಠಡಿಯಲ್ಲಿ ರಾಜೇಂದ್ರಕುಮಾರ್ ಪತ್ನಿ ಸಂತೋಷಕುಮಾರಿ, ಪುತ್ರಿ ಪ್ರಿಯಾಂಕ ಹಾಗೂ ಭಾವಿ ಸೊಸೆ ಪೂರ್ವ ತಂಗಿದ್ದರು. ಈ ಸಮಾರಂಭದಲ್ಲಿ ಮೇಕಪ್ ಮಾಡಲು ಮುಂಬೈನ ನಿಶಾ ಚಾಂದಿನಿ ಹಾಗೂ ಗೋಯಿಲ್ ಕೋಮಲ್ ಎಂಬ ಯುವತಿಯರು ಆಗಮಿಸಿದ್ದರು. ಅವರಿಗೆ ರಾಜೇಂದ್ರಕುಮಾರ್ ಪುತ್ರಿ ತನ್ನ ವಜ್ರದ ಆಭರಣಗಳನ್ನು ತೋರಿಸಿದ್ದರು. ಪ್ರಿಯಾಂಕ ಮತ್ತು ಪೂರ್ವ ಮೇಕಪ್ ಬಳಿಕ ಫೋಟೋಶೂಟ್‌ಗೆ ತೆರಳಿ ಅಲ್ಲಿಂದ ಆರತಕ್ಷತೆ ವೇದಿಕೆಗೆ ಬಂದಿದ್ದಾರೆ. ನಂತರ ಮೇಕಪ್ ಮಾಡಿಸಿಕೊಂಡು ಸಂತೋಷಕುಮಾರಿ ಅವರು ಮೇಕಪ್ ಆರ್ಟಿಸ್ಟ್‌ಗಳನ್ನು ರೂಂನಲ್ಲೇ ಬಿಟ್ಟು ಆರತಕ್ಷತೆ ವೇದಿಕೆಗೆ ತೆರಳಿದ್ದರು. ಅಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಮುಂಬೈನ ಈ ಮೇಕಪ್ ಆರ್ಟಿಸ್ಟ್‌ಗಳು ರೂಂ ಅನ್ನು ಲಾಕ್ ಮಾಡಿಕೊಂಡು ಕೀ ಇರುವ ಕಾರ್ಡ್ ಅನ್ನು ಸಂತೋಷಕುಮಾರಿಯವರಿಗೆ ನೀಡಿ ಮುಂಬೈಗೆ ಹಿಂತಿರುಗಿದ್ದಾರೆ. ಮರುದಿನ ಬೆಳಿಗ್ಗೆ ರಾಜೇಂದ್ರ ಕುಮಾರ್ ಪುತ್ರಿ ತನ್ನ ಬ್ಯಾಗ್ ಗಮನಿಸಿದಾಗ 8 ಲಕ್ಷ ರೂ. ಮೌಲ್ಯದ ವಜ್ರಾಭರಣಗಳು ಕಳವಾಗಿರುವುದು ಗೊತ್ತಾಗಿದೆ. ಈ ಆಭರಣಗಳನ್ನು ಮುಂಬೈನಿಂದ ಮೇಕಪ್ ಮಾಡಲು ಆಗಮಿಸಿದ್ದ ಆರ್ಟಿಸ್ಟ್‌ಗಳು ಕಳವು ಮಾಡಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ರಾಜೇಂದ್ರಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಫ್ಲಾಟ್ ಬಾಡಿಗೆ ಪಡೆಯುವ ನೆಪದಲ್ಲಿ ವಿಜ್ಞಾನಿಗೆ 1.02 ಲಕ್ಷ ರೂ. ವಂಚನೆ

ಮೈಸೂರು,ನ.27–ಮಹಾರಾಷ್ಟ್ರದಲ್ಲಿರುವ ಫ್ಲಾಟ್ ಬಾಡಿಗೆಗೆ ಪಡೆಯುವುದಾಗಿ ತಿಳಿಸಿ, ಸೈನಿಕನ ಹೆಸರಿನಲ್ಲಿ ವಿಜ್ಞಾನಿಯೋರ್ವರಿಗೆ ಆನ್‌ಲೈನ್ ಮೂಲಕ 1.02 ಲಕ್ಷ ರೂ. ವಂಚಿಸಲಾಗಿದೆ.

ದಟ್ಟಗಳ್ಳಿಯ ಶಿವಲೀಲಾ ಎಂಎಂಜಿ ಗಾರ್ಡೇನಿಯಾದಲ್ಲಿ ವಾಸವಿರುವ ವಿಜ್ಞಾನಿ ಸಿ.ಎಸ್.ಶರ್ಮ(53) ವಂಚನೆಗೊಳಗಾದವರಾಗಿದ್ದು, ಮಹಾರಾಷ್ಟ್ರದ ನಾಗ್ಪುರದಲ್ಲಿರುವ ಫ್ಲಾಟ್ ಅನ್ನು ಬಾಡಿಗೆಗೆ ನೀಡುವುದಾಗಿ ಮ್ಯಾಜಿಕ್ ಬ್ರಿಕ್ಸ್ ಡಾಟ್ ಕಾಂ ವೆಬ್‌ಸೈಟ್‌ನಲ್ಲಿ ಇವರು ಜಾಹೀರಾತು ನೀಡಿದ್ದರು. 8144851625 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನನ್ನು ಆಶೀಶ್‌ಕುಮಾರ್ ಎಂದು ಪರಿಚಯಿಸಿಕೊಂಡು ಆರ್ಮಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಲ್ಲದೇ, ಆರ್ಮಿ ಅಕೌಂಟ್ಸ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಮ್‌ಸಿಂಗ್ ಗುರ್ಜಾಸ್ ಎಂಬಾತನನ್ನು ಪರಿಚಯಿಸಿದ್ದಾನೆ. ಈ ವ್ಯಕ್ತಿಯು ಮೊದಲಿಗೆ ತಲಾ 5 ರೂ.ಗಳಂತೆ 2 ಬಾರಿ ಶರ್ಮ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಿ ಪರಿಶೀಲಿಸಿಕೊಳ್ಳುವಂತೆ ತಿಳಿಸಿದ್ದಾನೆ ನಂತರ ಟೋಕನ್ ಅಡ್ವಾನ್ಸ್ 50 ಸಾವಿರ ನೀಡಲು ಮೊದಲು ಶರ್ಮ ಅವರು ಆತನ ಖಾತೆಗೆ 50 ಸಾವಿರ ರೂ. ಜಮೆ ಮಾಡಿದರೆ 1 ಲಕ್ಷ ರೂ.ಗಳನ್ನು ಅವರ ಖಾತೆಗೆ ವರ್ಗಾಯಿಸುವುದಾಗಿ ತಿಳಿಸಿದ್ದಾನೆ. ಅದನ್ನು ನಂಬಿದ ಶರ್ಮ ಅವರು ಮೊದಲಿಗೆ 9 ಸಾವಿರ ರೂ. ವರ್ಗಾಯಿಸಿದಾಗ ತನಗೆ ಹಣ ಜಮೆ ಆಗಿಲ್ಲ ಎಂದು ಹೇಳಿದ ವಂಚಕ ಶರ್ಮ ಹಂತ ಹಂತವಾಗಿ 1.02 ಲಕ್ಷ ರೂ. ವರ್ಗಾಯಿಸಿದ್ದರೂ ಕೂಡ ತನ್ನ ಖಾತೆಗೆ ಹಣ ಜಮೆ ಆಗಿಲ್ಲ ಎಂದು ತಿಳಿಸಿ ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಶೋಧನಾ ವಿದ್ಯಾರ್ಥಿಯಿಂದ ಮಾರ್ಗದರ್ಶಕ ಪ್ರೊಫೆಸರ್ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲು

ಮೈಸೂರು, ನ. 27– ಮೈಸೂರಿನ ಮಾನಸಗಂಗೋತ್ರಿಯ ಮೈಕ್ರೋಬಯಾಲಜಿ ವಿಭಾಗದ ಪ್ರೊಫೆಸರ್ ಶುಭ ಗೋಪಾಲ್ ವಿರುದ್ಧ ವಿದ್ಯಾರ್ಥಿನಿಯೋರ್ವರು ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಶಾರದಾದೇವಿನಗರ ನಿವಾಸಿಯಾಗಿರುವ ಸಿ.ಹರ್ಷಾ ತೇಜಸ್ವಿನಿ(29), ತಾನು 2021ರ ಏಪ್ರಿಲ್ 2ರಿಂದ ಮೈಕ್ರೋ ಬಯಾಲಜಿ ವಿಭಾಗದಲ್ಲಿ ಪ್ರೊ. ಶುಭ ಗೋಪಾಲ ಅವರ ಬಳಿ ರೀಸರ್ಚ್ ಸ್ಕಾಲರ್ ಆಗಿದ್ದು, ಆರಂಭದಿಂದಲೂ ಅವರು ತನಗೆ ಜಾತಿ ನಿಂದನೆ ಮಾಡಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು. ನನ್ನ ಫೆಲೋಶಿಪ್ ಬಿಲ್‌ಗಳಿಗೆ ಸಹಿ ಮಾಡಲು ಉಡುಗೊರೆಗಳನ್ನು ತರಿಸಿಕೊಂಡಿದ್ದಲ್ಲದೇ ಫೈವ್ ಸ್ಟಾರ್ ಹೋಟೆಲ್‌ಗೆ ತನ್ನ ಸಹಪಾಠಿಗಳೊಂದಿಗೆ ತನ್ನನ್ನು ಕರೆದೊಯ್ದು ಅಲ್ಲಿನ ಬಿಲ್ ನನ್ನಿಂದಲೇ ಕಟ್ಟಿಸುತ್ತಿದ್ದರು. ಈ ಬಗ್ಗೆ ಮೈಸೂರು ವಿವಿ ಕುಲಪತಿ ಹಾಗೂ ಕುಲಸಚಿವರಿಗೆ ದೂರು ನೀಡಿದರೆ ಅವರು ದೂರನ್ನು ವಾಪಸ್ ತೆಗೆದುಕೊಂಡು ಮಾರ್ಗದರ್ಶಕರನ್ನು ಬದಲಾಯಿಸಿಕೊಳ್ಳುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ನೀಡಿದ ದೂರಿನನ್ವಯ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರೊ. ಶುಭ ಗೋಪಾಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.



ವಿದ್ಯಾರ್ಥಿ ಬೈಕ್ ಕಳವು

ಮೈಸೂರು,ನ.27–ವಿದ್ಯಾರ್ಥಿಯೋರ್ವನ ಬೈಕ್ ಅನ್ನು ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಕಳವು ಮಾಡಲಾಗಿದೆ. ಸಾತಗಳ್ಳಿ ಬಿ ಝೋನ್ ನಿವಾಸಿಯಾಗಿದ್ದು, ಬಿಬಿಎ ಅಂತಿಮ ವರ್ಷದ ವಿದ್ಯಾರ್ಥಿಯಾಗಿರುವ ಪಿ.ಪ್ರಜ್ವಲ್(21) ಬೈಕ್ ಕಳೆದುಕೊಂಡವರಾಗಿದ್ದು, ಈತ ನ.23ರಂದು ಮಧ್ಯಾಹ್ನ ಕಾಳಿದಾಸ ರಸ್ತೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದ ಎದುರಿನ ಪಾರ್ಕಿಂಗ್ ಸ್ಥಳದಲ್ಲಿ ತನ್ನ ಹೋಂಡಾ ಯುನಿಕಾರ್ನ್ ಬೈಕ್ ಅನ್ನು (ಕೆಎ 53–ಆರ್ 5496) ನಿಲ್ಲಿಸಿ ಸಮೀಪದ ಚೇಂಜ್ ಮೇಕರ್ ಕೆರಿಯರ್ ಅಕಾಡೆಮಿಗೆ ತರಗತಿಗಾಗಿ ತೆರಳಿ ಹಿಂತಿರುಗುವಷ್ಟರಲ್ಲಿ ಆತನ ಬೈಕ್ ಅನ್ನು ಕಳವು ಮಾಡಲಾಗಿತ್ತು. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಎಂ.ದೀಕ್ಷಾಗೆ ಕನ್ನಡ ವಿಕಾಸ ರತ್ನ ಪ್ರಶಸ್ತಿ



ಮೈಸೂರು: ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಹೊಳೆನರಸೀಪುರ ತಾಲೂಕಿನ ದೀಕ್ಷಾ ಎಂ. (7 ವರ್ಷ) ಅವರಿಗೆ ಕನ್ನಡ ವಿಕಾಸ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ನವೆಂಬರ್ 30ರಂದು ಮೈಸೂರು ನಗರದ ಕಲಾಮಂದಿರದಲ್ಲಿ ನಡೆಯುವ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ವೇದಿಕೆ ಸಂಸ್ಥಾಪಕ ಅಧ್ಯಕ್ಷೆ ಎಚ್.ಎಲ್.ಯಮುನಾ ತಿಳಿಸಿದ್ದಾರೆ.

ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ನ27– 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿಗಳನ್ನು sw.kar.nic.in ನಲ್ಲಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಾರ್ಷಿಕ ವರಮಾನ ರೂ. 2.5 ಲಕ್ಷದೊಳಗಿರಬೇಕು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು, ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ|| ಬಾಬು ಜಗಜೀವನ ರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು–12, ದೂರವಾಣಿ ಸಂಖ್ಯೆ : 0821–2520910 ಸಂಪರ್ಕಿಸಬಹುದು.

ಜೆಎಸ್‌ಎಸ್ ಕಾಲೇಜಲ್ಲಿ ಸಂವಿಧಾನ ದಿನಾಚರಣೆ



ಮೈಸೂರು: ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಇಂದು ಸಂವಿಧಾನ ದಿನಾಚರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಭಾರತ ಸಂವಿಧಾನವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜ್ಯಾತಾತೀತತೆ ಇಂತಹ ಹಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಂವಿಧಾನವಾಗಿದ್ದು, ಈ ಸಂವಿಧಾನ ರಚನೆಯಲ್ಲಿ ಸಂವಿಧಾನ ರಚನಾಕಾರರ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವ ಕಾರ್ಯ ನಮ್ಮೆಲ್ಲರದ್ದಾಗಿದೆ. ನಮ್ಮ ಸಂವಿಧಾನವು ಒಂದು ಬೃಹತ್ ಲಿಖಿತ ದಾಖಲೆಯಾಗಿದ್ದು, ಹಕ್ಕು, ಕರ್ತವ್ಯ, ಆಡಳಿತ ವ್ಯವಸ್ಥೆ ಇವೆಲ್ಲದರ ಮಾರ್ಗದರ್ಶಿಯಾಗಿದೆ ಎಂದು ಹೇಳಿ ಸಂವಿಧಾನದ ಪ್ರಸ್ತಾವನೆಯನ್ನು ಪ್ರತಿಜ್ಞಾವಿಧಿಯನ್ನಾಗಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ.ಪಿ.ಮಹದೇವಸ್ವಾಮಿ, ಸಂವಿಧಾನ ದಿನದ ಆಶಯ, ಭಾರತ ಸಂವಿಧಾನ ರಚನೆಗಾಗಿ ನಡೆದ ಹೋರಾಟ, ಸಂವಿಧಾನ ರಚನಾ ಸಭೆಯ ರಚನೆ, ಕರಡು ಸಮಿತಿಯ ರಚನೆ ಮತ್ತು ಅಂಬೇಡ್ಕರ್‌ರವರ ಪಾತ್ರ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಮಹತ್ವದ ಬಗ್ಗೆ ಮಾತನಾಡಿ, ಸಂವಿಧಾನ ರಚನಾ ಸಭೆಯ ಆಶೋತ್ತರಗಳಿಗೆ ಅನುಸಾರ ಭವಿಷ್ಯ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ ಸ್ವಾಗತಿಸಿ, ಸಂವಿಧಾನ ದಿನದ ಔಚಿತ್ಯ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಆರ್.ಜಿ ಆಶಾ ಕಾರ್ಯಕ್ರಮ ನಿರೂಪಿಸಿದರು.

ರಕ್ತದಾನ ಮಾಡಿ ಜೀವಗಳ ಉಳಿಸಿ...



ಸಂತ ಫಿಲೋಮಿನಾ ಕಾಲೇಜಿನ ಯೂತ್ ರೆಡ್ ಕ್ರಾಸ್ ಯೂನಿಟ್, ಲಯನ್ಸ್ ಬ್ಲಡ್ ಸೆಂಟರ್, ಮೈಸೂರು ಜೀವಧಾರ ಸಹಯೋಗದಲ್ಲಿ ಇತ್ತೀಚೆಗೆ ಹೆಚ್‌ಡಿಎಫ್‌ಸಿ ಬ್ಯಾಂಕ್ ಪ್ರಾಯೋಜಕತ್ವದಲ್ಲಿ ರಕ್ತದಾನ ಶಿಬಿರ ಏರ್ಪಡಿಸಿತ್ತು. ಈ ವೇಳೆ ಸಮಾಜ ಕಾರ್ಯ ವಿಭಾಗದ ಮ್ಯಾಥ್ಯೂ, ರೆ.ಡಾ.ಬರ್ನಾರ್ಡ್ ಪ್ರಕಾಶ್ ಬರ್ನಿಸ್(ರೆಕ್ಟರ್), ರೆ.ಫಾ. ಮಾರಿಯಾ ಕ್ಸೇವಿಯರ್ (ವೈಸ್ ರೆಕ್ಟರ್), ಡಾ.ರವಿ ಜೆಡಿ ಸಲ್ಡಾನಾ (ಪ್ರಿನ್ಸಿಪಾಲ್), ಡಾ.ಚಂದನಾ (ಜೀವಧಾರ ಬ್ಲಡ್ ಬ್ಯಾಂಕ್), ಪೂರ್ಣಿಮಾ (ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್, ಹೆಚ್‌ಡಿಎಫ್‌ಸಿ ಸಿಟಿ ಬ್ರಾಂಚ್) ವಿಲಿಯಂ, ಜೋಸೆಫ್ ಇತರರು ಉಪಸ್ಥಿತರಿದ್ದರು.

ಗಾಜಾ ಪಟ್ಟಿಯಲ್ಲಿ 45 ದಿನಗಳಲ್ಲಿ ಇಸ್ರೇಲ್ ಸೇನೆಯಿಂದ 50 ಮಂದಿ ಪತ್ರಕರ್ತರ ಹತ್ಯೆ!

ಟೆಲ್ ಅಲೀವ್: ಹಮಾಸ್–ಇಸ್ರೇಲ್ ಸಂಘರ್ಷದ ಆರಂಭದಿಂದ ಈವರೆಗೂ ಕನಿಷ್ಠ 70 ಮಂದಿ ಪತ್ರಕರ್ತರು ಅಥವಾ ಮಾಧ್ಯಮ ಉದ್ಯೋಗಿಗಳು ಹತ್ಯೆಯಾಗಿದ್ದಾರೆ. ಹಲವರು ಕಣ್ಮರೆಯಾಗಿದ್ದಾರೆ ಎಂದು ಪ್ಯಾಲೆಸ್ಟೈನ್ ಪತ್ರಕರ್ತರ ಸಿಂಡಿಕೇಟ್‌ನ ಡೇಟಾ ಹೇಳಿದೆ.

ಆರ್‌ಎಸ್‌ಎಫ್‌ನ ಮಾಹಿತಿಯ ಪ್ರಕಾರ ಗಾಜಾದಲ್ಲಿ ಪತ್ರಿಕೋದ್ಯಮವನ್ನು ನಿರ್ನಾಮ ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದೆ.

ಕಳೆದ 3 ದಿನಗಳಲ್ಲಿ ಪ್ಯಾಲೆಸ್ಟೈನ್‌ನ 10ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ಅ.7ರಿಂದ ನ.22ವರೆಗೆ ಹತ್ಯೆಗೀಡಾದ ಮಾಧ್ಯಮದವರ ಸಂಖ್ಯೆ 48ಕ್ಕೆ ಏರಿಕೆಯಾಗಿದೆ ಎಂದು ಆರ್‌ಎಸ್‌ಎಫ್ ಎಕ್ಸ್‌ನಲ್ಲಿ ತಿಳಿಸಿದೆ. ಆರ್‌ಎಸ್‌ಎಫ್‌ನ ಮಧ್ಯಪ್ರಾಚ್ಯ ಡೆಸ್ಕ್‌ನ ಮುಖ್ಯಸ್ಥ ಜೊನಾಥನ್ ಡಾಘರ್ ಪ್ರಕಾರ, ಇಸ್ರೇಲಿ ಪಡೆಗಳು ಗಾಜಾ ಪಟ್ಟಿಯಲ್ಲಿ 45 ದಿನಗಳಲ್ಲಿ ಸುಮಾರು 50 ಪತ್ರಕರ್ತರನ್ನು ಕೊಂದಿವೆ. ಕಾರ್ಯನಿರತರಾಗಿದ್ದ 11 ಮಂದಿ ಸಾವನ್ನಪ್ಪಿದ್ದಾರೆ. ಇದು ಶತಮಾನದಲ್ಲೇ ಅತ್ಯಂತ ಭೀಕರ ಹತ್ಯೆಗಳಲ್ಲಿ ಒಂದಾಗಿದೆ. ಅಂತರರಾಷ್ಟ್ರೀಯ ಪತ್ರಕರ್ತರು ಗಾಜಾಕ್ಕೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ವರದಿಗಾರರಿಗೆ ಸುರಕ್ಷಿತ ಆಶ್ರಯವಿಲ್ಲ. ಒಬ್ಬರ ನಂತರ ಒಬ್ಬರು ಕೊಲ್ಲಲ್ಪಡುತ್ತಿದ್ದಾರೆ. ಅ.7ರಿಂದ, ಪ್ಯಾಲೆಸ್ಟೈನಿಯನ್ ಪ್ರದೇಶವು ಪತ್ರಿಕೋದ್ಯಮದ ನಿಜವಾದ ನಿರ್ಮೂಲನೆಗೆ ಒಳಪಟ್ಟಿದೆ. ಅಲ್ಲಿನ ಪತ್ರಕರ್ತರನ್ನು ರಕ್ಷಿಸಲು, ರಫಾ ಗಡಿ ದಾಟುವಿಕೆಯನ್ನು ತೆರೆಯಲು ಮತ್ತು ಅಂತರರಾಷ್ಟ್ರೀಯ ವರದಿಗಾರರು ಒಳಗೆ ಹೋಗಲು ಮಧ್ಯಪ್ರವೇಶಿಸುವಂತೆ ನಾವು ಅಂತರರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸುತ್ತೇವೆ ಎಂದು ಅವರು ಹೇಳಿದರು.

ಇತ್ತೀಚೆಗೆ ಐಟಿ ದಾಳಿಗೆ ಒಳಗಾಗಿದ್ದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ನಿಧನ



ಬೆಂಗಳೂರು: ಇತ್ತೀಚೆಗಷ್ಟೇ ಆದಾಯ ತೆರಿಗೆ ಇಲಾಖೆಯ ದಾಳಿಗೆ ಒಳಗಾಗಿದ್ದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಅವರು ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾಗಿದ್ದಾರೆ. ಐಟಿ ದಾಳಿ ವೇಳೆ ತಮ್ಮ ಮನೆಯಲ್ಲಿ ಭಾರೀ ಪ್ರಮಾಣದ ಹಣ ಪತ್ತೆಯಾದ ನಂತರ ಅಂಬಿಕಾಪತಿ ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿ ಅನಾರೋಗ್ಯಕ್ಕೀಡಾಗಿದ್ದರು. ಹೀಗಾಗಿ ಅವರನ್ನು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಇಂದು ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ತಿಳಿದುಬಂದಿದೆ. ಐಟಿ ಅಧಿಕಾರಿಗಳು ಕಳೆದ ತಿಂಗಳು ಅಂಬಿಕಾಪತಿ ಅವರ ಮನೆಯ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದ್ದರು. ಈ ವೇಳೆ ಅವರ ಮನೆಯಲ್ಲಿ ಬರೋಬ್ಬರಿ 44 ಕೋಟಿ ರೂ. ನಗದು ಪತ್ತೆಯಾಗಿತ್ತು. ಘಟನೆಯಾದ ತಿಂಗಳಲ್ಲೇ ಅಂಬಿಕಾಪತಿ ನಿಧನರಾಗಿದ್ದಾರೆ.

ಮೈಸೂರಲ್ಲಿ ನಗರ ಪೊಲೀಸ್ ಕ್ರೀಡಾಕೂಟ ಆರಂಭ





ಮೈಸೂರು,ನ.27(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್ ಮೈದಾನದಲ್ಲಿ ಮೂರು ದಿನಗಳ ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಇಂದಿನಿಂದ ಆರಂಭವಾಗಿದೆ.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಬಲೂನುಗಳನ್ನು ಹಾರಿಬಿಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಈ ಸಂದರ್ಭ ಪೊಲೀಸ್ ಕ್ರೀಡಾಕೂಟಗಳನ್ನುದ್ದೇಶಿಸಿ ಮಾತನಾಡಿದ ಅವರು, ನಿತ್ಯ ಒತ್ತಡದಲ್ಲಿ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕ್ರೀಡೆ, ವ್ಯಾಯಾಮ, ಯೋಗ ಅತ್ಯವಶ್ಯ. ಪ್ರತೀದಿನ ಒಂದಲ್ಲಾ ಒಂದು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಅಗತ್ಯವಿದೆ ಎಂದರು.

ಬೇರೆ ಇಲಾಖೆಗಳ ಕ್ರೀಡಾಕೂಟ, ಪಥಸಂಚಲನಗಳಲ್ಲಿ ನಾನು ಭಾಗವಹಿಸಿದ್ದೇನೆ. ಆದರೆ, ಪೊಲೀಸ್ ಇಲಾಖೆ ಕವಾಯತು ಪಥಸಂಚಲನದ ನಿಖರತೆ, ಶಿಸ್ತು ಶ್ಲಾಘನೀಯ. ಪ್ರತಿಯೊಬ್ಬ ವ್ಯಕ್ತಿಗೂ ಕ್ರೀಡೆಯಂತಹ ದೈಹಿಕ ಚಟುವಟಿಕೆ ಅತ್ಯಗತ್ಯ ಎಂದ ಜಿಲ್ಲಾಧಿಕಾರಿಗಳು, ಲಕ್ಷಾಂತರ ಮಂದಿ ಪಾಲ್ಗೊಂಡಿದ್ದ ಮೈಸೂರು ದಸರಾ ಮಹೋತ್ಸವದಂತಹ ದೊಡ್ಡ ಕಾರ್ಯಕ್ರಮವು ಯಾವುದೇ ಸಣ್ಣಮಟ್ಟ ಲೋಪವಿಲ್ಲದ ಹಾಗೆ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ನಾಡಹಬ್ಬ ಯಶಸ್ವಿಯಾಗಲು ಬಹುತೇಕ ಮಟ್ಟಿಗೆ ಪೊಲೀಸರ ಶ್ರಮವಿದೆ ಎಂದು ಜಿಲ್ಲಾಧಿಕಾರಿಗಳು ಪ್ರಶಂಸಿಸಿದರು.

ಪ್ರಪಂಚದ ಹಲವು ದೇಶಗಳಿಂದ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಅವರ ಸುರಕ್ಷತೆ ಮತ್ತು ಮಾಹಿತಿ ಒದಗಿಸಿ ವಿಶ್ವಾಸದಿಂದ ನೋಡಿಕೊಳ್ಳಬೇಕು. ಜನಸ್ನೇಹಿ ಪೊಲೀಸರು ಪ್ರವಾಸಿ ಸ್ನೇಹಿಯಾಗಿಯೂ ಕೆಲಸ ಮಾಡುವ ಅಗತ್ಯವಿದೆ. ಮೈಸೂರಿನಂತಹ ಸಾಂಸ್ಕೃತಿಕ ನಗರದಲ್ಲಿ ಸುರಕ್ಷತೆ ಜೊತೆಗೆ ಆತಿಥ್ಯ ನೀಡುವಲ್ಲಿ ಸಫಲರಾಗೋಣ ಎಂದು ಡಾ.ರಾಜೇಂದ್ರ ತಿಳಿಸಿದರು.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎ.ನಾಗಪ್ಪ, ಎಸಿಪಿಗಳು ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪಥಸಂಚಲನೆ, ಪ್ರತಿಜ್ಞಾವಿಧಿ ಸ್ವೀಕರಿಸಿದ ಕ್ರೀಡಾಪಟುಗಳು, ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಹ್ಯಾಮರ್ ಎಸೆತ, ವಾಲಿಬಾಲ್, ಕಬಡ್ಡಿ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ನವೆಂಬರ್ 29ರಂದು ಸಂಜೆ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ಮೈಸೂರು ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ವಿಜೇತರಿಗೆ ಪ್ರಮಾಣಪತ್ರ ಮತ್ತು ಬಹುಮಾನಗಳನ್ನು ವಿತರಿಸಿದರು.

ಮೈಸೂರು ಮಿತ್ರ ಮಂಗಳವಾರ 28 ನವೆಂಬರ್ 2023

ಕಂದಾಯ ಇಲಾಖೆಯ 4269 ಪ್ರಕರಣ ವಿಲೇವಾರಿ

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾಹಿತಿ



ಮಂಡ್ಯ, ನ.27– ಮಂಡ್ಯ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿ ನ್ಯಾಯಾಲಯ ಮತ್ತು ಜಿಲ್ಲೆಯ ಏಳು ತಾಲೂಕುಗಳ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಜೂನ್‌ನಿಂದ ನವೆಂಬರ್ ವರೆಗೆ ಒಟ್ಟು 6 ತಿಂಗಳ ಕಾಲಾವಧಿಯಲ್ಲಿ 4269 ವಿವಿಧ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಹಳಷ್ಟು ವರ್ಷಗಳಿಂದ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿ ನ್ಯಾಯಲಯಗಳಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿದುತೆ ವಿವಿಧ ಪ್ರಕರಣಗಳು ಬಾಕಿ ಇದವು. ಕಂದಾಯ ಸಚಿವರ ನಿರ್ದೇಶನದ ಮೇರೆಗೆ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ವಾರದಲ್ಲಿ ಮೂರು ದಿನ ಹಾಗೂ ತಹಶೀಲ್ದಾರ್ ನ್ಯಾಯಾಲಯದಲ್ಲಿ ಎರಡು ದಿನ ಕಡ್ಡಾಯವಾಗಿ ಪ್ರಕರಣಗಳ ವಿಲೇವಾರಿ ಕೆಲಸ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮೋಜಿಣಿ, ಆರ್‌ಟಿಸಿ ತಿದ್ದುಪಡಿಗೆ ಸಂಬಂಧಿಸಿದಂತೆ ಮೇ ತಿಂಗಳ ಅಂತ್ಯದವರೆಗೆ 12,787 ಅರ್ಜಿಗಳು ಹಾಗೂ ಜೂನ್‌ನಿಂದ ನವೆಂಬರ್‌ವರೆಗೆ 5392 ಒಟ್ಟು 18,179 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳನ್ನು ಪರಿಶೀಲಿಸಿ 9821 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 8358 ಅರ್ಜಿ ಬಾಕಿ ಇದ್ದು, ಇವುಗಳನ್ನು ಸಹ ಶೀಘ್ರದಲ್ಲೇ ವಿಲೇವಾರಿ ಮಾಡುವ ಕೆಲಸ ನಡೆಯು ತ್ತಿದೆ ಎಂದರು. ಜಿಲ್ಲೆಯ ಎಲ್ಲಾ ತಾಲೂಕಿನ ತಹಶೀಲ್ದಾರ್ ಕಚೇರಿ ಹಾಗೂ ಉಪವಿ ಭಾಗಾಧಿಕಾರಿ ಕಚೇರಿಯಲ್ಲಿ ಆಗಸ್ಟ್ 15 ರಿಂದ ಈ–ಆಫೀಸ್‌ನಲ್ಲಿ ಕಾರ್ಯ ನಿರ್ವಹಣೆ ಕಡ್ಡಾಯಗೊಳಿಸಲಾಗಿದೆ. ಮಂಡ್ಯ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಈ–ಆಫೀಸ್ ಮೂಲಕ 1786 ಅರ್ಜಿ ವಿಲೇವಾರಿ ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟಾರೆ 1680 ಅರ್ಜಿ ವಿಲೇವಾರಿ ಮಾಡಲಾಗಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ 2,78,322 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕಂದಾಯ ಗ್ರಾಮವಾಗಿ ಪರಿವರ್ತಿಸಲು 149 ಗ್ರಾಮಗಳಿದ್ದು, 141 ಗ್ರಾಮಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲಾಗಿದೆ ಉಳಿದ 8 ಗ್ರಾಮಗಳನ್ನು ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದೆ. ಅಕ್ರಮ ಖಾತೆ ಮಾಡಿ ಜಮೀನು ಮಾರಾಟ ತಡೆಗಟ್ಟಲು ಭೂಮಿ ತಂತ್ರಾಂಶದಲ್ಲಿ ಜಮೀನಿನ ವಿವರವನ್ನು ಫ್ಲಾಗ್ ಮಾಡಲಾಗುತ್ತಿದ್ದು, 3876 ಪಿಟಿಸಿಎಲ್ ಮಾಲೀಕರ ಭೂಮಿ ವಿವರವನ್ನು ಹಾಗೂ 3385 (ಸರ್ಕಾರಿ ಜಾಗ) ನಾನ್ ಪಿಟಿಸಿಎಲ್ ಜಮೀನಿನ ವಿವರವನ್ನು ಭೂಮಿ ತಂತ್ರಾಂಶದಲ್ಲಿ ಫ್ಲಾಗ್ ಮಾಡಲಾಗಿದೆ. ಹೃದಯ ವೈಶಾಲ್ಯ ಯೋಜನೆ ಜಿಲ್ಲೆಯಲ್ಲಿ ಜಾರಿ ಮಾಡಿದ ನಂತರ ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ 1128 ಜನರ ಹೃದಯ ತಪಾಸಣೆ ನಡೆಸಲಾಗಿದ್ದು, ಅವರಲ್ಲಿ 168 ಜನರಿಗೆ ಹೆಚ್ಚಿನ ತಪಾಸಣೆಗೆ ಒಳಪಡಲು ತಿಳಿಸಲಾಗಿದೆ ಎಂದರು.

ಫ್ರೂಟ್ಸ್ ತಂತ್ರಾಂಶಕ್ಕೆ ಸೇರ್ಪಡಿಸಿಕೊಳ್ಳಿಸಿ

ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಸಮಾಜಿಕ ಪಿಂಚಣಿಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕಿದ್ದು, ಕಳೆದ ಆರು ತಿಂಗಳಲ್ಲಿ ಸಾಮಾಜಿಕ ಪಿಂಚಣಿ ಯೋಜನೆಯಡಿ 16,669 ಫಲಾನುಭವಿಗಳು ಆಧಾರ್ ಸೀಡಿಂಗ್ ಮಾಡದೇ ಇರುವುದು, 5918 ನಿಷ್ಕ್ರಿಯ ಖಾತೆ, 193 ಆಧಾರ್ ತೊಂದರೆ ಸೇರಿದಂತೆ ಒಟ್ಟು 22,780 ಪ್ರಕರಣಗಳನ್ನು ಇತ್ಯರ್ಥಗೊಳಿಸಿ, ನೇರವಾಗಿ ಫಲಾನುಭವಿಗಳ ಖಾತೆಗೆ ಪಿಂಚಣಿ ಹಣವನ್ನು ಜಮೆ ಮಾಡಲಾಗುತ್ತಿದೆ. ಜಿಲ್ಲೆಯ ರೈತರು ಬರ ಪರಿಹಾರದ ಹಣವನ್ನು ಪಡೆಯಬೇಕಾದರೆ ತಮ್ಮ ಎಲ್ಲಾ ತಾಕುಗಳನ್ನು ಫ್ರೂಟ್ಸ್ ತಂತ್ರಾಂಶಕ್ಕೆ ಕಡ್ಡಾಯವಾಗಿ ಸೇರ್ಪಡಿಸಿಕೊಳ್ಳಬೇಕಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 17 ಲಕ್ಷ ತಾಕುಗಳು ಲಭ್ಯವಿದ್ದು, ಅದರಲ್ಲಿ 10 ಲಕ್ಷ ತಾಕುಗಳು ಸೇರ್ಪಡೆಯಾಗಿವೆ. ಇನ್ನೂ 7 ಲಕ್ಷ ತಾಕುಗಳು ತಂತ್ರಾಂಶದಲ್ಲಿ ಸೇರ್ಪಡೆಗೊಳಿ ಆಂದೋಲನದ ರೀತಿ ಯೋಜನ ರೂಪಿಸಿ, ಎಲ್ಲಾ ತಾಕುಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸೇರ್ಪಡೆ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ರೈತರು ತಮ್ಮ ತಾಕುಗಳನ್ನು ತಂತ್ರಾಂಶದಲ್ಲಿ ಸೇರ್ಪಡೆಗೊಳಿಸಲು ಕೃಷಿ, ತೋಟಗಾರಿಕೆ, ಕಂದಾಯ, ರೇಷ್ಮೆ, ಪಶುಸಂಗೋಪನೆ ಇಲಾಖೆಗಳನ್ನು ಸಂಪರ್ಕಿಸಿ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಉಪಸ್ಥಿತರಿದ್ದರು.

ಭಾರತೀನಗರದಲ್ಲಿ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಭಾರತೀನಗರ, ನ.27– ಬೆಲೆ ಏರಿಕೆ ಖಂಡಿಸಿ ಹಾಗೂ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಿಸಿ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತೆಯರು ಸೋಮವಾರ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಇಲ್ಲಿನ ಮದ್ದೂರು ಬಸ್ ನಿಲ್ದಾಣದ ಬಳಿ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತೆಯರು ಜಮಾಯಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸುಶೀಲಾ ಮಾತನಾಡಿ, ಜನವಾದಿ ಮಹಿಳಾ ಸಂಘಟನೆ ಹಾಗೂ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ರಾಜ ಭವನದ ಎದುರು 3 ದಿನ ಧರಣಿ ನಡೆಸಲಿದ್ದಾರೆ. ಬೆಂಗಳೂರಿನ ಸ್ವತಂತ್ರ ಉದ್ಯಾನದಿಂದ ರಾಜ ಭವನದ ಬಳಿ ಪ್ರತಿಭಟಿಸಿ, ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಲಾಗುವುದು ಎಂದರು. ಕೇಂದ್ರ ಸರ್ಕಾರ ಕೂಡಲೇ ಅಗತ್ಯ ವಸ್ತುಗಳ ಬೆಲೆಗಳ ದರ ಕಡಿತಗೊಳಿಸಬೇಕು. ಮಹಿಳೆಯರಿಗೆ ರಕ್ಷಣೆ ನೀಡಬೇಕು. ಕೃಷಿ ಕೂಲಿಕಾರರ ಕೂಲಿಯನ್ನು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷೆ ಡಿ.ಕೆ.ಲತಾ, ಉಪಾಧ್ಯಕ್ಷೆ ಶೋಭಾ, ಚಂದ್ರಮ್ಮ, ಜ್ಯೋತಿ, ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ, ರೇಣುಕಾ ಭಾಗವಹಿಸಿದ್ದರು.

ಇಂದು, ನಾಳೆ ಕಾಲಭೈರವೇಶ್ವರ ಪೂಜಾ ಕಾರ್ಯ



ಮದ್ದೂರು, ನ.27–ತಾಲೂಕಿನ ಕುದರಗುಂಡಿ ಗ್ರಾಮದ ಶ್ರೀ ಕಾಲಭೈರವೇಶ್ವರ ಮಹಾದ್ವಾರ ಉದ್ಘಾಟನೆ, ಗ್ರಾಮ ದೇವತೆಗಳ ಮೆರವಣಿಗೆ ಮತ್ತು ಪೂಜಾ ಕಾರ್ಯಕ್ರಮಗಳನ್ನು ನ.28 ಮತ್ತು 29ರಂದು ಏರ್ಪಡಿಸಲಾಗಿದೆ. ನ.28ರಂದು ಚೌತಿ ಮಂಗಳವಾರ ಮಧ್ಯಾಹ್ನ 1.30ಕ್ಕೆ ಮೀಸಲು ನೀರು ತರುವುದು ಹಾಗೂ ಸಂಜೆ 6.30ಕ್ಕೆ ಲಿಂಗಪಟ್ಟಣ ಗ್ರಾಮಸ್ಥರಿಂದ ದೀಪೋತ್ಸವ ಹಾಗೂ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾತ್ರಿ 7.30ರ ನಂತರ ಕರಗ ಮಹೋತ್ಸವ, ಅನ್ನಸಂತರ್ಪಣೆ ಹಾಗೂ ರಾತ್ರಿ 9.30ಕ್ಕೆ ಗ್ರಾಮದೇವತೆ ಮೆರವಣಿಗೆ ನಡೆಸಲಾಗುವುದು. ನ.29ರಂದು ಬೆಳಗ್ಗೆ 6.30ಕ್ಕೆ ಬಾಯಿಬೀಗ ಮತ್ತು ಮುಡಿ ಕಾರ್ಯಕ್ರಮ, ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಎಂ.ಶೆಟ್ಟಿಹಳ್ಳಿ ಗ್ರಾಮಸ್ಥರಿಂದ ದೀಪೋತ್ಸವ, ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇ-ಸ್ವತ್ತು ಆಂದೋಲನಕ್ಕೆ ಚಾಲನೆ



ಮಂಡ್ಯ, ನ.27–ತಾಲೂಕಿನ ಹೊಡಾಘಟ್ಟ ಗ್ರಾಮದಲ್ಲಿ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಇ–ಸ್ವತ್ತು ಆಂದೋಲನಕ್ಕೆ ಶಾಸಕ ರವಿಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ವೃದ್ಧಾಪ್ಯ, ಅಂಗವಿಕಲ ಹಾಗೂ ವಿಧವಾ ವೇತನಗಳ ಉಚಿತ ನೋಂದಣಿ ಕಾರ್ಯಕ್ರಮ, ನಿಂತು ಹೋಗಿರುವ ಪಿಂಚಣಿಗಳಿಗೆ ಮರು ಚಾಲನೆ ನೀಡುವುದು. ಗೃಹಲಕ್ಷ್ಮೀ ಯೋಜನೆಯ ತಲುಪದ ಫಲಾನುಭವಿಗಳ ಪರಿಶೀಲನೆ ನಡೆಸಲಾಗುವುದು. ರೈತರ ಯೋಜನೆಗಳು ಅವರಿಗೆ ತಲುಪುವಂತೆ ಮಾಡಲು ಈ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಇ–ಸ್ವತ್ತು ಹಾಗೂ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳಿಗೆ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶಿವಕುಮಾರ ಬಿರಾದರ್, ತಾಪಂ ಇಒ ಎಂ.ಎಸ್. ವೀಣಾ, ತೋಟಗಾರಿಕೆ ಇಲಾಖೆ ಅಧಿಕಾರಿ ಶಶಿಕಲಾ, ಸಿಡಿಪಿಒ ಅಂಬಿಕಾ, ಬಿಇಒ ಸೌಭಾಗ್ಯ, ಆಯುಷ್ ಇಲಾಖೆಯ ಡಾ.ಅಂಬಿಕಾ, ಡಾ.ಪ್ರಸನ್ನ, ಡಾ.ಸೌಮ್ಯ, ಗ್ರಾಪಂ ಅಧ್ಯಕ್ಷ ಬಿ.ಎಸ್.ಮಹೇಶ್, ಉಪಾಧ್ಯಕ್ಷೆ ಮಂಜುಳಾ, ಪಿಡಿಓಗಳಾದ ಕೋಮಲಾ, ಮಲ್ಲೇಶ್ ಹಾಜರಿದ್ದರು.

ಕನ್ನಡ ಜಾಗೃತಿ, ರಸಪ್ರಶ್ನೆ ಕಾರ್ಯಕ್ರಮ



ಕೆ.ಆರ್.ಪೇಟೆ, ನ.27–ತಾಲೂಕಿನ ತೇಗನಹಳ್ಳಿ ಬಳಿಯ ಆಶೀರ್ವಾದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲೆ ಗೊಂಡು ಕಾರ್ಯಕ್ರಮದ ಅಂಗವಾಗಿ ಕನ್ನಡ ಭಾಷಾ ಜಾಗೃತಿ ಹಾಗೂ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಅಗ್ರಹಾರಬಾಚಹಳ್ಳಿ ಆರ್. ಶ್ರೀನಿವಾಸ್, ವಿದ್ಯಾರ್ಥಿಗಳು ಯಾವುದೇ ಮಾಧ್ಯಮದಲ್ಲೇ ವಿದ್ಯಾಭ್ಯಾಸ ಮಾಡಿದರೂ, ಎಷ್ಟೇ ಭಾಷೆಗಳನ್ನು ಕಲಿತರೂ ಕನ್ನಡವನ್ನು ಎಂದಿಗೂ ಮರೆಯಬಾರದು. ಮಾತೃಭಾಷೆಯನ್ನು ಮರೆತರೆ ಹೆತ್ತ ತಾಯಿಯನ್ನು ಮರೆತಂತೆ. ಸುಮಾರು ಎರಡೂವರೆ ಸಾವಿರ ವರ್ಷಗಳ ಇತಿಹಾಸ ವಿರುವ ಕನ್ನಡ ಭಾಷೆ ಸೂರ್ಯ ಚಂದ್ರರು ಇರುವವರೆವಿಗೂ ಜೀವಂತವಾಗಿರುವ ಭಾಷೆಯಾಗಿದೆ ಎಂದರು.

ದಿನದಿಂದ ದಿನಕ್ಕೆ ರಾಜಧಾನಿ ಸೇರಿದಂತೆ ಗಡಿಭಾಗದಲ್ಲಿ ಪರಭಾಷೆಗಳ ಹಾವಳಿಯಿಂದ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ನಾಡಿನಲ್ಲಿ ಬದುಕಬೇಕಾದರೆ ಕನ್ನಡ ಭಾಷೆ ಮಾತನಾಡಬೇಕು ಎಂಬ ವಾತಾವರಣ ಸೃಷ್ಟಿ ಮಾಡಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ ಎಂದು ಹೇಳಿದರು. ಯುವ ಸಾಹಿತಿ ಮೊಹಮದ್ ಅಜರುದ್ದೀನ್, ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟು ನಾಡಿನ ಹೆಸರಾಂತ ಸಾಹಿತಿಗಳ ಪುಸ್ತಕಗಳನ್ನು ವಿತರಿಸಿದರು. ತಾಲೂಕು ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷ ಹೆಚ್.ಆರ್.ಸೋಮಶೇಖರ್, ವಿದ್ಯಾರ್ಥಿಗಳಿಗೆ ಪೆನ್ನುಗಳನ್ನು ಬಹುಮಾನವಾಗಿ ವಿತರಿಸಿದರು. ಆಶೀರ್ವಾದ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ಥೆರೇಸ್ ಮೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಧನಲಕ್ಷ್ಮೀ ಪ್ರಕಾಶ್, ತಾಲೂಕು ಅಪ್ಪು ಯುವ ಸಾಮ್ರಾಜ್ಯ ಘಟಕದ ಅಧ್ಯಕ್ಷ ಕೆ.ಎಲ್.ಮಹೇಶ್, ಉಪಾಧ್ಯಕ್ಷ ಹೊಸಹೊಳಲು ಹರೀಶ್, ಜಯ ಕರ್ನಾಟಕ ತಾಲೂಕು ಸಂಘಟನಾ ಕಾರ್ಯದರ್ಶಿ ರಾಘವೇಂದ್ರ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನ.30, ಸುವರ್ಣ ಕರ್ನಾಟಕ ಸಂಭ್ರಮ

ಪಾಂಡವಪುರ, ನ.27–ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮವನ್ನು ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನ.30ರಂದು ಆಯೋಜಿಸಲಾಗಿದೆ ಎಂದು ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್ ಹೇಳಿದರು.

ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 9 ಗಂಟೆಗೆ ಕಸಾಪ ಭವನದಲ್ಲಿ ಉಚಿತ ರಕ್ತದಾನ ಶಿಬಿರ ಹಾಗೂ ನೇತ್ರದಾನ ನೋಂದಣಿ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಗೆ ಪಾಂಡವ ಕ್ರೀಡಾಂಗಣದಲ್ಲಿ 'ಸಂಗೀತ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜೀ ಕನ್ನಡ ವಾಹಿನಿಯ ಡ್ರಾಮ ಜ್ಯೂನಿಯರ್ ಮಕ್ಕಳು ಕಿರುನಾಟಕ ಪ್ರದರ್ಶಿಸಲಿದ್ದಾರೆ. ಜತೆಗೆ ಲಕ್ಷ್ಮೀಬಾರಮ್ಮ ಖ್ಯಾತಿಯ ಮಹಾಲಕ್ಷ್ಮಿ, ಅಂತರಪಟ ಖ್ಯಾತಿಯ ಆರಾಧನ ಮತ್ತು ತಂಡದಿಂದ ನೃತ್ಯ ಕಾರ್ಯಕ್ರಮ, ಸಂಗೀತ ನಿರ್ದೇಶನ ಅರ್ಜುನ್ ಜನ್ಯ ಅವರ ತಂಡದಿಂದ 'ಸಂಗೀತ ಸಂಜೆ' ಏರ್ಪಡಿಸಲಾಗಿದೆ ಎಂದು ಹೇಳಿದರು.

ಸುವರ್ಣ ಕನ್ನಡ ರಾಜ್ಯೋತ್ಸವ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 60 ವರ್ಷದ ಹುಟ್ಟುಹಬ್ಬ ಎರಡೂ ಒಂದೇ ವರ್ಷದಲ್ಲಿ ಬಂದಿರುವುದರಿಂದ ಕ್ಷೇತ್ರದ ಕಾರ್ಯಕರ್ತರು, ಅಭಿಮಾನಿಗಳು ಅದ್ಧೂರಿಯಾಗಿ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ಈಗಾಗಲೇ ಆಟೋಗಳ ಮೂಲಕ ತಾಲೂಕಿನಲ್ಲಿ ಪ್ರಚಾರ ನಡೆಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಲಿಂಗರಾಜು, ರಾಮಕೃಷ್ಣೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಎಚ್.ಎಲ್.ನಂಜೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕ ಕಣಿವೆ ಯೋಗೇಶ್, ನಾರಾಯಣಗೌಡ, ಅಶ್ವಥ್ ಕುಮಾರೇಗೌಡ, ಟೌನ್ ಚಂದ್ರು, ಬೊಮ್ಮರಾಜು ಹಾಜರಿದ್ದರು.



ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ. ಶ್ರೀನಿವಾಸ್‌ಕುಮಾರ್ ಅವರ ಹುಟ್ಟುಹಬ್ಬವನ್ನು ವಾರ್ಡ್ ನಂ.44ರ ಜನತಾ ನಗರ, ಬೋಗಾದಿ 2ನೇ ಹಂತ ಮತ್ತು ಟೆಲಿಕಾಂ ಲೇಔಟ್‌ನ ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಗರಿಕರು ಆಚರಿಸಿದರು.

ಸಂಶೋಧನೆ ಉತ್ಸಾಹದಿಂದ ಕೂಡಿರಬೇಕೇ ಹೊರತು ಅನಿವಾರ್ಯವಾಗಿರಬಾರದು

ಎಂಐಟಿ ಗ್ರೂಪ್ ಅಧ್ಯಕ್ಷ ಡಾ. ಎಸ್. ಮುರಳಿ ಅಭಿಮತ



ಮೈಸೂರು, ನ.27– ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬ್ಯಾಚುಲರ್ ಆಫ್ ಕಂಪ್ಯೂಟರ್ ಸೈನ್ಸ್ ಅಂಡ್ ಅಪ್ಲಿಕೇಷನ್ ವಿಭಾಗವು, "ಮೆಥೋಡಲೋಜಿಸ್ ಇನ್ ಕಂಪ್ಯೂಟರ್ ಸೈನ್ಸ್: ಅನ್‌ರ್‍ಯಾವಲಿಂಗ್ ದಾ ಲೇಟೆಸ್ಟ್ ಅಡ್ವಾನ್ಸ್" ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಿತ್ತು.

ಮೈಸೂರಿನ ಎಂ.ಐ.ಟಿ. ಗ್ರೂಪ್‌ನ ಅಧ್ಯಕ್ಷರಾದ ಡಾ.ಎಸ್.ಮುರಳಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡುತ್ತಾ, ಸಂಶೋಧನೆಯು ಉತ್ಸಾಹದಿಂದ ಕೂಡಿರಬೇಕೇ ಹೊರತು ಅನಿವಾರ್ಯವಾಗಿರಬಾರದು. ಅದಕ್ಕೆ ಉದಾಹರಣೆ ಎಂಬಂತೆ ಪ್ಯಾಡ್‌ಮ್ಯಾನ್ ಎಂದೇ ಪ್ರಖ್ಯಾತಿ ಪಡೆದಿರುವ ಅರುಣಾಚಲಂ ಮುರುಘಾನಂದರವರು ಸಂಶೋಧಕರಾಗಿ ಮಾಡಿದ ಸಾಧನೆ ಈಗಿನ ಯುವಪೀಳಿಗೆಗೆ ಮಾದರಿಯಾಗಿದೆ. ಸಂಶೋಧನೆಯು ಎಂದಿಗೂ ಸಮಾಜಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಕೊಡುಗೆಗಳನ್ನು ನೀಡಬೇಕು. ನಿಮ್ಮ ಸಂಶೋಧನೆಯಲ್ಲಿ ಖುಷಿ ಹಾಗೂ ಸಮಾಜಕ್ಕೆ ಬೇಕಾಗಿರುವ ಒಳ್ಳೆಯ ವಿಚಾರಗಳಿರಬೇಕು. ಹಾಗೆ ಸಂಶೋಧನೆ ಎಂಬುದು ಕೇವಲ ಹೆಸರಿಗಾಗಿ ಅಥವಾ ಪ್ರಚಾರಕ್ಕಾಗಿ ಮಾಡಬಾರದು. ಅದು ಸಾರ್ವಜನಿಕರಿಗೆ ಸಹಾಯವಾಗುವಂತಹ ಸಂಶೋಧನೆಯಾಗಿರಬೇಕು ಎಂದು ಹೇಳಿದರು.

ಎಸ್‌ಜೆಸಿಇ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಸಿ.ಎನ್. ರವಿಕುಮಾರ್ ಅವರು ಮಿತೋಲೋಜಿ ಹಾಗೂ ಚಂದ್ರಯಾನ–3 ಯಶಸ್ಸಿನ ಬಗ್ಗೆ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಸ್ವಾಗತಿಸಿದರು. ಪರೀಕ್ಷಾಂಗ ವಿಭಾಗದ ನಿಯಂತ್ರಣಾಧಿಕಾರಿ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆಯಾದ ಶ್ರೀಮತಿ ಶೃತಿಪೂಣಾಚ್ಚ, ಬ್ಯಾಚುಲರ್ ಆಫ್ ಕಂಪ್ಯೂಟರ್ ಸೈನ್ಸ್ ಅಂಡ್ ಅಪ್ಲಿಕೇಷನ್ ವಿಭಾಗದ ಮುಖ್ಯಸ್ಥರಾದ ರಾಧೇಶ್ ಎ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್. ರಮೇಶ್, ವಿಭಾಗದ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಯಾರಿಗೂ ಅನುಮಾನವೇ ಬರಲಿಲ್ಲವೇ?

ಕಾರುಗಳಲ್ಲಿ ಈ ಆಲೆಮನೆಯತ್ತ ಬರುತ್ತಿದ್ದ ಬಗ್ಗೆ ಯಾರಿಗೂ ಸಂಶಯವೇ ಬಾರಲಿಲ್ಲವೇ ಎಂಬ ಪ್ರಶ್ನೆ ಉದ್ಭವವಾಗಿದೆ. ಮಂಡ್ಯ ತಾಲೂಕಿನ ನವೀನ್ ಮತ್ತು ನಯನ್ ಕುಮಾರ್ ಅವರುಗಳಿಗೆ ಆಲೆಮನೆಯನ್ನು ಬಾಡಿಗೆಗೆ ಕೊಟಿದ್ದ ರೈತನಿಗೂ ಇದರ ಬಗ್ಗೆ ತಿಳಿದಿರಲಿಲ್ಲವೇ? ಇದು ಯಕ್ಷಪ್ರಶ್ನೆಯಾಗಿದೆ. ಹೊಸದಾಗಿ ಕಾರುಗಳು ಗ್ರಾಮವನ್ನು ಪ್ರವೇಶಿಸಿದರೆ ಗ್ರಾಮಸ್ಥರಿಗೆ ಅನುಮಾನ ಬರಬಹುದು ಎಂಬ ಕಾರಣಕ್ಕಾಗಿ ಈ ಖತರ್ನಾಕ್ ವ್ಯಕ್ತಿಗಳು ತಮ್ಮದೇ ಆದ 3 ಕಾರುಗಳನ್ನು ಗರ್ಭಿಣಿ ಸ್ತ್ರೀಯರನ್ನು ಕರೆತಂದು–ಕರೆದೊಯ್ಯಲು ಬಳಸುತ್ತಿದ್ದರು. ಗರ್ಭಿಣಿ ಸ್ತ್ರೀಯರೊಂದಿಗೆ ಅವರ ಒಬ್ಬ ಸಂಬಂಧಿಕರನ್ನು ಮಾತ್ರ ಕರೆತರುತ್ತಿದ್ದ ಆರೋಪಿಗಳು ಯಾವುದೇ ಕಾರಣಕ್ಕೂ ಗರ್ಭಿಣಿಯವರ ವಾಹನಗಳನ್ನು ಬರಲು ಬಿಡುತ್ತಿರಲಿಲ್ಲ ಎಂದು ಹೇಳಲಾಗಿದೆ. ಪದೇ ಪದೆ ಆಲೆಮನೆಗೆ ಕಾರುಗಳು ಬಂದರೆ ಸಂಶಯ ಬರಬಹುದು ಎಂಬ ಕಾರಣಕ್ಕಾಗಿ ವಾರಕ್ಕೆ ಒಮ್ಮೆ ಅಥವಾ ಎರಡು ಬಾರಿ 4ರಿಂದ 5 ಗರ್ಭಿಣಿಯರನ್ನು ಕರೆತಂದು ಸ್ಕ್ಯಾನಿಂಗ್ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಮತ್ತೊಂದೆಡೆ ಮಂಡ್ಯದಲ್ಲಿ ಭ್ರೂಣ ಹತ್ಯೆ ಜಾಲ ಕಾರ್ಯನಿರ್ವಹಿಸುತ್ತಿದೆ ಎಂಬುದರ ಬಗ್ಗೆ ಸ್ಥಳೀಯರಿಗೆ ಅನುಮಾನವಿತ್ತು ಎಂದು ಹೇಳಲಾಗಿದ್ದು, ಕಳೆದ 2 ವರ್ಷದ ಹಿಂದೆ ಶ್ರೀರಂಗಪಟ್ಟಣ ಪುರಸಭೆಯ ಸಾಮಾನ್ಯ ಸಭೆಯಲ್ಲಿ ಭ್ರೂಣ ಹತ್ಯೆ ಜಾಲದ ಬಗ್ಗೆ ಸದಸ್ಯರೋರ್ವರು ಪ್ರಸ್ತಾಪಿಸಿದ್ದರು. ಆದರೂ ಕೂಡ ಆರೋಗ್ಯ ಇಲಾಖೆಯ ಅಧಿಕಾರಿಗಳಾಗಲೀ ಪೊಲೀಸರಾಗಲೀ ಇದರ ಬಗ್ಗೆ ಗಮನಹರಿಸದಿದ್ದದ್ದು ಅಚ್ಚರಿ ಮೂಡಿಸಿದೆ. ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಆಲೆಮನೆ ಮಾಲೀಕನನ್ನು ಕೂಡ ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿಯವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಬೆಂಗಳೂರು ಪೊಲೀಸರು ಪ್ರಕರಣವನ್ನು ಪತ್ತೆ ಹಚ್ಚಿದ ನಂತರವಾದರೂ ಈ ಭಾಗದಲ್ಲಿ ಆರೋಪಿಗಳೊಂದಿಗೆ ಆರೋಗ್ಯ ಇಲಾಖೆ ಅಥವಾ ಪೊಲೀಸ್ ಇಲಾಖೆಯವರು ಕೈಜೋಡಿಸಿದ್ದರೆ ಎಂಬ ಬಗ್ಗೆ ತನಿಖೆ ಮಾಡಿಸಬೇಕಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸುದೀರ್ಘ 3 ವರ್ಷ ಕಾಲ ಈ ದುಷ್ಕೃತ್ಯ ನಡೆಯುತ್ತಿದ್ದರೂ ಕೂಡ ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೇ ಎಂಬ ಪ್ರಶ್ನೆಯೂ ಕೂಡ ಸಚಿವರಲ್ಲಿ ಉದ್ಭವಿಸಿಲ್ಲವೇ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ವೈದ್ಯ ಡಾ.ಚಂದನ್ ಬಲ್ಲಾಳ್ ಬಂಧನ

ಸಂಪರ್ಕಿಸುತ್ತಿದ್ದ ಮಧ್ಯವರ್ತಿಗಳಾದ ಶಿವನಂಜೇಗೌಡ, ನವೀನ್, ವೀರೇಶ್, ನಯನ್ ಕುಮಾರ್ ಅವರುಗಳು ಗರ್ಭಿಣಿಯರನ್ನು ಮಂಡ್ಯ ತಾಲೂಕು ಹಾಡ್ಯ ಗ್ರಾಮದ ಆಲೆಮನೆವೊಂದಕ್ಕೆ ಕರೆದೊಯ್ದು, ಅಲ್ಲಿ ನಿರ್ಮಿಸಿದ್ದ ಶೆಡ್‌ನಲ್ಲಿ ಭ್ರೂಣ ಲಿಂಗಪತ್ತೆ ಮಾಡುತ್ತಿದ್ದರು. ಹೆಣ್ಣು ಭ್ರೂಣ ಎಂಬುದು ಗೊತ್ತಾದರೆ ಅದನ್ನು ಮೈಸೂರಿನ ಉದಯಗಿರಿಯಲ್ಲಿರುವ ಮಾತಾ ಆಸ್ಪತ್ರೆ ಅಥವಾ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಆಯುರ್ವೇದಿಕ್ ಪೈಲ್ಸ್ ಡೇ ಕೇರ್ ಸೆಂಟರ್‌ನಲ್ಲಿ ವೈದ್ಯರಾದ ಡಾ. ಚಂದನ್ ಬಲ್ಲಾಳ್ ಮತ್ತು ಡಾ. ತುಳಸಿರಾಮ್ ಸಹಕಾರದೊಂದಿಗೆ ಭ್ರೂಣ ಹತ್ಯೆ ಮಾಡುತ್ತಿದ್ದರು. ಈ ತಂಡವು ಭ್ರೂಣ ಲಿಂಗ ಪತ್ತೆಗೆ 20ರಿಂದ 25 ಸಾವಿರ ರೂ. ಹಾಗೂ ಭ್ರೂಣ ಹತ್ಯೆಗೆ 50 ಸಾವಿರ ರೂ. ಶುಲ್ಕ ಪಡೆಯುತ್ತಿತ್ತು ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ.

ಎಂಎಸ್‌ಎಂಇ ಎಕ್ಸ್‌ಪೋರ್ಟ್ಸ್ ಉತ್ತೇಜಿಸಲು ಒಡಂಬಡಿಕೆ

ಮೈಸೂರು, ನ. 27– ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು (ಎಂಎಸ್‌ಎಂಇ) ಬಲಪಡಿಸಲು ಮತ್ತು ದೇಶದಿಂದ ಇ–ಕಾಮರ್ಸ್ ಎಕ್ಸ್‌ಪೋರ್ಟ್ಸ್‌ಗಳನ್ನು ಹೆಚ್ಚಿಸುವ ಮಹತ್ವದ ಹೆಜ್ಜೆಯಾಗಿ ಅಮೆಜಾನ್ ಇಂಡಿಯಾ ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯ ಡಿಜಿಎಫ್‌ಟಿ ಮತ್ತು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಈ ಒಪ್ಪಂದದ ಭಾಗವಾಗಿ, 'ಡಿಜಿಎಫ್‌ಟಿ' ಗುರುತಿಸಿರುವ 75 ಜಿಲ್ಲೆಗಳಲ್ಲಿನ 'ಎಂಎಸ್‌ಎಂಇ'ಗಳಿಗಾಗಿ ಎಕ್ಸ್‌ಪೋರ್ಟ್ ಸಾಮರ್ಥ್ಯ ಹೆಚ್ಚಳಕ್ಕೆ ನೆರವಾಗುವ ಸಭೆ, ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಾಗಾರಗಳನ್ನು ಹಂತ ಹಂತವಾಗಿ ನಡೆಸಲಾಗುವುದು. ಮಾರ್ಚ್‌ನಲ್ಲಿ ಪರಿಚಯಿಸಲಾದ ವಿದೇಶಿ ವ್ಯಾಪಾರ ನೀತಿಯಲ್ಲಿ ವಿವರಿಸಿರುವಂತೆ 'ಎಕ್ಸ್‌ಪೋರ್ಟ್ ಹಬ್‌ಗಳಾಗಿ ಜಿಲ್ಲೆಗಳು' ಈ ಉಪಕ್ರಮದ ಭಾಗವಾಗಿರಲಿವೆ. ಗ್ರಾಮೀಣ ಮತ್ತು ದೂರದ ಜಿಲ್ಲೆಗಳಲ್ಲಿನ ಸ್ಥಳೀಯ ತಯಾರಕರನ್ನು ಜಾಗತಿಕ ಪೂರೈಕೆ ಸರಪಳಿ ಜೊತೆ ಸಂಪರ್ಕಿಸಲು ಈ ಉಪಕ್ರಮವು ಪ್ರಯತ್ನಿಸುತ್ತಿದೆ.

ಪಿಎಚ್.ಡಿ ಪದವೀಧರರು



ಜಿ. ಶ್ಯಾಮಲಾ

ಮೈಸೂರು, ನ.27– ಡಾ. ಆರ್. ಮಹೇಶ್ ಅವರ ಮಾರ್ಗದರ್ಶನದಲ್ಲಿ ಜಿ. ಶ್ಯಾಮಲಾ ಅವರು ನಿರ್ವಹಣಾ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಎಂ.ವಿ. ಮನೋಹರ್

ಮೈಸೂರು, ನ.27–ಡಾ. ಲಿಂಬ್ಯಾ ನಾಯಕ್ ಎಲ್. ಅವರ ಮಾರ್ಗದರ್ಶನದಲ್ಲಿ ಎಂ.ವಿ. ಮನೋಹರ್ ಅವರು ಕ್ರಿಮಿನಾಲಜಿ ಮತ್ತು ಫೋರೆನ್ಸಿಕ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ

ಕ್ಷೇತ್ರ ಕಾರ್ಯ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ

ಡಾ.ಎಸ್.ಜಿ. ರಾಮದಾಸರೆಡ್ಡಿಗೆ ಗುರುವಂದನಾ ಕಾರ್ಯಕ್ರಮ



ಮೈಸೂರು, ನ. 27– ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕಾದರೆ ಕ್ಷೇತ್ರ ಕಾರ್ಯ ಹಾಗೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಎಸ್. ರಂಗರಾಜು ಕರೆ ನೀಡಿದರು.

ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಹಿರಿಯ ಮತ್ತು ಕಿರಿಯ ಸ್ವಯಂ ಸೇವಕರು ಹಾಗೂ ವಿದ್ಯಾರ್ಥಿಗಳು ಶನಿವಾರ ಏರ್ಪಡಿಸಿದ್ದ ಡಾ.ಎಸ್.ಜಿ. ರಾಮದಾಸ ರೆಡ್ಡಿ ಅವರ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಮೊಬೈಲ್‌ನಲ್ಲಿ ಮುಳುಗಿ ಹೋಗಿರುವ ವಿದ್ಯಾರ್ಥಿಗಳು ಅದರಿಂದ ಹೊರ ಬಂದು ಕ್ಷೇತ್ರ ಕಾರ್ಯ ನಡೆಸುವ ಮೂಲಕ ಇತಿಹಾಸದ ಮೂಲ ಬೇರುಗಳನ್ನು ಪತ್ತೆ ಹಚ್ಚಬೇಕು ಎಂದರು.

ನದಿ ದಡದ ಬಗ್ಗೆ ಅಧ್ಯಯನ, ಕ್ಷೇತ್ರ ಕಾರ್ಯದ ಮೂಲಕ ಪಿಎಚ್.ಡಿ ಮಾಡಿದ ಮೊದಲ ವ್ಯಕ್ತಿ ರಾಮದಾಸ ರೆಡ್ಡಿ ಚಿತ್ರದುರ್ಗ ಜಿಲ್ಲೆಯ ಇತಿಹಾಸದಲ್ಲಿ ಲಕ್ಷ್ಮಣ ತೆಲಗಾವಿ, ಶಾಸನದಲ್ಲಿ ರಾಜಶೇಖರಪ್ಪ, ಪೂರ್ವ ಇತಿಹಾಸಗಳ ಅವಶೇಷಗಳ ಸಂಶೋಧನೆಯಲ್ಲಿ ರಾಮದಾಸ ರೆಡ್ಡಿ ಅವರ ಹೆಸರನ್ನು ಮರೆಯುವಂತಿಲ್ಲ ಎಂದರು.

ಭಾರತೀಯ ಪುರಾತತ್ವ ಇಲಾಖೆಯ ನಿವೃತ್ತ ನಿರ್ದೇಶಕ ಡಾ.ಡಿ.ಎಂ. ನಾಗರಾಜು ಮಾತನಾಡಿ, ಡಾ.ರಾಮದಾಸ ರೆಡ್ಡಿ ಅವರು ವಿದ್ಯಾದ್ಯಾನದ ಜೊತೆಗೆ ಶ್ರಮದಾನದ ಮೂಲಕವೂ ಹೆಸರು ಮಾಡಿದ್ದಾರೆ. ಶಾಸನಗಳನ್ನು ಶೋಧಿಸುವ ವಿಚಾರದಲ್ಲಿ ಕೊಡುಗೆ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ರಾಮದಾಸ ರೆಡ್ಡಿಯವರು ಶಿಲಾಯುಗದ ಮಾನವ ನೆಲೆಗಳನ್ನು ಶೋಧಿಸುವಲ್ಲಿ ಅಪಾರವಾದ ಕೊಡುಗೆ ನೀಡಿದ್ದಾರೆ. ಕರ್ನಾಟಕ ಮಾತ್ರವಲ್ಲದೇ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತಿತರ ರಾಜ್ಯಗಳಲ್ಲೂ ಕೂಡ ಕ್ಷೇತ್ರ ಕಾರ್ಯ ನಡೆಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೂ ನೂರಾರು ಎನ್‌ಎಸ್‌ಎಸ್ ಶಿಬಿರಗಳನ್ನು ಸಂಘಟಿಸುವ ಮೂಲಕ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ನೆರವಾಗಿದ್ದಾರೆ ಎಂದರು.

ಮೈಸೂರು ವಿವಿ ಎನ್‌ಎಸ್‌ಎಸ್ ನಿವೃತ್ತ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಕೆ. ಕಾಳಚನ್ನೇಗೌಡ ಮಾತನಾಡಿ, ಎನ್‌ಎಸ್‌ಎಸ್ ವ್ಯಕ್ತಿತ್ವ ರೂಪಿಸಲು ನೆರವಾಗುತ್ತದೆ. ರಾಮದಾಸ ರೆಡ್ಡಿ ಅವರು ವೀರಗಲ್ಲುಗಳ ಪತ್ತೆ ಹಾಗೂ ಸಂರಕ್ಷಣಾ ಕಾರ್ಯದಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ. ಎಲ್ಲಾ ಇಲಾಖೆಗಳ ನೆರವು ಪಡೆಯುವ ಮೂಲಕ ಎನ್‌ಎಸ್‌ಎಸ್ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ ಎಂದರು.

ಮತ್ತೋರ್ವ ನಿವೃತ್ತ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ. ರುದ್ರಯ್ಯ ಮಾತನಾಡಿ, ರಾಮದಾಸ ರೆಡ್ಡಿಯವರು ಜ್ಞಾನ, ಮಾನವೀಯತೆ ಇರುವ ವ್ಯಕ್ತಿ. ಹಿಡಿದ ಕೆಲಸವನ್ನು ಬಿಡದೆ ಮಾಡುವ ಛಲ್ಲಂದಕ ಮಲ್ಲ ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಎನ್. ರಾಗಿಣಿ ಮಾತನಾಡಿ, ರಾಮದಾಸ ರೆಡ್ಡಿಯವರು ಎಲ್ಲರ ಬಗ್ಗೆ ಅದರಲ್ಲೂ ಮಹಿಳೆಯರ ಬಗ್ಗೆ ಅಪಾರವಾದ ಗೌರವವುಳ್ಳ ವ್ಯಕ್ತಿ. ಅವರು ತಮ್ಮ ಕೆಲಸದ ಮೂಲಕ ಮಾದರಿಯಾಗಿದ್ದಾರೆ. ಮುಂದೆಯೂ ಕಾಲೇಜಿಗೆ ಮಾರ್ಗದರ್ಶನ ಮಾಡುತ್ತಾರೆ ಎಂದರು.

ಮನೋಜ್ ಕಾರ್ಯಕ್ರಮ ನಿರೂಪಿಸಿದರು. ಶರತ್ ಸ್ವಾಗತಿಸಿದರು. ಯೋಗೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ರಾಜೇಂದ್ರ ರಾಮದಾಸ್ ರೆಡ್ಡಿ ಅವರನ್ನು ಪರಿಚಯಿಸಿದರು. ಎನ್‌ಎಸ್‌ಎಸ್ ಹಿರಿಯ ಸ್ವಯಂ ಸೇವಕರಾದ ದಿಲೀಪ್, ಮಹೇಶ್ ಕುಮಾರ್, ಯೋಗೇಶ್, ಗಿರೀಶ್, ಕುಮಾರ್ ಅನಿಸಿಕೆ ಹಂಚಿಕೊಂಡರು. ನಿಖಿಲ್, ಶ್ರೀಕಂಠ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಆರ್. ಗುರುಸ್ವಾಮಿ, ಪ್ರೊ.ಆರ್.ಎನ್. ಚಂದ್ರಶೇಖರ್ ಮೊದಲಾದವರು ಇದ್ದರು.

ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಎಚ್.ಪ್ರಕಾಶ್, ಡಾ.ಕಾವೇರಿ ಪ್ರಕಾಶ್ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜೇ ಗೌಡ, ಭೌತಶಾಸ್ತ್ರ ಪ್ರಾಧ್ಯಾಪಕ ತಿಪ್ಪೇಸ್ವಾಮಿ ಸೇರಿದಂತೆ ವಿವಿಧ ಸಂಘಟನಗಳ ಮುಖಂಡರು ಡಾ.ರಾಮದಾಸ ರೆಡ್ಡಿ ಅವರನ್ನು ಅಭಿನಂದಿಸಿದರು.

ಮೈಸೂರು ಮಿತ್ರ ಮಂಗಳವಾರ 28 ನವೆಂಬರ್ 2023

ಜಂಬೂಸವಾರಿ ಬಿಂಬಿಸಿದ ಶ್ರೀ ಮಹದೇಶ್ವರ ಹುಲಿ ವಾಹನ ಮೆರವಣಿಗೆ



ಮೈಸೂರು, ನ.27(ಬಿಎಲ್‌ಯು)– ಮೈಸೂರಿನ ಗರಡಿಕೇರಿಯ ಶ್ರೀ ಮಲ್ಲೆ ಮಹದೇಶ್ವರ ದೇವಸ್ಥಾನದ ಶ್ರೀ ಮಹದೇಶ್ವರ ಹುಲಿ ವಾಹನ ಮೆರವಣಿಗೆಯು ಇಂದು ಅದ್ಧೂರಿಯಾಗಿ ನೆರವೇರಿತು. ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡುವ ಮೂಲಕ ಮಿನಿ ಜಂಬೂಸವಾರಿ ಬಿಂಬಿಸಿತು.

ಕಾರ್ತಿಕ ಮಾಸದ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆ ರಸ್ತೆಯ ಗರಡಿಕೇರಿಯ ಶ್ರೀ ಮಲ್ಲೆ ಮಹದೇಶ್ವರ ದೇವಸ್ಥಾನದ ಶ್ರೀ ಮಹದೇಶ್ವರ ಹುಲಿ ವಾಹನ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನದಿಂದ ಹೊರಟ ಮೆರವಣಿಗೆಯಲ್ಲಿ ಹತ್ತಾರು ಜಾನಪದ ಕಲಾ ತಂಡಗಳು ಸಾಗಿದವು. ನಾದಸ್ವರ, ಗೊರವರ ಕುಣಿತ, ವೀರಗಾಸೆ ಕುಣಿತ, ಬೆದರು ಬೊಂಬೆ, ಕೀಲು ಕುದುರೆ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿ ಜನರನ್ನು ಆಕರ್ಷಿಸಿದವು. ದೇವಸ್ಥಾನದಿಂದ ಹೊರಟ ಅದ್ದೂರಿ ಮೆರವಣಿಗೆ ಕೆ.ಆರ್.ಆಸ್ಪತ್ರೆ ವೃತ್ತ, ಆರ್ ಎಂಸಿ ವೃತ್ತ, ತಿಲಕ್‌ನಗರ, ಮಂಡಿ ಮೊಹಲ್ಲಾ, ಅಶೋಕ ರಸ್ತೆ, ಇರ್ವಿನ್ ರಸ್ತೆ ಮೂಲಕ ಮತ್ತೆ ದೇವಸ್ಥಾನ ತಲುಪಿತು. ಮಹದೇಶ್ವರರ ಹುಲಿ ವಾಹನವಲ್ಲದೆ ಶನೇಶ್ವರ, ಗಣಪತಿ, ವೀರಾಂಜನೇಯ ಪ್ರತಿಮೆ ಕೂಡ ಮೆರವಣಿಗೆಯಲ್ಲಿ ಸಾಗಿದವು.

ನಾಳೆ 'ಜಯಹೇ ಕರ್ನಾಟಕ' ಸಂಗೀತ ಕಾರ್ಯಕ್ರಮ



ಮೈಸೂರು,ನ.27(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತಾ ಸಭಾದಲ್ಲಿ ನ.29 ರಂದು ಸಂಜೆ 4 ಗಂಟೆಗೆ 'ಜಯಹೇ ಕರ್ನಾಟಕ' ಸಂಗೀತ ಕಾರ್ಯಕ್ರಮ, ಸಾಧಕರಿಗೆ ಜನಚೈತನ್ಯ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಲಾಗಿದೆ ಎಂದು ಜನ ಚೈತನ್ಯ ಫೌಂಡೇಶನ್ ಅಧ್ಯಕ್ಷ ಆರ್. ಲಕ್ಷ್ಮಣ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವದ ಅಂಗವಾಗಿ 'ಜಯಹೇ ಕರ್ನಾಟಕ' ಸಂಗೀತ ಕಾರ್ಯಕ್ರಮವನ್ನು ಜನ ಚೈತನ್ಯ ಫೌಂಡೇಷನ್ ಹಾಗೂ ಪಿ. ಮಣಿವಣ್ಣನ್ ಐಎಎಸ್ ಅಭಿಮಾನಿಗಳ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ವಹಿಸಲಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 16 ಜನ ಸಾಧಕರಿಗೆ ಜನಚೈತನ್ಯ ಪುರಸ್ಕಾರ ನೀಡಲಾಗುತ್ತದೆ. ಸಂಗೀತ ಕಾರ್ಯಕ್ರಮದಲ್ಲಿ ಗಾಯಕರಾದ ಡಾ.ಕೆ.ಎ.ಕೆ ಸುರೇಂದ್ರನ್, ಎಸ್.ಆರ್. ತಿರುಮಲೇಶ್, ಜಾಯ್ಸ್ ಪೀಟರ್, ಎನ್. ಲೋಕೇಶ್, ಉಮೇಶ್, ಸತ್ಯವತಿ, ಶಿವಕುಮಾರ್, ಸುರೇಶ್ ಕಾಮಾ, ಬಬಿತಾ ಹಾಗೂ ಆದಿಲ್ ಪಾಷಾ ಹಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೀಬೋರ್ಡ್ ವಾದಕ ವೆಂಕಟಸ್ವಾಮಿ, ಜೈ ಭುವನೇಶ್ವರಿ ಟ್ರಸ್ಟ್ ಅಧ್ಯಕ್ಷ ತಿಪ್ಪಯ್ಯ, ಕುಚುಕು ಚಲನಚಿತ್ರ ನಿರ್ದೇಶಕ ಮೈಸೂರು ರಾಜು, ನಿರ್ಮಾಪಕಿ ನಾಗರತ್ನಮ್ಮ ಹಾಗೂ ಸಮಾಜ ಸೇವಕ ರಾಜಣ್ಣ ಇದ್ದರು.

ಕನ್ನಡ ಭಾಷೆ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ

ಸಮಾಜ ಸೇವಕ ಶ್ರೀಕಾಂತ್



ಮೈಸೂರು, ನ.27– ನಗರದ ಶ್ರೀರಾಂಪುರ 2ನೇ ಹಂತ 65ನೇ ವಾರ್ಡ್‌ನಲ್ಲಿ ಗ್ರಾಸ್‌ಪಾರ್ಕ್ ಕನ್ನಡ ಅಭಿಮಾನಿಗಳ ಬಳಗದಿಂದ ಆಯೋಜಿಸಿದ್ದ 68ನೇ ಕನ್ನಡ ರಾಜ್ಯೋತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ಉದ್ಘಾಟಿಸಿದರು.

ಸಮಾಜ ಸೇವಕ ಎಸ್.ಶ್ರೀಕಾಂತ್ ಮಾತನಾಡಿ, ಕನ್ನಡ ನಮ್ಮ ತಾಯಿ ಭಾಷೆಯಾಗಿದ್ದು, ಎಲ್ಲಾ ಭಾಷೆಗಿಂತಲೂ ಮೇರು ಸ್ಥಾನದಲ್ಲಿದೆ. ನಿತ್ಯ ಕನ್ನಡ ಭಾಷೆ ಬಳಸಿ, ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಕನ್ನಡ ಭಾಷೆ ಶ್ರೀಮಂತಗೊಳಿಸಲು ಟೊಂಕಕಟ್ಟಿ ನಿಂತ ಸಾಹಿತಿಗಳು ಮತ್ತು ಭಾಷಾಭಿಮಾನಿಗಳಿಗೆ ನಾವೆಲ್ಲರೂ ನಮಿಸಬೇಕಿದೆ ಎಂದರು.

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶ್ರೀರಾಂಪುರ 2ನೇ ಹಂತದ 65ನೇ ವಾರ್ಡ್‌ನ ಗ್ರಾಸ್‌ಪಾರ್ಕ್‌ನಲ್ಲಿ ವಾಯು ವಿಹಾರಿಗಳಿಗೆ ಹಾಗೂ ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ಬ್ಯಾಸ್ಕೆಟ್ ಬಾಲ್ ಕೋರ್ಟ್ ನಿರ್ಮಿಸಿ ಕೊಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಕುವೆಂಪುನಗರ ಪೊಲೀಸ್ ಠಾಣಾ ವೃತ್ತ ನಿರೀಕ್ಷಕ ಅರುಣ್, ನಗರಸಭೆ ಮಾಜಿ ಸದಸ್ಯರಾದ ಗೀತಾ ಯೋಗನಾಥ್, ಕೆಂಪಣ್ಣ, ವಕೀಲರಾದ ನಾರಾಯಣಗೌಡ, ಗ್ರಾಸ್ ಪಾರ್ಕ್ ಕನ್ನಡ ಅಭಿಮಾನಿಗಳ ಸಂಘದ ಅಧ್ಯಕ್ಷ ಡಿ.ಆರ್.ಮಹೇಶ್, ಕೆ.ಬಿ.ಗಂಗಾಧರ್, ಲೆಕ್ಕಪರಿಶೋಧಕ ಮಾದೇಗೌಡ, ಸಿದ್ದು, ಉದ್ಯಮಿಗಳಾದ ಶ್ರೀಧರ್‌ಗೌಡ, ರಾಜಶೇಖರ್, ಮಂಜುನಾಥ್, ಪ್ರಸನ್ನ, ಸತೀಶ್‌ಗೌಡ ಉಪಸ್ಥಿತರಿದ್ದರು.

ಹಾಸ್ಟೆಲ್‌ನಲ್ಲಿ ಗುಣಮಟ್ಟದ ಆಹಾರ, ಮೂಲ ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು,ನ27(ಎಂಟಿವೈ)– ವಿದ್ಯಾರ್ಥಿ ನಿಲಯಗಳಲ್ಲಿ ಗುಣಮಟ್ಟದ ಆಹಾರ ನೀಡುವುದು ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ವಿವಿಧ ಕಾಲೇಜುಗಳು ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನೆ ನಡೆಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಜೇಷನ್ (ಎಐಡಿಎಸ್‌ಓ) ನೇತೃತ್ವದಲ್ಲಿ ಮಹಾರಾಜ ಹಾಸ್ಟೆಲ್, ಗೌತಮ್, ಡಾ.ಅಂಬೇಡ್ಕರ್ ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ವಿದ್ಯಾರ್ಥಿನಿಲಯಗಳಲ್ಲಿ ಉತ್ತಮ ಆಹಾರ ಹಾಗೂ ಮೂಲ ಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜು ಹಾಗೂ ವಿವಿ ವಿದ್ಯಾರ್ಥಿಗಳಿರುವ ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯ, ಗೌತಮ್ ಹಾಸ್ಟೆಲ್ ಹಾಗೂ ಡಾ. ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ವಾಸವಿದ್ದಾರೆ. ಕಳೆದ ಒಂದು ವಾರದಿಂದ ಸರಿಯಾದ ಆಹಾರ ನೀಡುತ್ತಿಲ್ಲ. ಆಹಾರ ಪೂರೈಸುವ ಟೆಂಡರ್‌ದಾರರು ಗುಣಮಟ್ಟದ ಪದಾರ್ಥ ಬಳಸುತ್ತಿಲ್ಲ. ಇದರಿಂದ ಸರಿಯಾಗಿ ಊಟ ಸಿಗದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ ಅಸ್ವಚ್ಛತೆ ಕಾರಣ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಈ ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ. ಕೂಡಲೇ ಸಂಬಂಧಪಟ್ಟವರು ವಿದ್ಯಾರ್ಥಿನಿಲಯಗಳಲ್ಲಿರುವ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಬಂದ ವಿಶ್ವವಿದ್ಯಾನಿಲಯದ ಡೀನ್ ಪ್ರೊ.ಚಂದ್ರಶೇಖರ್ ಮನವಿ ಪತ್ರ ಸ್ವೀಕರಿಸಿ, ಎರಡು ದಿನದ ಒಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಪದಾಧಿಕಾರಿಗಳಾದ ನಿತಿನ್, ಬೀರಪ್ಪ, ಸತೀಶ್, ವಿದ್ಯಾರ್ಥಿಗಳಾದ ಅಭಿಷೇಕ್, ಮಂಜುನಾಥ್, ಗೌತಮ್, ಹರೀಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಭಣಗುಡುತ್ತಿರುವ ಮೈಸೂರು ನಗರಪಾಲಿಕೆ ಪ್ರಧಾನ ಕಾರ್ಯಾಲಯ

●ಆಡಳಿತಾಧಿಕಾರಿಗಳಿಂದ ಅಧಿಕಾರ ಚಲಾವಣೆ ●ಮೇಯರ್ ಕಚೇರಿ ಖಾಲಿ ಖಾಲಿ ● ಸ್ಥಾಯಿ ಸಮಿತಿ ಅಧ್ಯಕ್ಷರ ಕೋಣೆಗೆ ಬೀಗ ●ಅಧಿಕಾರಿಗಳದ್ದೇ ಕಾರುಬಾರು ●ಶೀಘ್ರ ಚುನಾವಣೆ ನಡೆಸಲು ಆಗ್ರಹ



ಮೈಸೂರು, ನ.27(ಬಿಎಲ್‌ಯು)– ಜನಪ್ರತಿನಿಧಿಗಳು, ಜನರಿಂದ ಸದಾ ಗಿಜಿಗುಡುತ್ತಿದ್ದ ಮೈಸೂರು ನಗರ ಪಾಲಿಕೆಯ ಪ್ರಧಾನ ಕಾರ್ಯಾಲಯದಲ್ಲೀಗ ಬಿಕೋ ಎನ್ನುವ ವಾತಾವರಣವಿದೆ. ಸಮಸ್ಯೆ ಎದುರಾದಾಗ ನಗರದ ನಾಗರಿಕರು ಜನಪ್ರತಿನಿಧಿಗಳಿಗೆ ದೂರು ನೀಡಿ ಅಧಿಕಾರಿಗಳ ಮುಖೇನ ಪರಿಹಾರ ಕಂಡುಕೊಳ್ಳಬೇಕಿದೆ. ಆದರೆ ಈಗ ಜನಪ್ರತಿನಿಧಿಗಳ ಆಡಳಿತಾವಧಿ ಮುಗಿದಿರುವ ಕಾರಣ ಅಧಿಕಾರಿಗಳ ಬಗ್ಗೆ ಮಾಹಿತಿ ಇಲ್ಲದೆ ತಮ್ಮ ಸಮಸ್ಯೆ ಯಾರಿಗೆ ಹೇಳಿಕೊಳ್ಳಬೇಕೆಂದು ದಿಕ್ಕು ತೋಚದೆ ಜನರು ಕಂಗಾಲಾಗಿದ್ದಾರೆ.

ಮೈಸೂರು ನಗರ ಪಾಲಿಕೆಯಲ್ಲಿ 65 ವಾರ್ಡ್‌ಗಳಿದ್ದು, ಪ್ರತಿ ವಾರ್ಡ್‌ನಿಂದ ಆಯ್ಕೆಯಾದ ಕಾರ್ಪೊರೇಟರ್‌ಗಳು ತಮ್ಮ ವಾರ್ಡ್‌ನ ಜನರ ಸಮಸ್ಯೆ ನಿವಾರಿಸುವ ಹೊಣೆ ಹೊತ್ತಿದ್ದರು.

ಮೇಯರ್‌ರಿಂದ ಹಿಡಿದು ಸ್ಥಾಯಿ ಸಮಿತಿ ಅಧ್ಯಕ್ಷರ ತನಕ ಪ್ರತಿಯೊಬ್ಬ ಕಾರ್ಪೊರೇಟರ್ ಈ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಮೇಯರ್, ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರು ಫೋನ್ ಸಂಪರ್ಕದ ಮೂಲಕವೇ ಜನರ ಸಮಸ್ಯೆ ಸಾಕಷ್ಟು ಪರಿಹರಿಸುವುದು ಇತ್ತೀಚೆಗೆ ವಾಡಿಕೆ.

ಆದರೆ, ಬಹುತೇಕ ಸಮಸ್ಯೆ ಪರಿಹಾರಕ್ಕೆ ಪ್ರಮುಖ ನಿರ್ಧಾರ ಕೈಗೊಳ್ಳಲು ಜನಪ್ರತಿನಿಧಿಗಳು ನಗರ ಪಾಲಿಕೆ ಕಚೇರಿಗೆ ಬರಲೇ ಬೇಕಿತ್ತು. ಈ ಮೊದಲು ಮೇಯರ್, ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರಲ್ಲಿ ಒಬ್ಬರಲ್ಲ ಒಬ್ಬರು ಬೆಳಿಗ್ಗೆಯಿಂದ ರಾತ್ರಿ ತನಕ ಪಾಲಿಕೆ ಕಚೇರಿಯಲ್ಲಿ ಸಿಗುತ್ತಿದ್ದರು.

ಆದರೆ ನವೆಂಬರ್ 16ಕ್ಕೆ ನಗರ ಪಾಲಿಕೆ ಸದಸ್ಯರ ಅಧಿಕಾರಾವಧಿ ಮುಗಿದಿದೆ. ಈಗ ಯಾರೂ ನಗರ ಪಾಲಿಕೆ ಕಚೇರಿಯತ್ತ ಸುಳಿಯುತ್ತಿಲ್ಲ. ಜನಪ್ರತಿನಿಧಿಗಳಿಂದ ಗಿಜಿಗಿಡುತ್ತಿದ್ದ ನಗರ ಪಾಲಿಕೆ ಪ್ರಧಾನ ಕಚೇರಿ ಈಗ ಭಣಗುಡುತ್ತಿದೆ. ಜನಪ್ರತಿನಿಧಿಗಳು ಇದ್ದಾಗ ನಗರ ಪಾಲಿಕೆಗೆ ಬರುತ್ತಿದ್ದ ಜನರು ಕೂಡ ಇತ್ತ ತಲೆಹಾಕುತ್ತಿಲ್ಲ.

ಕುಡಿಯುವ ನೀರು, ಒಳಚರಂಡಿ ಸಮಸ್ಯೆ, ಬೀದಿದೀಪ, ಉದ್ಯಾನವನಗಳ ನಿರ್ವಹಣೆ ಸೇರಿದಂತೆ ಕೆಲವು ಸಮಸ್ಯೆ ಎದುರಾದಾಗ ಯಾವ ಅಧಿಕಾರಿಗೆ ದೂರು ನೀಡಬೇಕೆಂದು ಜನರಿಗೆ ಮಾಹಿತಿ ಇರುವುದಿಲ್ಲ. ಅಧಿಕಾರಿಗಳ ದೂರವಾಣಿ ಸಂಖ್ಯೆ ಕೂಡ ಲಭ್ಯವಿಲ್ಲ. ಇದರಿಂದ ಸಮಸ್ಯೆ ಪರಿಹಾರವಾಗದೆ ಜನರು ಸಂಕಷ್ಟ ಎದುರಿಸುವಂತಾಗಿದೆ.

ತಕ್ಷಣ ಚುನಾವಣೆ ನಡೆಸಬೇಕು

ನಾವು ಜನರ ಕೈಗೆ ಸಿಗುತ್ತಿದ್ದೆವು. ವಾರ್ಡ್‌ನಲ್ಲೇ ನಮ್ಮ ಮನೆ ಇರುವ ಕಾರಣ ಇಲ್ಲೇ ಬಂದು ತಮ್ಮ ಸಮಸ್ಯೆ ಹೇಳಿಕೊಳ್ಳುತ್ತಿದ್ದರು. ಆದರೆ ಈಗ ಜನರಿಗೆ ತೊಂದರೆ ಆದಾಗ ದೂರು ನೀಡಲು ಅಧಿಕಾರಿಗಳ ಬಗ್ಗೆ ಮಾಹಿತಿ ಇಲ್ಲ. ಅಧಿಕಾರಿಗಳಿಗೆ ದೂರು ನೀಡಿದರೂ ಅವರು ತಕ್ಷಣವೇ ಸ್ಪಂದಿಸುವುದಿಲ್ಲ. ಆದ ಕಾರಣ ಜನಪ್ರತಿನಿಧಿಗಳ ಆಡಳಿತ ತಕ್ಷಣವೇ ಅಸ್ತಿತ್ವಕ್ಕೆ ಬರಲು ಚುನಾವಣೆ ನಡೆಸಬೇಕು.

- ಪುಷ್ಪಲತಾ ಜಗನ್ನಾಥ್, ಮಾಜಿ ಮೇಯರ್

ಆಡಳಿತಾಧಿಕಾರಿಗಳ ಸೂಚನೆಯಂತೆ ಆಡಳಿತ

ಮೈಸೂರು ನಗರ ಪಾಲಿಕೆಯ ಆಡಳಿತಾಧಿಕಾರಿಯಾಗಿ ಪ್ರಾದೇಶಿಕ ಆಯುಕ್ತ ಡಾ.ಪ್ರಕಾಶ್ ಅಧಿಕಾರ ಸ್ವೀಕರಿಸಿದ್ದಾರೆ. ಕಡತಗಳಿಗೆ ಮೇಯರ್ ಬದಲಾಗಿ ಪ್ರಾದೇಶಿಕ ಆಯುಕ್ತರೇ ಸಹಿ ಹಾಕುತ್ತಿದ್ದಾರೆ. ಈಗಾಗಲೇ ಸಭೆ ನಡೆಸಿ ಏನೇನು ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದ್ದಾರೆ. ಯಾವುದೇ ಸಮಸ್ಯೆ ಎದುರಾದರೂ ಸ್ಪಂದಿಸುವಂತೆ ಹೇಳಿದ್ದಾರೆ. ಆದರೆ ಕೌನ್ಸಿಲ್ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಬಿಟ್ಟು ಎಲ್ಲಾ ಪ್ರಮುಖ ನಿರ್ಧಾರವನ್ನು ಪ್ರಾದೇಶಿಕ ಆಯುಕ್ತರೇ ಕೈಗೊಳ್ಳುತ್ತಿದ್ದಾರೆ. ತುರ್ತಾಗಿ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ನಾನು ಕೈಗೊಳ್ಳುತ್ತೇನೆ. ಜನರಿಗೆ ಯಾವುದೇ ಸಮಸ್ಯೆ ಎದುರಾದರೂ ಅದನ್ನು ಅಧಿಕಾರಿಗಳು ತಕ್ಷಣವೇ ಪರಿಹಾರ ಮಾಡುತ್ತಾರೆ. ಕುಡಿಯುವ ನೀರು, ಒಳ ಚರಂಡಿ ಸೇರಿದಂತೆ ಯಾವುದೇ ಸಮಸ್ಯೆ ಎದುರಾದರೂ ತಕ್ಷಣವೇ ಕಂಟ್ರೋಲ್ ರೂಂಗೆ ಕರೆ ಮಾಡಿ ದೂರು ನೀಡಬಹುದು. ಅಧಿಕಾರಿಗಳು ಕೂಡಲೇ ಸಮಸ್ಯೆ ಪರಿಹಾರ ಮಾಡುತ್ತಾರೆ.

- ಆಶಾದ್ ಉರ್ ರೆಹಮಾನ್ ಷರೀಫ್, ಆಯುಕ್ತರು ನಗರಪಾಲಿಕೆ

ಅಧಿಕಾರಿಗಳ ಬಗ್ಗೆ ಜನರಿಗೆ ಮಾಹಿತಿ ಇರುವುದಿಲ್ಲ

ಕುಡಿಯುವ ನೀರು, ಒಳ ಚರಂಡಿ ಸೇರಿದಂತೆ ಕೆಲವು ಸಮಸ್ಯೆ ಎದುರಾದಾಗ ಜನರು ನಮಗೆ ದೂರು ನೀಡುತ್ತಿದ್ದರು. ಅಧಿಕಾರಿಗಳ ಮೂಲಕ ಅವರ ಸಮಸ್ಯೆ ಪರಿಹಾರ ಮಾಡುತ್ತಿದ್ದೆವು. ಆದರೆ ಈಗ ಜನಪ್ರತಿನಿಧಿಗಳ ಆಡಳಿತ ಇಲ್ಲದಿರುವಾಗ ಯಾವ ಅಧಿಕಾರಿಗಳಿಗೆ ದೂರು ನೀಡಬೇಕೆಂದು ಜನರಿಗೆ ಮಾಹಿತಿ ಇಲ್ಲ. ಕುವೆಂಪುನಗರದಲ್ಲಿ ಇಂದು ಕುಡಿಯುವ ನೀರಿಲ್ಲದೆ ಜನರು ಪರದಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳಿಗೆ ಅಧಿಕಾರವಿದ್ದರೆ ತಕ್ಷಣವೇ ಸಮಸ್ಯೆ ಪರಿಹಾರ ಮಾಡುತ್ತಿದ್ದರು.

ನವೆಂಬರ್ 16 ಕ್ಕೆ ನಮ್ಮ ಅಧಿಕಾರಾವಧಿ ಮುಗಿದಿದೆ. ಕಾನೂನು ಪ್ರಕಾರ ನಮ್ಮ ಅಧಿಕಾರವಧಿಗೂ ಮುನ್ನ ಚುನಾವಣೆ ನಡೆಸಿ ನಮ್ಮ ಅಧಿಕಾರ ಮುಗಿದ ಮಾರನೇ ದಿನಕ್ಕೆ ಹೊಸದಾಗಿ ಆಯ್ಕೆಯಾದವರು ಅಧಿಕಾರ ಸ್ವೀಕಾರ ಮಾಡಬೇಕು. ಆದರೆ ಸರ್ಕಾರ ಕಾನೂನು ನಿಯಮ ಗಾಳಿಗೆ ತೂರಿದ್ದು, ಇನ್ನು ಚುನಾವಣೆ ನಡೆಸಿಲ್ಲ. ಈಗಲಾದರೂ ಸರ್ಕಾರ ನಗರ ಪಾಲಿಕೆ ಚುನಾವಣೆ ತಕ್ಷಣ ನಡೆಸಬೇಕು.

- ಶಿವಕುಮಾರ್, ಮಾಜಿ ಮೇಯರ್

ಜನಪ್ರತಿನಿಧಿಗಳ ಪಾತ್ರ ಬಹು ಮುಖ್ಯ

ಕುಡಿಯುವ ನೀರು, ಒಳಚರಂಡಿ, ಬೀದಿದೀಪ, ತೋಟಗಾರಿಕೆ, ಆರೋಗ್ಯ, ಇಂಜಿನಿಯರಿಂಗ್ ಶಾಖೆ ಸೇರಿದಂತೆ ಯಾವುದೇ ತೊಂದರೆ ಎದುರಾದರೂ ಆಯಾ ಅಧಿಕಾರಿಗಳ ಬಗ್ಗೆ ಜನಪ್ರತಿನಿಧಿಗಳಿಗೆ ಮಾಹಿತಿ ಇರುತ್ತದೆ. ಜನರು ಸಮಸ್ಯೆ ಹೇಳಿದ ಕೂಡಲೇ ಜನಪ್ರತಿನಿಧಿಗಳಾದ ನಾವು ತಕ್ಷಣ ಪರಿಹರಿಸುತ್ತಿದ್ದೆವು. ಇದರಿಂದ ಜನಪ್ರತಿನಿಧಿಗಳ ಪಾತ್ರ ಬಹಳ ಮುಖ್ಯ.

- ಎಸ್‌ಬಿಎಂ ಮಂಜು, ಮಾಜಿ ಕಾರ್ಪೊರೇಟರ್

ಜನಪ್ರತಿನಿಧಿಗಳ ಅಧಿಕಾರಾವಧಿ ಮುಗಿಯುತ್ತಿದ್ದಂತೆ ಸರ್ಕಾರ, ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ. ಪ್ರಕಾಶ್ ಅವರನ್ನು ನಗರ ಪಾಲಿಕೆಯ ಆಡಳಿತಾಧಿಕಾರಿಯಾಗಿ ನಿಯೋಜಿಸಿದೆ. ಮೇಯರ್ ಅವರ ಸ್ಥಾನದಲ್ಲಿ ಕುಳಿತು ಆಡಳಿತಾಧಿಕಾರಿಗಳು ಹಲವು ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಆದರೆ ಅಧಿಕಾರಿಗಳಿಗೆ ಎಷ್ಟೇ ಅಧಿಕಾರ ಇದ್ದರೂ ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳುವಂತೆ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಇದರಿಂದ ಕೌನ್ಸಿಲ್ ಮೂಲಕ ನಿರ್ಣಯವಾಗುವ ಬಹಳಷ್ಟು ವಿಚಾರಗಳು ನನೆಗುದಿಗೆ ಬೀಳಲಿವೆ. ಮುಂದಿನ ಜನಪ್ರತಿನಿಧಿಗಳ ಆಡಳಿತ ಅಸ್ತಿತ್ವಕ್ಕೆ ಬರುವ ತನಕ ಪ್ರಮುಖ ನಿರ್ಣಯ ಕೈಗೊಳ್ಳಲು ಸಾಧ್ಯವಿಲ್ಲ. ಇದರಿಂದ ಸಹಜವಾಗಿಯೇ ಅಭಿವೃದ್ಧಿ ಕುಂಠಿತವಾಗುತ್ತದೆ.

ಜನರಿಂದ, ಜನರಿಗೋಸ್ಕರ, ಜನರಿಗಾಗಿ ಇರುವ ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳ ಪಾತ್ರ ಬಹಳ ಮುಖ್ಯ. ಆಡಳಿತ ಅಧಿಕಾರಶಾಹಿಗಳ ಸರ್ವಾಧಿಕಾರ ಧೋರಣೆಯಿಂದ ಮುಕ್ತಗೊಳಿಸುವ ಸಲುವಾಗಿಯೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಆಯ್ಕೆ ವಿಧಾನವಿದೆ. ಗ್ರಾಮ ಪಂಚಾಯಿತಿಯಿಂದ ಪಾರ್ಲಿಮೆಂಟ್ ವರೆಗೂ ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ಆಡಳಿತ ನಿರ್ವಹಣೆ ಮಾಡುತ್ತಾರೆ. ಜನರ ಪರವಾಗಿ ಆಡಳಿತ ನಡೆಸುವ ಜನಪ್ರತಿನಿಧಿಗಳು ಕೂಡ ಬೇಜವಾಬ್ದಾರಿಯಿಂದ ವರ್ತಿಸಿದರೆ, ಮುಂದಿನ ಚುನಾವಣೆಯಲ್ಲಿ ಜನರು ಅಂತಹವರಿಗೆ ತಕ್ಕ ಪಾಠ ಕಲಿಸುತ್ತಾರೆ. ಇದನ್ನು ಅರಿತು ಜನಪ್ರತಿನಿಧಿಗಳು ಜನರಿಗೆ ನಿಷ್ಠರಾಗಿರಬೇಕಾಗುತ್ತದೆ.

ಒಟ್ಟಾರೆ ಜನಪ್ರತಿನಿಧಿಗಳು ಬರುವ ತನಕ ನಗರ ಪಾಲಿಕೆಯಲ್ಲಿ ಅಧಿಕಾರಿಗಳದ್ದೇ ಕಾರುಬಾರು.

ನಿತ್ಯ ಒತ್ತಡದಲ್ಲಿ ಕಾರ್ಯ ನಿರ್ವಹಿಸುವ ಬಸ್ ಡ್ರೈವರ್, ಕಂಡಕ್ಟರ್ ಜೊತೆ ಸೌಜನ್ಯದಿಂದ ವರ್ತಿಸಿ

ಸಾರ್ವಜನಿಕರಲ್ಲಿ ವಿಜಯನಗರ ಡಿಪೋ ಮ್ಯಾನೇಜರ್ ಸುಮಲತಾ ಮನವಿ

ಮೈಸೂರು, ನ.27(ಎಸ್‌ಪಿಎನ್)– ಸದಾ ಒತ್ತಡದಲ್ಲೇ ಕರ್ತವ್ಯ ನಿರ್ವಹಿಸುವ ಕೆಎಸ್‌ಆರ್‌ಟಿಸಿ ಬಸ್ ಚಾಲಕರು ಮತ್ತು ನಿರ್ವಾಹಕರ ಜೊತೆಗೆ ಸಾರ್ವಜನಿಕರು ಸೌಜನ್ಯದಿಂದ ವರ್ತಿಸಬೇಕು ಎಂದು ವಿಜಯನಗರ ಡಿಪೋ ಮ್ಯಾನೇಜರ್ ಸುಮಲತಾ ಅಭಿಪ್ರಾಯಪಟ್ಟರು.

ವಿಜಯನಗರ 4ನೇ ಹಂತದ ಮರಿಮಲ್ಲಪ್ಪ ವಿದ್ಯಾಸಂಸ್ಥೆ ವೃತ್ತದ ಬಳಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ ನಡೆದ 68ನೇ ಕನ್ನಡ ರಾಜ್ಯೋತ್ಸವ ಮತ್ತು '95ಡಿ' ಮಾರ್ಗದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮತ್ತು ನಿರ್ವಾಹಕರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.



ಕೆಎಸ್‌ಆರ್‌ಟಿಸಿ ಬಸ್ ಚಾಲಕರು ಮತ್ತು ನಿರ್ವಾಹಕರು ದಿನನಿತ್ಯ ಒಂದೇ ಬಸ್‌ನಲ್ಲಿ 1500ಕ್ಕೂ ಹೆಚ್ಚು ಪ್ರಯಾಣಿಕರ ಮುಖಾಮುಖಿಯಾಗುತ್ತಾರೆ. ಟಿಕೆಟ್ ವಿತರಣೆ, ಚಿಲ್ಲರೆ ಸಮಸ್ಯೆ ಸೇರಿದಂತೆ ಇತರೆ ಜಂಜಾಟದಲ್ಲಿರುತ್ತಾರೆ. ಹಾಗಾಗಿ ನಿತ್ಯ ಸಾರ್ವಜನಿಕರೊಂದಿಗೆ ವ್ಯವಹರಿಸುವಾಗ ಕನ್ನಡವನ್ನೇ ಬಳಸಿ, ಕನ್ನಡದ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡುತ್ತಾರೆ. ಹಾಗಾಗಿ ಕೆಎಸ್‌ಆರ್‌ಟಿಸಿ ಸಂಸ್ಥೆ ಕನ್ನಡ ರಾಜ್ಯೋತ್ಸವ ಎಂದರೆ ವಿಶೇಷ ಹಬ್ಬ ಎಂದೇ ಪರಿಗಣಿಸುತ್ತದೆ ಎಂದು ತಿಳಿಸಿದರು.

ಈ ಮಾರ್ಗದಲ್ಲಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗೆ ರಾಜ್ಯೋತ್ಸವ ಅಂಗವಾಗಿ ಹೂವಿನಿಂದ ಅಲಂಕರಿಸಲಾಗಿದೆ. ಕೆಎಸ್‌ಆರ್‌ಟಿಸಿ, ಜನಸ್ನೇಹಿಯಾಗಿ ಹಲವು ದಶಕಗಳಿಂದ ಸೇವೆ ಸಲ್ಲಿಸುತ್ತಿದೆ ಎಂದರು.

4 ಟ್ರಿಪ್ ಹೆಚ್ಚಿಸಲಾಗಿದೆ: ಪ್ರಸ್ತುತ ಶಕ್ತಿ ಯೋಜನೆಯಿಂದಾಗಿ '95ಡಿ' ಮಾರ್ಗದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕಾರ್ಯಾಚರಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪ್ರಯಾಣಿಕರು ಸಂಚರಿಸುತ್ತಿರುವ ಹಿನ್ನೆಲೆಯಲ್ಲಿ 95ಡಿ ಮಾರ್ಗದ ಟ್ರಿಪ್‌ಗಳ ಸಂಖ್ಯೆ ಹೆಚ್ಚಿಸುವಂತೆ ಮಹಿಳಾ ಪ್ರಯಾಣಿಕರಿಂದ ಮನವಿ ಬಂದಿತ್ತು. ನಿತ್ಯ ಈ ಮಾರ್ಗದ ಬಸ್ 10 ಟ್ರಿಪ್ ಓಡುತ್ತಿತ್ತು. ಈಗ 4 ಟ್ರಿಪ್ ಹೆಚ್ಚು ಮಾಡಲಾಗಿದ್ದು, ಇನ್ನು ನಿತ್ಯ 14 ಟ್ರಿಪ್ ಕಾರ್ಯಾಚರಣೆಗೊಳ್ಳಲಿದೆ. ಈ ಬಸ್ ಬಸವನಹಳ್ಳಿ, ವಿಜಯನಗರ 4ನೇ ಹಂತ, ಹಿನಕಲ್, ಒಂಟಿಕೊಪ್ಪಲ್, ರೈಲ್ವೆ ನಿಲ್ದಾಣ ಮಾರ್ಗವಾಗಿ ನಗರ ಬಸ್ ನಿಲ್ದಾಣ ತಲುಪುತ್ತದೆ ಎಂದು ಮಾಹಿತಿ ನೀಡಿದರು.

ವಿಜಯನಗರ 4ನೇ ಹಂತ ಹಿರಿಯ ನಾಗರಿಕ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಚೆಲುವೇಗೌಡ ಮಾತನಾಡಿ, ವಿಜಯನಗರ 4ನೇ ಹಂತ ದೊಡ್ಡ ಬಡಾವಣೆಯಾಗಿದ್ದು, ಇಲ್ಲಿಂದ ಶಾಲಾ ಮಕ್ಕಳು, ಮಹಿಳಾ ಕಾರ್ಮಿಕರು ಸೇರಿದಂತೆ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಪ್ರಯಾಣಿಸುತ್ತಾರೆ. ಈ ಮಾರ್ಗದಲ್ಲಿ ಮತ್ತಷ್ಟು ಬಸ್ ಸೇವೆಗಳನ್ನು ಹೆಚ್ಚಿಸಬೇಕು. ಅದರಲ್ಲೂ ಸಂಜೆ 6 ಗಂಟೆ ನಂತರ ಹೆಚ್ಚಿನ ಬಸ್ ಸೌಲಭ್ಯ ಒದಗಿಸುವಂತೆಯೂ ಮನವಿ ಮಾಡಲಾಯಿತು,.

ಈ ವೇಳೆ '95ಡಿ' ಮಾರ್ಗದ ಬಸ್ ಚಾಲಕರಾದ ವೆಂಕಟೇಶ್ ಸ್ವಾಮಿ, ಟಿ.ಮಹೇಶ್, ನಿರ್ವಾಹಕರಾದ ಮಹಾದೇವಸ್ವಾಮಿ, ಟಿ.ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಹಾಯಕ ಟ್ರಾಫಿಕ್ ಕಂಟ್ರೋಲರ್ ಮಹೇಶ್, ಅಧಿಕಾರಿಗಳಾದ ಗಂಗಾಧರ್, ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಡಾ.ಇಂದುಕಲಾ ಅರಸ್ ಉಪಸ್ಥಿತರಿದ್ದರು.

ಡೇ ನಲ್ಮ್ ಯೋಜನೆಯಡಿ ಅರ್ಜಿ ಆಹ್ವಾನ

ಮೈಸೂರು, ನ.27– ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ 2023–24ನೇ ಸಾಲಿನಲ್ಲಿ ಮಹಿಳಾ ಸ್ವ–ಸಹಾಯ ಗುಂಪುಗಳ ರಚನೆ, ಪ್ರದೇಶ ಮಟ್ಟದ ಒಕ್ಕೂಟ ರಚನೆ, ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸುವುದು ಮತ್ತು ಸ್ವಯಂ–ಉದ್ಯೋಗ ಕಾರ್ಯಕ್ರಮದಲ್ಲಿ ವೈಯಕ್ತಿಕ ಸಾಲ ಸೌಲಭ್ಯಗಳಿಗೆ ಗುರಿ ನಿಗದಿಪಡಿಸಿದ್ದು, ಅರ್ಹ ಬಿ.ಪಿ.ಎಲ್ ಕುಟುಂಬದ ಸದಸ್ಯರಿಂದ ಅರ್ಜಿಯನ್ನು ಆಹ್ವಾನಿಸಿರುತ್ತದೆ. ಸೌಲಭ್ಯ ಪಡೆಯಲು ಇಚ್ಛಿಸುವವರು ಬೋಗಾದಿ ಪಟ್ಟಣ ಪಂಚಾಯಿತಿ ಕಚೇರಿಯಿಂದ ಅರ್ಜಿ ಪಡೆದು, ಅರ್ಜಿಯನ್ನು ಜಾತಿ, ವರಮಾನ ಪತ್ರ, ಬಿ.ಪಿ.ಎಲ್ ಪಡಿತರ ಚೀಟಿ, ಆಧಾರ್ ಕಾರ್ಡ್, ಇತ್ತೀಚಿನ ಭಾವಚಿತ್ರ, ನೋಟರಿ ಪ್ರಮಾಣ ಪತ್ರ, ಯೋಜನಾ ವರದಿ, ಉದ್ಯಮಶೀಲತಾ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳೊಡನೆ ಕೊನೆಯ 08–12–2023ರ ಸಂಜೆ 5 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬೋಗಾದಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಲಕ್ಷ ದೀಪೋತ್ಸವದಲ್ಲಿ ಪ್ರಜ್ವಲಿಸಿದ ದೀಪಗಳ ಸಾಲು

●ಕಲ್ಯಾಣಗಿರಿ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಭಕ್ತರ ಸಂಭ್ರಮ ●ದೀಪೋತ್ಸವಕ್ಕೆ ಚಾಲನೆ ನೀಡಿದ ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು,ನ27(ಪಿಎಂ)– ಸಾಲು ಸಾಲು ದೀಪಗಳು ಬೆಳಗುವ ಮೂಲಕ ಮೈಸೂರಿನ ಕಲ್ಯಾಣಗಿರಿಯ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಲಕ್ಷ ದೀಪೋತ್ಸವವು ಸೋಮವಾರ ಭಕ್ತಾದಿಗಳ ಸಡಗರ–ಸಂಭ್ರಮ, ಭಕ್ತಿಭಾವದ ಮೂಲಕ ನೆರವೇರಿತು.

ವಿಷ್ಣು ದೀಪೋತ್ಸವದ ಪ್ರಯುಕ್ತ ನಡೆದ ಈ ಲಕ್ಷ ದೀಪೋತ್ಸವದಲ್ಲಿ ದೇವಸ್ಥಾನದ ಎದುರಿನ ರಸ್ತೆಯಲ್ಲಿ ಸಾಲು ಸಾಲು ದೀಪಗಳನ್ನು ಬೆಳಗಿಸಲಾಯಿತು. ವಿವಿಧ ಚಿತ್ತಾರದ ವಿನ್ಯಾಸ ಮತ್ತು ಸಾಲಾಗಿ ಜೋಡಿಸಿದ್ದ ದೀಪಗಳು ಒಮ್ಮೆಲೆ ಬೆಳಗುವ ಮೂಲಕ ಕಣ್ಣಿಗೆ ಬೆಳಕಿನ ಹಬ್ಬ ಉಂಟು ಮಾಡಿದವು.



ದೀಪ ಬೆಳಗುವ ಮೂಲಕ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಿದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಈ ಭಾಗದಲ್ಲಿ ಸದರಿ ದೇವಸ್ಥಾನವು ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿಗೆ ಜಾತಿ–ಮತದ ಭೇದವಿಲ್ಲದೆ, ಸಾರ್ವಜನಿಕರು ಮುಕ್ತವಾಗಿ ಬಂದು ದೇವರಿಗೆ ಹರಕೆ ಸಲ್ಲಿಸಿ, ದೀಪವನ್ನು ಪ್ರಜ್ವಲಿಸುವ ಒಂದು ಸುಂದರ ಹಬ್ಬವಿದು. ಅದರಲ್ಲಿಯೂ ಇಂದು ಹುಣ್ಣಿಮೆಯಾಗಿದ್ದು, ಹಲವೆಡೆ ಶಿವ ದೀಪೋತ್ಸವ ಮತ್ತು ವಿಷ್ಣು ದೀಪೋತ್ಸವ ಎರಡನ್ನೂ ಒಟ್ಟಾಗಿ ಆಚರಣೆ ಮಾಡುತ್ತಿರುವುದು ವಿಶೇಷ ಎಂದು ಹರ್ಷ ವ್ಯಕ್ತಪಡಿಸಿದರು.

ನಾಡಿಗೆ ಒಳಿತಾಗಲೆಂದು ಪ್ರಾರ್ಥನೆ: ಮಳೆ ಕೊರತೆಯಿಂದ ಬೆಳೆ ಹಾನಿಯಾಗುತ್ತಿದೆ. ರಾಜ್ಯದಲ್ಲಿ ರೈತರಿಗೆ ತೊಂದರೆಯಾಗದಂತೆ ಹಾಗೂ ಸಾರ್ವಜನಿಕರ ಕುಡಿಯುವ ನೀರಿಗೆ ಕೊರತೆ ಉಂಟಾಗಬಾರದು ಎಂಬುದೂ ಸೇರಿದಂತೆ ಎಲ್ಲಾ ಸಮಸ್ಯೆಗಳು ನಿವಾರಣೆಯಾಗಲಿ, ನಾಡಿನ ಜನತೆಗೆ ಒಳ್ಳೆಯದಾಗಲೆಂಬ ಪ್ರಾರ್ಥನೆಯೊಂದಿಗೆ ದೀಪೋತ್ಸವ ಉದ್ಘಾಟಿಸಲಾಗಿದೆ ಎಂದು ಟಿ.ಎಸ್.ಶ್ರೀವತ್ಸ ತಿಳಿಸಿದರು.

ದೇವಸ್ಥಾನದ ಸಂಸ್ಥಾಪಕರೂ ಆದ ಬಿಜೆಪಿ ಮುಖಂಡ ಹೆಚ್.ಜಿ.ಗಿರಿಧರ ಮಾತನಾಡಿ, 2012ರಲ್ಲಿ ನಮ್ಮ ದೇವಸ್ಥಾನ ಪ್ರತಿಷ್ಠಾಪನೆ ಮಾಡಲಾಯಿತು. ಅಂದಿನಿಂದ ಕಾರ್ತಿಕ ಮಾಸದ ವಿಷ್ಣು ದೀಪೋತ್ಸವದ ದಿನದಂದು ನಿರಂತರವಾಗಿ ಲಕ್ಷ ದೀಪೋತ್ಸವ ಆಚರಿಸುತ್ತಿದ್ದೇವೆ. ದೇವಾಲಯದ ಎದುರು ದಾರಿಯುದ್ದಕ್ಕೂ ದೀಪಗಳು ಬೆಳಗುವುದನ್ನು ನೋಡುವುದೇ ಒಂದು ಹಬ್ಬ. ಕಾರ್ತಿಕ ಹುಣ್ಣಿಮೆ, ವಿಷ್ಣು ದೀಪೋತ್ಸವ ಮತ್ತು ಕಾರ್ತಿಕ ಸೋಮವಾರ ಮೂರು ಒಟ್ಟಾಗಿ ಬಂದಿರುವುದು ವಿಶೇಷ ಎಂದು ಸಂತಸ ವ್ಯಕ್ತಪಡಿಸಿದರು.

ಮೋದಿಯವರು ಮತ್ತೆ ಪ್ರಧಾನಿ: ನಮ್ಮ ದೇವಸ್ಥಾನದಲ್ಲಿ ಈ ದಿನದಂದು ಏನಾದರೂ ಈಡೇರಿಸುವಂತೆ ತಾಯಿ ಲಕ್ಷ್ಮೀಯನ್ನು ಪ್ರಾರ್ಥಿಸುವ ವಾಡಿಕೆ ಇದೆ. ಅದರಂತೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪೂರ್ಣ ಬಹುಮತದೊಂದಿಗೆ ಮತ್ತೆ ನರೇಂದ್ರ ಮೋದಿಯವರೇ ಪ್ರಧಾನಿಯಾಗಬೇಕೆಂದು ಕೋರಿಕೆ ಮುಂದಿಟ್ಟ ಕೂಡಲೇ ತಾಯಿ ಲಕ್ಷ್ಮೀ (ಉತ್ಸವ ಮೂರ್ತಿ) ಬಲಗಡೆಯಲ್ಲಿ ಪ್ರದಕ್ಷಿಣೆ ಹಾಕಿದಳು. ಆ ಮೂಲಕ ನಮ್ಮ ಬೇಡಿಕೆ ಈಡೇರಿಸುವ ಆಶೀರ್ವಾದ ಮಾಡಿದಳು. ಇಲ್ಲಿ ಲಕ್ಷ ದೀಪೋತ್ಸವದಲ್ಲಿ ಸಾಲು ಸಾಲು ದೀಪಗಳು ಬೆಳಗುತ್ತಿರುವಂತೆ ಮುಂದೆಯೂ ನರೇಂದ್ರ ಮೋದಿಯವರ ಆಡಳಿತದಲ್ಲಿ ದೇಶ ಪ್ರಜ್ವಲಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದು ಹೆಚ್.ಜಿ.ಗಿರಿಧರ ತಿಳಿಸಿದರು.

ಇದಕ್ಕೂ ಮುನ್ನ ಬೆಳಗ್ಗೆ ದೇವಸ್ಥಾನದಲ್ಲಿ ದೇವರಿಗೆ ವಿಶೇಷ ಅಲಂಕಾರದೊಂದಿಗೆ ಸತ್ಯನಾರಾಯಣ ಸ್ವಾಮಿ ಪೂಜೆ ನೆರವೇರಿಸಲಾಯಿತು. ನಂತರ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ಬಳಿಕ ಭಜನಾ ಕಾರ್ಯಕ್ರಮ ಜರುಗಿತು. ವಿವಿಧ ಬಡಾವಣೆಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಎಂ.ಎ.ಮೋಹನ್, ಉದ್ಯಮಿ ಎಂ.ಗೋಪಿನಾಥ್ ಶೆಣೈ ಅವರ ಪತ್ನಿ ಸಾವಿತ್ರಿ ಗೋಪಿನಾಥ್ ಶೆಣೈ ಮತ್ತಿತರರು ಪಾಲ್ಗೊಂಡಿದ್ದರು.

ಕುಶಾಲನಗರದಲ್ಲಿ ನಮ್ಮ ಕ್ಲಿನಿಕ್ ಉದ್ಘಾಟನೆ



ಕುಶಾಲನಗರ, ನ.27– ನಮ್ಮ ಕ್ಲಿನಿಕ್ ಸೌಲಭ್ಯವನ್ನು ಸಾರ್ವಜನಿಕರು ಸದುಪಯೋಪಡಿಸಿಕೊಳ್ಳುವಂತೆ ಶಾಸಕ ಡಾ.ಮಂಥರ್ ಗೌಡ ಕರೆ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಬಿಎಂ ರಸ್ತೆಯಲ್ಲಿ ಆರಂಭಿಸಿರುವ ನಮ್ಮ ಕ್ಲಿನಿಕ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಕ್ಲಿನಿಕ್ ಆರಂಭಿಸಿರುವ ಕಾರಣ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒತ್ತಡ ನಿವಾರಣೆಯಾಗಲಿದೆ. ಇಲ್ಲಿ ಕೂಡ ನುರಿತ ವೈದ್ಯ, ತಾಂತ್ರಿಕ ಸಿಬ್ಬಂದಿಗಳು ಲಭ್ಯವಿದ್ದು ಡೇ ಕ್ಲಿನಿಕ್ ಮಾದರಿಯ ಸೌಲಭ್ಯವನ್ನು ಸಾರ್ವಜನಿಕರು ಬೆಳಗ್ಗೆ 9.30 ರಿಂದ ಸಂಜೆ 4.30 ರ ತನಕ ಪಡೆದುಕೊಳ್ಳುವ ಅವಕಾಶವಿದೆ ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸತೀಶ್, ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿದರು.

ಈ ಸಂದರ್ಭ ಕುಶಾಲನಗರ ಪುರಸಭೆ ಉಪಾಧ್ಯಕ್ಷೆ ಸುರಯ್ಯಭಾನು, ಸದಸ್ಯರಾದ ಎಂ.ಕೆ.ದಿನೇಶ್, ಎಂ.ಬಿ.ಸುರೇಶ್, ಶೇಖ್ ಖಲೀಮುಲ್ಲಾ, ಜಯಲಕ್ಷ್ಮಿ, ಪುಟ್ಟಲಕ್ಷ್ಮಿ, ಕುಡಾ ಮಾಜಿ ಅಧ್ಯಕ್ಷ ಮಂಜುನಾಥ್ ಗುಂಡುರಾವ್, ಜಿಪಂ ಮಾಜಿ ಸದಸ್ಯೆ ಸುನಿತಾ ಸೇರಿದಂತೆ ಕಾಂಗ್ರೆಸ್ ಮುಖಂಡರಾದ ಶಿವಶಂಕರ್, ಕಿರಣ್, ಜೋಸೆಫ್ ವಿಕ್ಟರ್ ಸೋನ್ಸ್, ನಟೇಶ್‌ಗೌಡ, ತಾಲೂಕು ಆರೋಗ್ಯಾಧಿಕಾರಿ ಡಾ.ಇಂದೂಧರ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಚ್.ಕೆ. ಶಾಂತಿ, ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಮತ್ತಿತರರು ಇದ್ದರು.

ಕೊಡಗಲ್ಲಿ ಶ್ರದ್ಧಾಭಕ್ತಿಯ ಪುತ್ತರಿ ಆಚರಣೆ





ಮಡಿಕೇರಿ, ನ.27– ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಒಂದಾದ ಧಾನ್ಯಲಕ್ಷ್ಮಿ ಸದಾಕಾಲ ಮನೆ ತುಂಬಿರಲಿ ಎಂಬ ಆಶಯದೊಂದಿಗೆ ಜಿಲ್ಲೆಯಾದ್ಯಂತ ಪುತ್ತರಿ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಮೊದಲಿಗೆ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ರಾತ್ರಿ 7.20ಕ್ಕೆ ನೆರೆ ಕಟ್ಟಿ, 8.20ಕ್ಕೆ ಕದಿರು ತೆಗೆದು ದೇವಾಲಯಕ್ಕೆ ಕೊಂಡೊಯ್ದು ಧಾನ್ಯ ಲಕ್ಷ್ಮಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ರಾತ್ರಿ 9.20ಕ್ಕೆ ಪ್ರಸಾದ ಸ್ವೀಕಾರ ಕಾರ್ಯ ನಡೆಯಿತು. ಆ ಮೂಲಕ ಜಿಲ್ಲೆಯಲ್ಲಿ ಶ್ರೀ ಪಾಡಿ ಇಗ್ಗುತ್ತಪ್ಪನ ಸನ್ನಿಧಿಯಲ್ಲಿ ಮೊದಲು ಪುತ್ತರಿ ಹಬ್ಬವನ್ನು ಆಚರಿಸಲಾಯಿತು. ತದನಂತರ ದೇವಾಲಯದ ಮುಹೂರ್ತ ನಿಗದಿಯಂತೆ ಜಿಲ್ಲೆಯ ವಿವಿಧೆಡೆ ಹಬ್ಬಾಚರಣೆ ನಡೆಸಲಾಯಿತು.

ನಗರದ ಓಂಕಾರೇಶ್ವರ ದೇವಾಲಯ, ಕೊಡವ ಸಮಾಜ, ಗೌಡ ಸಮಾಜಗಳಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಧಾನ್ಯ ಲಕ್ಷ್ಮಿಯನ್ನು ಬರ ಮಾಡಿಕೊಳ್ಳಲಾಯಿತು. ಓಂಕಾರೇಶ್ವರ ದೇವಾಲಯದಲ್ಲಿ 7.45ಕ್ಕೆ ನೆರೆಕಟ್ಟಿ ದೇವಾಲಯದ ಗದ್ದೆಯಲ್ಲಿ ಭೂಮಿ ತಾಯಿ ಮತ್ತು ಧಾನ್ಯ ಲಕ್ಷ್ಮಿಗೆ ಅರ್ಚಕ ವೃಂದ ವಿಶೇಷ ಪೂಜೆ ಸಲ್ಲಿಸಿದರು. ತದನಂತರ 8.45 ಗಂಟೆಗೆ ಕದಿರು ತೆಗೆದು ದೇವಾಲಯಕ್ಕೆ ಕೊಂಡೊಯ್ದು ವಿಶೇಷ ಪೂಜೆ ಸಲ್ಲಿಸಲಾಯಿತು.

ಬಳಿಕ ದುಡಿ ಕೊಟ್‌ಪಾಟ್‌ನೊಂದಿಗೆ ದೇವಾಲಯದಿಂದ ಕೊಡವ ಸಮಾಜಕ್ಕೆ ಕದಿರು ಕೊಂಡೊಯ್ಯಲಾಯಿತು. ನಂತರ ಸಮಾಜದಲ್ಲಿ ತೂಕ್ ಬೊಳ್‌ಚ(ತೂಗು ದೀಪ) ಬೆಳಗಿ ಸಾಂಪ್ರದಾಯಿಕ ಪೂಜೆ ನೆರವೇರಿಸಲಾಯಿತು. ತದನಂತರ ದೀಪಕ್ಕೆ ಕದಿರುಕಟ್ಟಿ ಇಗ್ಗುತ್ತಪ್ಪ, ಮತ್ತು ಗುರು ಕಾರೋಣರನ್ನು ನೆನೆದು ಮಾತೆ ಕಾವೇರಿಗೆ ನಮಿಸಿ ದೀಪಕ್ಕೆ ಅಕ್ಕಿ ಹಾಕಿ ಧಾನ್ಯ ಸಂಪತ್ತು ವೃದ್ಧಿಸಲಿ ಎಂದು ನೆರೆದಿದ್ದವರು ಪ್ರಾರ್ಥಿಸಿದರು.

ಗೌಡ ಸಮಾಜದ ಬಳಿಯ ಗದ್ದೆಯಲ್ಲಿ ಕದಿರು ತೆಗೆದು ನೆಲ್ಲಕ್ಕಿ ನಡುಬಾಡೆಗೆ ಕೊಂಡೊಯ್ದು ಕಾವೇರಿ ಮಾತೆ, ಇಗ್ಗುತ್ತಪ್ಪ ಹಾಗೂ ಕುಲದೇವರನ್ನು ನೆನೆದು ದೀಪಕ್ಕೆ ಅಕ್ಕಿ ಹಾಕುವ ಮೂಲಕ ಪುತ್ತರಿ ಹಬ್ಬ ಆಚರಿಸಲಾಯಿತು. ಕದಿರು ತೆಗೆಯುವ ಸಂದರ್ಭ ಕೊಡಗಿನ ಪದ್ಧತಿ, ಪರಂಪರೆ ಮತ್ತು ಸಂಪ್ರದಾಯದಂತೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಹಬ್ಬದ ಶುಭ ಸಂಕೇತವನ್ನು ಸೂಚಿಸಲಾಯಿತು. 'ಪೊಲಿ ಪೊಲಿಯೇ ಬಾ' ಎಂದು ಧಾನ್ಯಲಕ್ಷ್ಮಿಯನ್ನು ಬೇಡಲಾಯಿತು. ಸಮಾಜಗಳು ಮತ್ತು ದೇವಾಲಯದಲ್ಲಿ ನೆರೆದಿದ್ದವರಿಗೆ ಹಬ್ಬದ ಸಾಂಪ್ರದಾಯಿಕ ತಿನಿಸು ತಂಬಿಟ್ಟನ್ನು ಪ್ರಸಾದ ರೂಪದಲ್ಲಿ ವಿತರಿಸಲಾಯಿತು.

ಈ ಸಂದರ್ಭ ಕೊಡವ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಕೊಡವ ಮಕ್ಕಡ ಕೂಟ, ಕೊಡವ ಪೊಮ್ಮಕ್ಕಡ ಕೂಟ, ವಿವಿಧ ಕೊಡವ ಕೇರಿಗಳ ಅಧ್ಯಕ್ಷರು, ಗೌಡ ಸಮಾಜ, ಗೌಡ ವಿದ್ಯಾಭಿವೃದ್ಧಿ ಸಂಘ, ಗೌಡ ಸಮಾಜಗಳ ಒಕ್ಕೂಟ, ಗೌಡ ಯುವ ವೇದಿಕೆ ಪದಾಧಿಕಾರಿಗಳು, ಶ್ರೀ ಓಂಕಾರೇಶ್ವರ ದೇವಾಲಯ ಸಮಿತಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

ಕದಿರು ಹಂಚಿಕೆ: ಮಡಿಕೇರಿ ನಗರ ವ್ಯಾಪ್ತಿಯೊಳಗೆ ಭತ್ತದ ಗದ್ದೆಗಳು ಇಲ್ಲದ ಹಿನ್ನೆಲೆಯಲ್ಲಿ ನಗರ ನಿವಾಸಿಗಳು ಶ್ರೀ ಓಂಕಾರೇಶ್ವರ ದೇವಾಲಯ, ಕೊಡವ ಮತ್ತು ಗೌಡ ಸಮಾಜಗಳಿಗೆ ತೆರಳಿ ನೆರೆ(5ಎಲೆಗಳು) ಮತ್ತು ಕದಿರನ್ನು(ಭತ್ತದ ಪೈರು) ಕೊಂಡೊಯ್ದು ಧಾನ್ಯಲಕ್ಷ್ಮಿಯನ್ನು ಮನೆ ತುಂಬಿಕೊಂಡರು. ಪಾಯಸಕ್ಕೆ ಕದಿರಿನಲ್ಲಿದ್ದ ಅಕ್ಕಿಯನ್ನು ಹಾಕಿ ಹೊಸ ಅಕ್ಕಿಯ ಪಾಯಸ, ತಂಬಿಟ್ಟು, ಹುತ್ತರಿ ಗೆಣಸಿನ ವಿವಿಧ ಖಾದ್ಯಗಳನ್ನು ಸವಿದು ಹಬ್ಬವನ್ನು ಸಂಭ್ರಮಿಸಿದರು.

ಓಂಕಾರೇಶ್ವರ ದೇವಾಲಯದಲ್ಲಿ ಅಯೋಧ್ಯೆ ಮಂತ್ರಾಕ್ಷತೆ



ಮಡಿಕೇರಿ, ನ.27– ಅಯೋಧ್ಯೆ ನಗರಿಯ ಭವ್ಯ ಶ್ರೀರಾಮ ಮಂದಿರದಲ್ಲಿ ಮುಂದಿನ ವರ್ಷ ಜನವರಿ 22ರಂದು ಶ್ರೀರಾಮನ ಪ್ರತಿಷ್ಠಾಪನೆಯಾಗಲಿದೆ. ಈ ಹಿನ್ನೆಲೆ ಪ್ರತಿ ಮನೆಗಳಿಗೆ ತಲುಪಿಸಲು ಅಯೋಧ್ಯೆಯಿಂದ ಕರ್ನಾಟಕಕ್ಕೆ ಮಂತ್ರಾಕ್ಷತೆಯನ್ನು ತರಲಾಗಿದೆ. ಇದೀಗ ಮಂತ್ರಾಕ್ಷತೆ ಕೊಡಗನ್ನು ಕೂಡ ತಲುಪಿದ್ದು, ಮಡಿಕೇರಿ ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಇರಿಸಲಾಗಿದೆ.

ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಉಪಾಧ್ಯಕ್ಷ ಕೂತಿ ಪರಮೇಶ್ ಹಾಗೂ ಸಹ ಕಾರ್ಯದರ್ಶಿ ಸಂತೋಷ್ ಅವರುಗಳು ಬೆಂಗಳೂರಿನ ವಿಹೆಚ್‌ಪಿ ಕಚೇರಿಯಿಂದ ಮಂತ್ರಾಕ್ಷತೆ ತುಂಬಿದ ಬಿಂದಿಗೆಗಳನ್ನು ಪಡೆದು ಮಡಿಕೇರಿಗೆ ತಂದರು.

ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ರಾಜೇಶನಾಥ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಮಂತ್ರಾಕ್ಷತೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಾಲಯದಲ್ಲಿಡಲಾಗಿರುವ ಮಂತ್ರಾಕ್ಷತೆಯನ್ನು ನ.29ರಂದು ಓಂಕಾರ ಸದನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಘ ಪರಿವಾರದ ಪ್ರಮುಖರಿಗೆ ಹಾಗೂ ಕಾರ್ಯಕರ್ತರಿಗೆ ನೀಡಲಾಗುವುದು. ಇವರು ಕೊಡಗು ಜಿಲ್ಲೆಯ ಪ್ರತಿ ಮನೆಮನೆಗಳಿಗೆ ರಾಮನ ಭಾವಚಿತ್ರ ಮತ್ತು ಮಂತ್ರಾಕ್ಷತೆಯನ್ನು ಹಂಚಲಿದ್ದಾರೆ ಎಂದು ಸುರೇಶ್ ಮುತ್ತಪ್ಪ ತಿಳಿಸಿದರು.

ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯ ದಿನವಾದ ಜ.22ರಂದು ಸೂರ್ಯಾಸ್ತವಾದ ಮೇಲೆ ಪ್ರತಿ ಮನೆಯಲ್ಲಿ ದೀಪ ಬೆಳಗಿ ಮಂತ್ರಾಕ್ಷತೆಗೆ ವಿಶೇಷ ಪೂಜೆ ಸಲ್ಲಿಸಿ ದೀಪೋತ್ಸವ ಆಚರಿಸಲು ವಿಶ್ವ ಹಿಂದೂ ಪರಿಷತ್ ಕರೆ ನೀಡುತ್ತದೆ ಎಂದು ಅವರು ಹೇಳಿದರು. ಪ್ರತಿ ಮನೆಗೂ ಆಯೋಧ್ಯೆಯ ಮಂತ್ರಾಕ್ಷತೆ ತಲುಪುವಂತೆ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ನಿರ್ಧಾರ ಮಾಡಿದೆ.

ಇಂದಿನಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಹೈಫ್ಲೈಯರ್ಸ್ ಕಪ್–2023

ಪೊನ್ನಂಪೇಟೆ, ನ.27– ಬಿಟ್ಟಂಗಾಲ ಸಮೀಪದ ವಿ. ಬಾಡಗದ ಹೈಫ್ಲೈಯರ್ಸ್ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿರುವ ವಿರಾಜಪೇಟೆ ತಾಲೂಕಿನ 3 ನಾಡುಗಳ ವ್ಯಾಪ್ತಿಯ ಕೊಡವ ಕೌಟುಂಬಿಕ 2ನೇ ವರ್ಷದ ಹಾಕಿ ಪಂದ್ಯಾವಳಿಯು ಮಂಗಳವಾರದಿಂದ ಆರಂಭಗೊಳ್ಳಲಿದೆ.

ವಿ. ಬಾಡಗದ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಒಟ್ಟು 5 ದಿನಗಳ ಕಾಲ ನಡೆಯಲಿರುವ ಈ ಹಾಕಿ ಪಂದ್ಯಾವಳಿಗಾಗಿ ಈಗಾಗಲೇ ಅಗತ್ಯ ಸಿದ್ಧತೆಗಳು ಪೂರ್ಣಗೊಂಡಿರುವುದಾಗಿ ವಿ. ಬಾಡಗ ಹೈಫ್ಲೈಯರ್ಸ್ ಸಂಸ್ಥೆಯ ಅಧ್ಯಕ್ಷ ಅಮ್ಮಣಿಚಂಡ ರಂಜು ಪೂಣಚ್ಚ ತಿಳಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯಲ್ಲಿ ಐನ್ ಮನೆ ಹೊಂದಿರುವ ಕೊಡವ ಕುಟುಂಬ ತಂಡಗಳಿಗಾಗಿ ಆಯೋಜಿಸಲಾಗಿರುವ ಈ ಹಾಕಿ ಪಂದ್ಯಾವಳಿಯಲ್ಲಿ ವಿವಿಧ ಅತಿಥಿ ಆಟಗಾರರನ್ನು ಒಳಗೊಂಡ 19 ಕುಟುಂಬ ತಂಡಗಳು ಭಾಗವಹಿಸುತ್ತಿವೆ.

ಮಸಾಲೆ ಪದಾರ್ಥಗಳ ಮೌಲ್ಯವರ್ಧನ ಘಟಕ ಉದ್ಘಾಟನೆ



ವಿರಾಜಪೇಟೆ, ನ.27– ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಸಂಘ ಸಂಸ್ಥೆಗಳ ಸಹಕಾರದಿಂದ ದೇಶದ ಪ್ರಗತಿಗೆ ಸ್ವ-ಉದ್ಯೋಗದಲ್ಲಿಯೂ ಮುಂದುವರಿದು ಉತ್ತಮ ಬದುಕು ರೂಪಿಸಿಕೊಳ್ಳುವಂತಾಗಬೇಕು ಎಂದು ಮೈಸೂರು ಓಡಿಪಿ ಸಂಸ್ಥೆ ನಿರ್ದೇಶಕ ಫಾದರ್ ಅಲೆಕ್ಸ್ ಪ್ರಶಾಂತ್ ಸಿಕ್ವೆರ ಹೇಳಿದರು.

ಇಲ್ಲಿಗೆ ಸಮೀಪದ ಆರ್ಜಿ ಗ್ರಾಪಂ ವ್ಯಾಪ್ತಿಯ ಪೆರುಂಬಾಡಿಯಲ್ಲಿ ಆಯೋಜಿಸಿದ್ದ ನೇಸರ ರೈತ ಉತ್ಪಾದಕರ ಸಮಿತಿ ಹಾತೂರು ಕ್ಲಸ್ಟರ್ ಹಾಗೂ ನವ ಚೈತನ್ಯ ಉತ್ಪಾದಕರ ಸಂಘ ಪೆರುಂಬಾಡಿ ವತಿಯಿಂದ ಅಕ್ಕಿ ಹಾಗೂ ಮಸಾಲೆ ಪದಾರ್ಥಗಳ ಮೌಲ್ಯವರ್ಧನ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಸಂಘಗಳ ಮೂಲಕ ನಡೆಸುವ ಸ್ವ-ಉದ್ಯೋಗದಲ್ಲಿ ಜನರಿಗೆ ಉತ್ತಮವಾದ ಆರೋಗ್ಯ ಭರಿತ ವಸ್ತುಗಳನ್ನು ನೀಡುವುದರೊಂದಿಗೆ ಒಗ್ಗಟ್ಟಿನಿಂದ ಅಭಿವೃದ್ಧಿಯತ್ತ ನಾವೆಲ್ಲರೂ ಭಾರತಾಂಬೆಯ ಮಕ್ಕಳು ಒಂದುಗೂಡಿ ಬದುಕುವಂತಾಗಬೇಕು ಎಂದರು.

ಓಡಿಪಿ ಸಂಸ್ಥೆ ಎಫ್‌ಪಿಓ ಕೊಡಗು ಸಂಯೋಜಕ ಜಾನ್ ರಾಡ್ರಿಗಸ್, ಸಂಸ್ಥೆಯ ಮಂಡ್ಯ ಜಿಲ್ಲಾ ಸಂಯೋಜಕ ರಮೇಶ್ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ವಹಿಸಿದ್ದರು. ಆರ್ಜಿ ಗ್ರಾಪಂ ಅಧ್ಯಕ್ಷ ಫಾತಿಮಾ, ನೇಸರ ರೈತ ಉತ್ಪಾದ ಕರ ಘಟಕದ ಹಾತೂರು ಕ್ಲಸ್ಟರ್ ಅಧ್ಯಕ್ಷ ಚಿಮ್ಮಣಮಾಡ ಧರಣಿ, ಓಡಿಪಿ ಜಿಲ್ಲಾ ವಲಯ ಸಂಯೋಜಕ ಜಾಯ್ಸ್ ಮೆನೆಜೇಸ್, ಪೊನ್ನಂಪೇಟೆ ವಲಯದ ಅನೀಶ್, ನವ ಚೈತನ್ಯ ಸಂಘದ ಅಧ್ಯಕ್ಷೆ ವಿಪಿನಾ, ಅನಿಲ್ ಕುಮಾರ್ ಸೇರಿದಂತೆ ಇನ್ನಿತರಿದ್ದರು.

ತರಬೇತಿಗೆ ಅರ್ಜಿ ಆಹ್ವಾನ

ಮಡಿಕೇರಿ, ನ.27– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಇನ್ ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ (ಕೆಐಸಿಎಂ) ಮಡಿಕೇರಿ ಇಲ್ಲಿ "ಡಿಪ್ಲೊಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" (ಡಿಸಿಎಂ) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಪಡೆದಿರಬೇಕು. ತರಬೇತಿ ಅವಧಿ 6 ತಿಂಗಳು. ಪರಿಶಿಷ್ಟ ಜಾತಿ ಹಾಗೂ ಪಂಗಡದ ಅಭ್ಯರ್ಥಿಗಳಿಗೆ ಮಾಹೆ ಯಾನ 600 ರೂ. ಹಾಗೂ ಇತರ ಎಲ್ಲಾ ಅಭ್ಯರ್ಥಿಗಳಿಗೆ 500 ರೂ.ರಂತೆ ಶಿಷ್ಯವೇತನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 8792628437, 9845318364, ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭ್ರಷ್ಟ ಸರ್ಕಾರಿ ನೌಕರರು ಚಾ.ನಗರ ಜಿಲ್ಲೆಗೆ ಬೇಡ

- ಈ ಬಗ್ಗೆ ಜಿಲ್ಲಾಧಿಕಾರಿ ಗಮನಹರಿಸಿ
- ಶಾಸಕ ಎ.ಆರ್.ಕೃಷ್ಣಮೂರ್ತಿ ಸೂಚನೆ



ಅಧಿಕಾರಿಗಳ ವಿರುದ್ಧ ಶಾಸಕರ ಗರಂ

ಸಾರ್ವಜನಿಕರು ನೀಡಿದ ದೂರುಗಳ ಪ್ರತಿ, ಅವರು ಸಲ್ಲಿಸಿದ ದಾಖಲೆಗಳ ಸಂರಕ್ಷಣೆ ತಾಲೂಕು ಕಚೇರಿಯಲ್ಲಿ ಇಲ್ಲ ಎಂದರೆ ಏನ್ನು ಅರ್ಥ ಎಂದು ಹನೂರು ಶಾಸಕ ಮಂಜುನಾಥ್ ಜನಸಂಪರ್ಕ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಗರಂ ಆದರು.

ಸಭೆಯಲ್ಲಿ ಪಾಳ್ಯ ಗ್ರಾಮದ ರಂಗಸ್ವಾಮಿ ಮಾತನಾಡಿ, ಸರ್ಕಾರಿ ಜಮೀನು ಅತಿಕ್ರಮ ಮತ್ತು ಆಶ್ರಯ ನಿವೇಶನವನ್ನು ನಿಯಮ ಬಾಹಿರವಾಗಿ ಅಕ್ರಮ ಖಾತೆ ಮಾಡಿಕೊಡಲಾಗಿದೆ ಎಂಬ ದೂರು ಸಲ್ಲಿಸಿದರು. ಶಿವಕುಮಾರ್ ಮಾತನಾಡಿ, ಖಾತೆ ಮಾಡಿಕೊಡಲು ಕಳೆದ 2 ವರ್ಷದಿಂದಲೂ ತಹಸೀಲ್ದಾರ್ ಕಚೇರಿಗೆ ಅಲೆಸಲಾಗುತ್ತಿದೆ. ಸಂಬಂಧಪಟ್ಟ ದಾಖಲಾತಿಯನ್ನು ನೀಡಿದರೂ ತಹಶೀಲ್ದಾರ್ ಸ್ಪಂದಿಸುತ್ತಿಲ್ಲ ಎಂದು ದೂರಿದರು. ತಹಸೀಲ್ದಾರ್ ಮಂಜುಳಾ ಮತ್ತು ತಾಪಂ ಇಓ ಶ್ರೀನಿವಾಸ್ ಅವರ ಕಾರ್ಯವೈಖರಿ ಸರಿ ಇಲ್ಲ ಎಂದು ಸಾಕಷ್ಟು ನಾಗರಿಕರು ಆರೋಪಿಸಿದರು. ಇದರಿಂದ ಶಾಸಕ ಮಂಜುನಾಥ್ ಗರಂ ಆದರು.

ಕೊಳ್ಳೇಗಾಲ, ನ.27–ಭ್ರಷ್ಟಾಚಾರ ಪ್ರಕರಣ ಆರೋಪದ ಇಬ್ಬರು ಸರ್ಕಾರಿ ನೌಕರರು ಮತ್ತೆ ನಮ್ಮ ಜಿಲ್ಲೆಯಲ್ಲೇ ಕೆಲಸ ನಿರ್ವಹಿಸುತ್ತಿದ್ದಾರೆ. ಇಂತಹ ಪ್ರಕ್ರಿಯೆ ಸರಿಯಲ್ಲ, ಈ ಬಗ್ಗೆ ಜಿಲ್ಲಾಧಿಕಾರಿ ಗಮನಹರಿಸಿ ಅವರು ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೂ ಮುಂದುವರೆಯಬಾರದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಪಟ್ಟಣದಲ್ಲಿ ಸೋಮವಾರ ನಡೆದ ಜನಸಂಪರ್ಕ ಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, ಭ್ರಷ್ಟಾಚಾರ ಆರೋಪದಡಿಯ ಇಬ್ಬರು ನೌಕರರ ಪೈಕಿ, ಒಬ್ಬರು ಯಳಂದೂರು ಪಟ್ಟಣ ಪಂಚಾಯಿತಿ ಮತ್ತು ಮತ್ತೊಬ್ಬರು ಕೊಳ್ಳೇಗಾಲ ನಗರಸಭೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಪ್ರಕರಣ ಯಾವುದು ಎಂದು ನನಗೆ ಮಾಹಿತಿ ನೀಡಿ, ಅಂತಹವರು ನಮ್ಮ ಜಿಲ್ಲೆಗೆ ಬೇಡ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ತಿಳಿಸಿದರು.

ತಾಪಂ ಇಓ ಕಚೇರಿಯಲ್ಲಿ ಕೂರಲ್ಲ, ಕೆಲ ಸಿಬ್ಬಂದಿ ಸಾರ್ವಜನಿಕರಿಗೆ ಸ್ಪಂದಿಸುವುದಿಲ್ಲ ಎಂದರೆ ಏನು ಅರ್ಥ? ಇದೆಲ್ಲಾ ಒಳ್ಳೆಯ ಬೆಳವಣಿಗೆಯಲ್ಲ. ಜನರ ಅಲೆದಾಟ ತಪ್ಪಿಸಲು ಇಂತಹ ಸಭೆ ನಡೆಸಲಾಗುತ್ತಿದೆ. ಇಲ್ಲಿ ಬಂದ ನಾಗರಿಕರ ದೂರಿಗೆ ನ್ಯಾಯ ಸಿಗುವ ನಿಟ್ಟಿನಲ್ಲಿ ಅಧಿಕಾರಿಗಳು ಸ್ಪಂದಿಸಬೇಕು. ಅಧಿಕಾರಿಗಳು ಕಚೇರಿಯಿಂದ ಎಲ್ಲಾದರೂ ತೆರಳಬೇಕಾದರೆ, ತಮ್ಮ ಸಿಬ್ಬಂದಿಗೆ ತಿಳಿಸಬೇಕು. ಇಲ್ಲ ಟಿಪಿ ಡೈರಿಯಲ್ಲಿ ನಮೂದಿಸಿ ತೆರಳಬೇಕು. ಇದನ್ನು ಬಿಟ್ಟು ಮನಸೋಇಚ್ಛೆ ಕೆಲಸ ಮಾಡುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ನಿಮ್ಮ ದಿನನಿತ್ಯದ ಕಾರ್ಯವೈಖರಿ ಬದಲಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ, ಸಾರ್ವಜನಿಕರು ಕಚೇರಿಗೆ ಆಗಮಿಸಿ ಸಿಬ್ಬಂದಿಗೆ ನೀಡುವ ದೂರಿಗೆ ಒಂದು ಸಂಖ್ಯೆ ನೀಡಿ, ಅದನ್ನು ಸ್ಕ್ಯಾನ್ ಮಾಡಿ ನನಗೊಂದು ಮತ್ತು ಸಂಬಂಧಪಟ್ಟ ಅಧಿಕಾರಿಗೊಂದು ಕಳುಹಿಸಬೇಕು. ಒಂದೇ ಕೆಲಸಕ್ಕೆ ಜನರು ಪದೇ ಪದೆ ಕಚೇರಿಗಳಿಗೆ ಬರುತ್ತಾರೆ ಎಂದರೆ ನಾವಿದ್ದು ಏನು ಪ್ರಯೋಜನ? ಮುಂದೆ ಈ ರೀತಿ ಆಗಬಾರದು ಎಂದು ಆಯಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಶುಕ್ರವಾರ ನಗರಸಭೆಗೆ ಭೇಟಿ ನೀಡುವೆ. ನಗರಸಭೆಯ ಬಗ್ಗೆ ಸಾಕಷ್ಟು ಚರ್ಚೆಗಳಿವೆ. ಹಾಗಾಗಿ ಅಲ್ಲಿಗೆ ಭೇಟಿ ನೀಡಿ, ಪರಿಶೀಲಿಸುತ್ತೇನೆ ಎಂದು ತಿಳಿಸಿದರು.

ಮಹಿಳೆಯರ ದೂರು: ಕೋವಿಡ್‌ನಿಂದ ನಮ್ಮ ಪತಿಯರನ್ನು ಕಳೆದುಕೊಂಡಿದ್ದು, ಕುಟುಂಬದವರಿಗೆ ಸರ್ಕಾರಿ ಕೆಲಸ ನೀಡುವ ಭರವಸೆ ಇನ್ನೂ ಈಡೇರಿಲ್ಲ ಎಂದು 7 ಮಹಿಳೆಯರು ಸಭೆಯಲ್ಲಿ ದೂರು ನೀಡಿದರು. ಎಆರ್‌ಎಲ್‌ಎಂ ವ್ಯವಸ್ಥಾಪಕರು ಮಹಿಳೆಯರ ಜೊತೆ ಅನುಚಿತವಾಗಿ ವರ್ತಿಸುತ್ತಾರೆ. ಅವರ ಮೇಲೆ ಅನೇಕ ದೂರುಗಳಿದ್ದರೂ ಕ್ರಮವಹಿಸಿಲ್ಲ ಎಂದು ಕೆಲ ಮಹಿಳೆಯರು ದೂರು ಸಲ್ಲಿಸಿದರು. ಕೃಷಿ ಅಧಿಕಾರಿ ನಾಗೇಂದ್ರ, ಎಂಜಿನಿಯರ್ ಮಹೇಶ್ ಸೇರಿದಂತೆ ಕೆಲ ಅಧಿಕಾರಿಗಳ ವಿರುದ್ಧ ಸಾರ್ವಜನಿಕರಾದ ಚಂದ್ರಶೇಖರ, ಕುಂತೂರು ನಂಜುಂಡಸ್ವಾಮಿ ದೂರು ನೀಡಿದರು.

ನಗರಸಭೆ ಸದಸ್ಯ ಜಯರಾಜು ಮಾತನಾಡಿ, ಪಟ್ಟಣದ 24ನೇ ವಾರ್ಡ್‌ನಲ್ಲಿ ಸಾಕಷ್ಟು ಸಮಸ್ಯೆ ಇದ್ದು, ನನ್ನ ಸಮ್ಮುಖದಲ್ಲಿ ಜನರ ಅಭಿಪ್ರಾಯದಂತೆ ಅಲ್ಲಿನ ಸಮಸ್ಯೆ ಪರಿಹಾರವಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಮುಂದಾಗಬೇಕು ಎಂದು ಮನವಿ ಮಾಡಿದರು. ತಟ್ಟೆಕೆರೆ ಅತಿಕ್ರಮವಾಗಿದ್ದು ತೆರವುಗೊಳಿಸಿ, ಕುಂತೂರು ಭಾಗದಲ್ಲಿ ಟಿಸಿ ದುರಸ್ತಿಗೆ ಮುಂದಾಗಬೇಕು. ಖಾತೆ ವಿಳಂಬ ವಾಗುತ್ತಿದೆ ಎಂಬಿತ್ಯಾದಿ ದೂರು ಸೇರಿದಂತೆ ಸುಮಾರು 140ಕ್ಕೂ ಹೆಚ್ಚು ದೂರುಗಳು ಸಭೆಯಲ್ಲಿ ದಾಖಲಾದವು.

ಹೆದ್ದಾರಿಯಲ್ಲಿ ಆಟಿಕೆ ರೈಲು ಹಿಡಿದು ಪ್ರತಿಭಟನೆ



ಚಾಮರಾಜನಗರ, ನ.27–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 83 ದಿನ ಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಯು ತ್ತಿದ್ದು, ಸೋಮವಾರ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಟಿಕೆ ರೈಲು ಹಿಡಿದು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರ್ನಾಟಕ ಸೇನಾ ಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಟಿಕೆ ರೈಲು ಹಿಡಿದು ಕೇಂದ್ರ ಮತ್ತು ಕರ್ನಾಟಕ, ತಮಿಳುನಾಡು ಸರ್ಕಾರ, ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದ್ದರೂ ಸರ್ಕಾರಗಳು, ಕಾವೇರಿ ನದಿ ನೀರು ನಿರ್ವಹಣ ಮಂಡಳಿ ಕಣ್ಮುಚ್ಚಿಕೊಂಡಿದ್ದು, ಕರ್ನಾಟಕ ಋಣ ತೀರಿಸುವಲ್ಲಿ ರಿಲ್ ಬಿಡುತ್ತಿವೆ ಎಂದು ದೂರಿದರು. ಕೇಂದ್ರ ಸರ್ಕಾರ ಕೂಡಲೇ ಕಾವೇರಿ ನದಿ ನೀರು ನಿರ್ವಹಣಾ ಸಮಿತಿ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣವೇ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕು. ತಮಿಳುನಾಡಿಗೆ ನೀರು ನಿಲ್ಲಿಸುವ ತನಕ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್ ಗೋಪಾಲ್, ವೀರಭದ್ರ, ರಾಜಪ್ಪ, ತಾಂಡವಮೂರ್ತಿ, ಪ್ರಕಾಶ್, ಮಂಜು ಭಾಗವಹಿಸಿದ್ದರು.

ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ ರಚನೆ



ಚಾಮರಾಜನಗರ, ನ.27– ಮಂಗಲ ಶಿವಕುಮಾರ್ ನೇತೃತ್ವದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ ರಚಿಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಹಿಂದುಳಿದ ವರ್ಗಗಳ ಮುಖಂಡರ ಸಭೆಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ ರಚಿಸಲಾಯಿತು. ಸಭೆಯ ನೇತೃತ್ವ ವಹಿಸಿದ್ದ ಮಂಗಲ ಶಿವಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿರುವ ಹಿಂದುಳಿದ ಸಮಾಜಗಳು ಶತಮಾನಗಳಿಂದಲೂ ಶೋಷಣೆಗೊಳಗಾಗುತ್ತಿವೆ. ಸಮಾಜದ ಎಲ್ಲಾ ರಂಗಗಳಲ್ಲೂ ನಿರ್ಲಕ್ಷ್ಯ ಮತ್ತು ಅಪಮಾನಗಳನ್ನು ಅನುಭವಿಸುತ್ತಲೇ ಬಂದಿದ್ದಾರೆ. ಹಿಂದುಳಿದ ಸಮಾಜಗಳು ಒಗ್ಗೂಡದೆ ಉದಾಸೀನ ಮನೋಭಾವ ಹೊಂದಿರುವ ಕಾರಣದಿಂದ ಅತಿ ಹೆಚ್ಚು ಸಂಖ್ಯೆಯಲ್ಲಿದ್ದರು ಒಂದು ಶಕ್ತಿಯಾಗಿ ಹೊರಹೊಮ್ಮಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಪರಿಸ್ಥಿತಿ ರಾಜ್ಯಾದ್ಯಂತ ಇರುವುದರಿಂದ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಆಯೋಗಗಳನ್ನು ರಚನೆ ಮಾಡಿದರೂ ಅದನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರಗಳು ಮುಂದಾಗುತ್ತಿಲ್ಲ ಎಂದು ದೂರಿದರು.

ಆಯೋಗಕ್ಕೆ ಪ್ರಾರಂಭದಿಂದಲ್ಲೂ ವಿರೋಧ ಮಾಡಿಕೊಂಡು ಬರಲಾಗಿದೆ. ಆಗಾಗಿ ಈಗ ರಚನೆಯಾಗಿರುವ ಕಾಂತರಾಜ್ ವರದಿ ಅಂಗೀಕಾರಕ್ಕೆ ಈಗಲು ವಿರೋಧ ಇರುವುದರಿಂದ ನಾವೆಲ್ಲರೂ ಒಗ್ಗೂಡಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಸರ್ಕಾರ ಕಾಂತರಾಜ್ ವರದಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಡಿಸೆಂಬರ್ ಮೊದಲ ವಾರದಲ್ಲಿ ನಡೆಯುವ ಚಳಗಾಲದ ಅಧಿವೇಶನದಲ್ಲಿ ಕಾಂತರಾಜ್ ವರದಿಯನ್ನು ಅಂಗೀಕಾರ ಮಾಡಬೇಕು ಎಂದು ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಲಿಸಲಾಗುವುದು ಎಂದರು.

ಸಭೆಯಲ್ಲಿ ಈಡಿಗ ಸಮುದಾಯ ನಟರಾಜೇಗೌಡ, ಕುಂಬಾರ ಸಮಾಜದ ಜಿಲ್ಲಾಧ್ಯಕ್ಷ ರಾಜೇಂದ್ರ, ರಾಮಶೆಟ್ಟಿ, ಮಹದೇವಸ್ವಾಮಿ, ಸವಿತಾ ಸಮಾಜದ ಚಿನ್ನಸ್ವಾಮಿ, ವೆಂಕಟೇಶ್, ಮಡಿವಾಳ ಸಮಾಜದ ದುಂಡು ಮಹದೇವ, ಗಾಣಿಗ ಸಮುದಾಯದ ಲಕ್ಷ್ಮಣ, ಬೆಳ್ಳಶೆಟ್ಟಿ, ಜಯರಾಮಶೆಟ್ಟಿ, ಬದನಗುಪ್ಪೆ ಬಸವಣ್ಣ, ಪ್ರಕಾಶಶೆಟ್ಟಿ, ಪಿ.ಮಹದೇವಸ್ವಾಮಿ, ಚೆನ್ನಿಪುರಮೋಳೆ ಮಹದೇವು ಇತರರಿದ್ದರು.

ಸಂವಿಧಾನ ರಕ್ಷಣೆ ಮತದಾರರಿಂದ ಸಾಧ್ಯ

ಜಿಲ್ಲಾ ಮಟ್ಟದ ಜಾಗೃತಿ ಸಮಾವೇಶದಲ್ಲಿ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿಕೆ



ಚಾಮರಾಜನಗರ, ನ.27–ಗುಡಿ, ಚರ್ಚ್, ಮಸೀದಿ, ಮಠಗಳಿಂದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ರಕ್ಷಣೆ ಸಾಧ್ಯವಿಲ್ಲ. ಇವುಗಳ ರಕ್ಷಣೆ ಮತದಾರರಿಂದ ಮಾತ್ರ ಸಾಧ್ಯ ಎಂದು ಮೈಸೂರಿನ ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಸಂವಿಧಾನ ಸಮರ್ಪಣಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಸಂವಿಧಾನ ರಕ್ಷಣೆಗಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ' ಜಿಲ್ಲಾ ಮಟ್ಟದ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಜನಸಂಖ್ಯೆ ಆಧಾರ ಮೇಲೆ ಮೀಸಲಾತಿ ಕೊಡಿ ಎಂದು ಹೇಳಿದ್ದಾರೆ ಹೊರತು ಕೊಡಬೇಡಿ ಎಂದು ಹೇಳಿಲ್ಲ. ಹಾಗಾಗಿ ನಾವು ಒಳ ಮೀಸಲಾತಿ ಪರವಾಗಿದ್ದೇವೆ. ಅಂಬೇಡ್ಕರ್ ಅವರು ಮತದಾನದ ಹಕ್ಕು ಕೊಟ್ಟಿರುವುದು ಸಂವಿಧಾನ ಕಾಪಾಡಿಕೊಳ್ಳುವುದಕ್ಕಾಗಿ. ಮತ ಸ್ವಂತ ಮಗಳಿದ್ದಂತೆ, ಮತವನ್ನು ಯಾರು ಮಾರಿಕೊಳ್ಳದೆ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಮತಚಲಾಯಿಸುವ ಮೂಲಕ ಸಂವಿಧಾನಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕು. ಆಗ ಮಾತ್ರ ಸಂವಿಧಾನ ರಕ್ಷಣೆ ಆಗುತ್ತದೆ ಎಂದರು.

ಯಾವ ಸರ್ಕಾರಗಳು ನಮ್ಮ ಸಮಸ್ಯೆ ಬಗೆಹರಿಸಲ್ಲ, ನಮ್ಮನ್ನು ಉದ್ಧಾರ ಮಾಡಲ್ಲ. ಅಂಬೇಡ್ಕರ್ ತಮ್ಮ ಇಡೀ ಕುಟುಂಬವನ್ನು ತ್ಯಾಗ ಮಾಡಿ ನಿಮಗೋಸ್ಕರ ದೇಶಕ್ಕೆ ಸಂವಿಧಾನ ಕೊಟ್ಟಿದ್ದಾರೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಸಂವಿಧಾನ ಕೊಟ್ಟಿದ್ದಾರೆ. ಆದರೆ, ನಮ್ಮ ಮೋದಿ ಸಾಹೇಬ್ರೂ ಸಬ್ಕಾ ಸಾಥ್, ಸಬ್ಕಾ ವಿಕಾಸ್ ಎಂದು ಅದ್ದೂರಿ ಭಾಷಣ ಮಾಡಿ ನೂತನ ಸಂಸತ್ ಭವನಕ್ಕೆ ರಾಷ್ಟ್ರಪತಿ ಅವರನ್ನೇ ಕರೆದಿಲ್ಲ. ಹಳೆಯ ಸಂಸತ್ ಭವನದ ಮುಂದಿರುವ ಅಂಬೇಡ್ಕರ್ ಪುತ್ಥಳಿ ಮೂಲೆಗುಂಪಾಗಿದೆ. ಹೊಸ ಸಂಸತ್ ಭವನವನ್ನು ತಾವರೆ ಹೂ ರೀತಿ ಕಟ್ಟಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಅಂಬೇಡ್ಕರ್ ಅವರು 7 ದಶಕಗಳ ಹಿಂದೆಯೇ ವಿಶ್ವಕ್ಕೆ ಮಾದರಿ ಸಂವಿಧಾನವನ್ನು ರೂಪಿಸಿದ್ದಾರೆ. ದೇಶ, ರಾಜ್ಯದಲ್ಲಿ ಆಡಳಿತ ನಡೆಸಿದ ಪಕ್ಷಗಳು ಸಂವಿಧಾನವನ್ನು ಸಭೆ, ಸಮಾರಂಭಗಳಿಗೆ ಸೀಮಿತಗೊಳಿಸಿದ್ದಾರೆ. ಸಂವಿಧಾನ, ಪ್ರಜಾಪ್ರಭುತ್ವವನ್ನು ನಾಶ ಮಾಡುವ ಹುನ್ನಾರ ನಡೆಯುತ್ತಿದೆ. ಮನುವಾದಿ, ಮನುಧರ್ಮಶಾಸ್ತ್ರದ ಸಂವಿಧಾನ ಸಿದ್ಧಪಡಿಸಿಕೊಂಡಿವೆ. ಇದರ ಬಗ್ಗೆ ನಾವು ಎಚ್ಚರಗೊಳ್ಳಬೇಕಿದೆ ಎಂದರು.

ಮೌಲಾನ ಮಹಮ್ಮದ್ ಇಸ್ಮಾಯಿಲ್ ರಶೀದ್, ಎಂಡಿಇಎಸ್ ಸುಳ್ವಾಡಿ ಧರ್ಮಕೇಂದ್ರದ ವ್ಯವಸ್ಥಾಪಕ ಟನ್ನಿ ಕುರಿಯನ್ ಫಾದರ್, ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ದಸಂಸ ಮೈಸೂರು ವಿಭಾಗೀಯ ಸಂಚಾಲಕ ಸಿದ್ದರಾಜು ದೊಡ್ಡಿಂದುವಾಡಿ ಮಾತನಾಡಿದರು. ಚನ್ನಲಿಂಗನಹಳ್ಳಿಯ ಮನೋರಕ್ಷಿತ ಬಂತೇಜಿ ಸಾನಿಧ್ಯ ವಹಿಸಿದ್ದರು. ಸಮಿತಿ ಪ್ರಧಾನ ಸಂಚಾಲಕಿ ನಿರ್ಮಲಾ, ಬಂಗಾರಸ್ವಾಮಿ, ಎಂ.ಎಸ್.ಮಾದಯ್ಯ, ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ ಎನ್. ರಾಜಣ್ಣ, ಎಂ.ಶಿವಮೂರ್ತಿ, ರಾಮಲಿಂಗು, ನಾಗಣ್ಣ ಬಡಿಗೇರೆ, ರಮೇಶ್, ಭಾಗ್ಯಮ್ಮ, ಮಣಿ, ವೀರಣ್ಣ ಓಲೆ ಮಹದೇವು, ಕಾಳನಹುಂಡಿ ಮಹೇಶ್ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ನಮ್ಮ ಕಷ್ಟ ನಿವಾರಿಸೋ ನನ್ನೊಡೆಯಾ...

ಸಮಸ್ಯೆ ಬಗೆ ಹರಿಸದ ಕಾರಣ ನೂರಾರು ಕಿಲೋ ಮೀಟರ್ ದೂರದಿಂದ ಬಂದಿದ್ದೇವೆ ಎಂಬ ಅಳಲನ್ನು ಜನರು ತೋಡಿಕೊಂಡರು. ಮುಖ್ಯಮಂತ್ರಿ ಅವರು ಅಧಿಕಾರ ವಹಿಸಿಕೊಂಡ ದಿನ ದಿಂದಲೇ ಜನರ ಸಮಸ್ಯೆಗಳಿಗೆ ಸ್ಪಂದಿಸುವ ವಂತೆ ಅನೇಕ ಬಾರಿ ಕಟ್ಟಾದೇಶ ಮಾಡಿ ದ್ದರೂ ಅದನ್ನು ಪಾಲನೆ ಮಾಡಿರಲಿಲ್ಲ ಎಂಬುದು ಇಂದಿನ ಜನತಾ ದರ್ಶನ ದಲ್ಲಿ ಬಿಂಬಿತಗೊಂಡಿತು. ಬೀದಿ ಬದಿ ವ್ಯಾಪಾರಿಗಳಿಗೆ ಪೊಲೀಸರು ಮತ್ತು ಅಧಿಕಾರಿಗಳು ಕಿರುಕುಳ ನೀಡುತ್ತಾರೆ. ಇದನ್ನು ತಪ್ಪಿಸಿ ಎಂದು ವೃದ್ಧ ವ್ಯಾಪಾರಿ ಮಹಿಳೆ ಯೊಬ್ಬರು ಅಲವತ್ತುಕೊಂಡರು. ಮತ್ತೆ ಕೆಲವರು ಮನೆ ಕಂದಾಯ ಕಟ್ಟದಿದ್ದರೂ ಸ್ಥಳೀಯ ಸಂಸ್ಥೆಗಳಲ್ಲಿ ದಂಡ ವಿಧಿಸುತ್ತಿವೆ, ಈ ಬಗ್ಗೆ ಕೇಳಲು ಹೋದರೆ ಅಧಿಕಾರಿ ದರ್ಪದಿಂದ ವರ್ತಿಸುತ್ತಾರೆ ಎಂಬ ದೂರು ಕೇಳಿಬಂದಿತು.

ತರಬೇತಿ ಪಡೆದಿದ್ದರೂ ವಿಕಲಚೇತನರಿಗೆ ಮೂರು ಚಕ್ರಗಳ ವಾಹನ ನೀಡುತ್ತಿಲ್ಲ. ಹುಣಸೂರಿನ ಕಲ್ಲಹಳ್ಳಿ ಪಂಚಾಯತ್‌ನ ಅಲೆಮಾರಿ ಜೋಗಿ ಗೆರೆಸಿಯಾ ಸಮುದಾಯದವರಿಗೆ 40 ಮನೆ ಮಂಜೂರಾಗಿವೆ, ಮನೆ ಕಟ್ಟಲು ಅವಕಾಶ ನೀಡಿ.

ಅಧಿಕಾರಿಗಳು ಮತ್ತು ಪೊಲೀಸರು ಗೂಂಡಾಗಳ ಜೊತೆ ಶಾಮೀಲಾಗಿ ನಮ್ಮ ಭೂಮಿ ಹೊಡೆಯಲು ಯತ್ನ ಮಾಡುತ್ತಿದ್ದಾರೆ ಎಂದರೆ, ಮತ್ತೆ ಕೆಲವರು ನಮ್ಮ ಭೂಮಿಯನ್ನು ಸಂಬಂಧಿಕರೇ ಒತ್ತುವರಿ ಮಾಡಿಕೊಂಡಿದ್ದಾರೆ ಬಿಡಿಸಿಕೊಡಿ ಎಂದು ಅಹವಾಲು ಸಲ್ಲಿಸಿದರು. ಹೃದಯ ಬೇನೆ, ಕಿಡ್ನಿ, ಅಂಗವೈಕಲ್ಯ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಮತ್ತು ಪರಿಹಾರಕ್ಕೆ ಮಾಡಿದ ಮನವಿಗಳಿಗೆ ಮುಖ್ಯಮಂತ್ರಿ ಸ್ಥಳದಲ್ಲೇ ಸ್ಪಂದಿಸಿದರು. ಬೆಳಗಿನಿಂದ ಸಂಜೆವರೆಗೂ ಸಾವಿರಾರು ಮಂದಿ ಸರದಿ ಸಾಲಿನಲ್ಲಿ ನಿಂತು ಮುಖ್ಯಮಂತ್ರಿಗಳಿಗೆ ತಮ್ಮ ಕಷ್ಟಕೋಟಲೆಗಳನ್ನು ಹೇಳಿಕೊಂಡು ಪರಿಹಾರಕ್ಕೆ ಬೇಡಿಕೊಂಡರು. ಎಲ್ಲಾ ಬೇಡಿಕೆಗಳನ್ನು ಮುಖ್ಯಮಂತ್ರಿ ಮತ್ತು ಅಧಿಕಾರಿಗಳು ಆಲಿಸಿ, ಇವುಗಳಲ್ಲಿ ಕೆಲವನ್ನು ಸ್ಥಳದಲ್ಲೇ ಪರಿಹರಿಸಿದರೆ, ಇನ್ನು ಕೆಲವನ್ನು ಪರಿಹರಿಸಲು ಅಧಿಕಾರಿಗಳಿಗೆ ಗಡುವು ನೀಡಿದರು.

ಮುಖ್ಯಮಂತ್ರಿಗಳವರ ಗಮನಕ್ಕೆ ತರಲಾದ ಕೆಲವು ಅಹವಾಲುಗಳು

- ಮೈಸೂರು ರಸ್ತೆಯ ಬ್ಯಾಟರಾಯನಪುರದ 3ನೇ ಅಡ್ಡ ರಸ್ತೆಯಲ್ಲಿ ರಾಜೇಶ್ವರಿ ಮಲ್ಲೇಶ್ ಎಂಬುವರ ಮನೆಯಲ್ಲಿ ಭೋಗ್ಯಕ್ಕೆ ನೆಲೆಸಿರುವ ನಿವಾಸಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಮನೆ ಮಾಲೀಕರು ನಾಪತ್ತೆಯಾಗಿದ್ದು, ಬ್ಯಾಂಕ್‌ನವರು ಮನೆ ಜಪ್ತಿಗೆ ಬಂದಿದ್ದಾರೆ. ನಾವು ಈ ಮನೆಗೆ ಲೀಸ್‌ಗೆ ಬಂದಿದ್ದೇವೆ. ಆದರೆ ಮನೆ ಮಾಲೀಕರು ಮನೆಯ ಮೇಲೆ ಸಾಲ ಪಡೆದು ಅದನ್ನು ಕಟ್ಟದೆ ಪರಾರಿ ಆಗಿದ್ದಾರೆ. ಈಗ ಬ್ಯಾಂಕ್‌ನವರು ಮನೆ ಜಪ್ತಿಗೆ ಬಂದಿದ್ದಾರೆ. ನಮ್ಮ ಲೀಸ್ ಹಣವೂ ಹೋಗುತ್ತದೆ ಎಂದು ಗೋಳು ತೋಡಿಕೊಂಡರು. ತಾವು ಸಾಲ ಸೋಲ ಮಾಡಿ ದಿನಭೋಗ್ಯದ ಹಣ ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಮಕ್ಕಳೊಂದಿಗೆ ಬೀದಿಗೆ ಬರುವ ಸ್ಥಿತಿ ಇದೆ, ನೆರವು ನೀಡಿ ಎಂದು ಮನವಿ ಮಾಡಿದರು. ತಕ್ಷಣ ನಗರ ಪೊಲೀಸ್ ಕಮಿಷನರ್ ದಯಾನಂದ್ ಅವರನ್ನು ಕರೆದ ಮುಖ್ಯಮಂತ್ರಿಗಳು, ಪ್ರಕರಣ ಪರಿಶೀಲಿಸುವಂತೆ ಸೂಚಿಸಿದರು. ಪೊಲೀಸ್ ಆಯುಕ್ತ ದಯಾನಂದ್ ಅವರು ಸಮಗ್ರವಾಗಿ ಸಮಸ್ಯೆ ಆಲಿಸಿ, ಪರಿಹಾರಕ್ಕೆ ಡಿಸಿಪಿ ಅವರಿಗೆ ಸೂಚಿಸಿದರು. ಶಿಕ್ಷಕರ ನೇಮಕಾತಿಯಲ್ಲಿ ಸುಮಾರು 1,800 ವಿವಾಹಿತ ಮಹಿಳಾ ಅಭ್ಯರ್ಥಿಗಳು ತಂದೆಯ ಜಾತಿ ಹಾಗೂ ಆದಾಯ ಪ್ರಮಾಣಪತ್ರವನ್ನು ಸಲ್ಲಿಸಿದ್ದರು. ದಾಖಲೆ ಪರಿಶೀಲನೆಯ ಸಂದರ್ಭದಲ್ಲಿ ಈ ವಿವಾಹಿತ ಮಹಿಳೆಯರ ಜಾತಿ ಮೀಸಲಾತಿಯನ್ನು ರದ್ದುಗೊಳಿಸಿ, ಸಾಮಾನ್ಯ ವರ್ಗಕ್ಕೆ ಸೇರಿಸಲಾಗಿದೆ. ತಾವು ನೇಮಕಾತಿ ಅಧಿಸೂಚನೆಯನ್ನು ಮಾಹಿತಿಯನ್ನು ಪರಿಗಣಿಸಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಕೇವಲ ಆರ್.ಡಿ. ಸಂಖ್ಯೆಯನ್ನು ಮಾತ್ರ ನಮೂದಿಸಲು ಅವಕಾಶವಿದೆ. ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ತಮ್ಮನ್ನು ಮೀಸಲಾತಿಯಿಂದ ಹೊರಗಿಟ್ಟು, ಸಾಮಾನ್ಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು, ಇದನ್ನು ಸರಿಪಡಿಸುವಂತೆ ಕೆಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದರು. ಈ ಸಮಸ್ಯೆಯನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ ಬಗೆಹರಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.
- ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲೂಕಿನ ಮುಬಾರಕ್ ಅವರು ತಮಗೆ ಮಂಜೂರಾಗಿರುವ ನಿವೇಶನವನ್ನು ಬೇರೆಯವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನು ಬಿಡಿಸಿಕೊಡುವಂತೆ ಮನವಿ ಮಾಡಿದರು. ಈ ಕುರಿತು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.
- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಕಲಾವಿದ ಮಟ್ಟಣ್ಣ ಅವರು ಹೃದ್ರೋಗ ಚಿಕಿತ್ಸೆಗಾಗಿ ನೆರವು ನೀಡುವಂತೆ ಮನವಿ ಮಾಡಿದರು. ಮುಖ್ಯಮಂತ್ರಿಯವರು ನೆರವು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಸೂಚಿಸಿದರು.
- ಚಿಕ್ಕಮಗಳೂರು ಜಿಲ್ಲೆ ಕರ್ಕಿಪೇಟೆಯ ದಿನೇಶ್ ಎಂಬುವರು 40 ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದು, ಸೆಕ್ಷನ್ 50, 53 ಹಾಗೂ 57 ರಡಿ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿದ್ದಾರೆ. ಆದರೆ ಈ ಕುರಿತು ಯಾವುದೇ ರೀತಿಯ ಕ್ರಮ ಆಗಿಲ್ಲ. ಸಾಗುವಳಿ ಚೀಟಿ ಒದಗಿಸುವಂತೆ ಮರು ಮನವಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು. ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಆನ್‌ಲೈನ್ ಮೂಲಕ ಮುಖ್ಯಮಂತ್ರಿಗಳು ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಸೂಚಿಸಿದರು.

ಸ್ಥಳೀಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಎಂದಿದ್ದಾರೆ. ಎಲ್ಲ ಜಿಲ್ಲಾ ಸಚಿವರಿಗೆ ಪತ್ರ ಬರೆದಿದ್ದೆ, ಜಿಲ್ಲೆಗಳಲ್ಲಿ ಜನಸ್ಪಂದನಾ ಕಾರ್ಯಕ್ರಮ ಮಾಡಿ, ನನಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿತ್ತು. ಕೆಲವು ಜಿಲ್ಲೆಗಳಿಂದ ಮಾತ್ರ ವರದಿ ಬಂದಿದೆ. ಉಳಿದ ಜಿಲ್ಲೆಗಳಿಂದ ವರದಿ ಬಂದಿಲ್ಲ. ಇದನ್ನು ಸಹಿಸಲ್ಲ. ಅನೇಕ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲಿ ಪರಿಹಾರ ನೀಡಲು ಸಾಧ್ಯವಾಗುತ್ತದೆ. ಕೆಲವು ಅರ್ಜಿಗಳು ಕೂಡಲೇ ತೀರ್ಮಾನ ಮಾಡಲು ಆಗೋದಿಲ್ಲ. ಸಮಯ ಬೇಕಾಗುತ್ತದೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು. ಇಲ್ಲವಾದರೆ ಬೆಳೆಯುತ್ತಲೇ ಹೋಗುತ್ತವೆ. ಇಂದು ಬಂದ ಅರ್ಜಿಗಳಲ್ಲಿ ಬಹುತೇಕ ಕಂದಾಯ, ಪೊಲೀಸ್ ಇಲಾಖೆ, ಗೃಹಲಕ್ಷ್ಮಿ ಯೋಜನೆ, ಬಿಬಿಎಂಪಿ, ಪಿಂಚಣಿ, ಗ್ರಾಚ್ಯುಯಿಟಿ ಇತ್ಯರ್ಥ, ವಸತಿ ಕೊಡಿ, ಉದ್ಯೋಗ ಕೊಡಿಸಿ ಎಂಬ ಮನವಿಗಳು. ವಿಶೇಷವಾಗಿ ಅಂಗವಿಕಲರು ಉದ್ಯೋಗ ಕೊಡಿಸಿ, ತ್ರಿಚಕ್ರ ವಾಹನ ಕೊಡಿಸಿ ಎಂದು ಮನವಿ ಸಲ್ಲಿಸಿದ್ದಾರೆ. 4000 ತ್ರಿಚಕ್ರ ವಾಹನ ಒದಗಿ ಸಲಾಗಿದೆ. ವಿಶೇಷವಾಗಿ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿಯೇ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತದೆ. ಖಾತೆ, ಪಹಣಿ, ಪೋಡಿ ಮಾಡಲು ನನ್ನ ಬಳಿ ಬರಬೇಕೇ ಎಂದು ಪ್ರಶ್ನಿಸಿದರು. ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಉಪವಿಭಾಗಾಧಿಕಾರಿಗಳು ಕೆಲಸ ಮಾಡಿದರೆ ಜನರು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಕಟ್ಟುನಿಟ್ಟಿನ ಸೂಚನೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನೀಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚಿಸಿದ್ದೇನೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಆಸ್ಪತ್ರೆ, ಪೊಲೀಸ್ ಠಾಣೆ, ಹಾಸ್ಟೆಲ್‌ಗಳು ಮತ್ತಿತರ ಸ್ಥಳಗಳಿಗೆ ಭೇಟಿ ನೀಡಬೇಕು. ಜನರ ಸಮಸ್ಯೆ ಬಗೆಹರಿಸಬೇಕು. ವಿಳಂಬ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಕೂಡಲೇ ಜನರಿಗೆ ಸ್ಪಂದಿಸಲು ಸೂಚಿಸಿದರು. ಕಾನೂನು ರೀತ್ಯ ಮಾಡಲು ಸಾಧ್ಯವಾಗದಿದ್ದರೆ, ಹಿಂಬರಹ ನೀಡಬೇಕು.

ಇಂದು ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದು. ಹದಿನೈದು ದಿನದೊಳಗೆ ಇವುಗಳನ್ನು ವಿಲೇವಾರಿ ಮಾಡಬೇಕು. ಕನಿಷ್ಠ ಮೂರು ತಿಂಗಳಿಗೊಮ್ಮೆ ಜನಸ್ಪಂದನಾ ಕಾರ್ಯಕ್ರಮ ಮಾಡುತ್ತೇನೆ. ಮುಂದಿನ ಬಾರಿ ಹೆಚ್ಚು ಜನ ಬಂದರೆ, ತಳಹಂತದ ಅಧಿಕಾರಿಗಳು ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇಂದು ಮೂರೂವರೆ ಸಾವಿರ ಅರ್ಜಿ ಸ್ವೀಕರಿಸಲಾಗಿದೆ. ಇವುಗಳನ್ನು ಪರಿಶೀಲಿಸಿ, ಕಾನೂನು ರೀತ್ಯ ಪರಿಹಾರ ನೀಡಬೇಕು. ಸಾಧ್ಯವಾಗದಿದ್ದರೆ ಹಿಂಬರಹ ನೀಡಬೇಕು. ತಳಹಂತದ ಅಧಿಕಾರಿಗಳು ಅರ್ಜಿಯನ್ನು ಇತ್ಯರ್ಥಪಡಿಸಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದ್ದಾರೆ.

ಚಿನ್ನದ ಸರ, ಬಳೆ ಕದ್ದ ನಯವಂಚಕ

ತಂದು ಅಂಬುಜಮ್ಮನವರಿಗೆ ಒಂದು ಕಪ್ ನೀಡಿದ್ದಾನೆ. ಕಾಫಿ ಕುಡಿದ ನಂತರ ಅವರು ಪ್ರಜ್ಞಾಹೀನರಾಗಿದ್ದಾರೆ. ಅಂದು ಸಂಜೆ 4.45ರ ಸುಮಾರಿನಲ್ಲಿ ಅಂಬುಜಾಕ್ಷಮ್ಮನವರ ಮೊಮ್ಮಗ ನೀಲೇಶ್, ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಜ್ಞಾಹೀನರಾಗಿದ್ದ ಅಂಬುಜಾಕ್ಷಮ್ಮ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮರುದಿನ ಅವರಿಗೆ ಪ್ರಜ್ಞೆ ಮರಳಿದ್ದು, ಅವರ ಬ್ಯಾಗ್‌ನಲ್ಲಿದ್ದ 65 ಗ್ರಾಂ ತೂಕದ ಮಾಂಗಲ್ಯ ಸರ ಹಾಗೂ ಬಲಗೈಯ್ಯಲ್ಲಿದ್ದ 11 ಗ್ರಾಂ ತೂಕದ ಚಿನ್ನದ ಬಳೆ ಕಳವಾಗಿರುವುದು ಗೊತ್ತಾಗಿದೆ. ಅಂಬುಜಾಕ್ಷಮ್ಮನವರಿಗೆ ಕಾಫಿಯಲ್ಲಿ ಮತ್ತು ಬರಿಸುವ ಔಷಧಿ ಬೆರೆಸಿಕೊಟ್ಟು ಚಿನ್ನಾಭರಣ ದೋಚಿದ ಚಾಮರಾಜನಗರದವನು ಎಂದು ಹೇಳಿಕೊಂಡಿದ್ದ ಖದೀಮನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಇತ್ತೀಚೆಗೆ ಇದೇ ರೀತಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸಿದ ವೃದ್ಧರೊಬ್ಬರನ್ನು ಪರಿಚಯಿಸಿಕೊಂಡ ಖದೀಮ ಮೈಸೂರಿನಲ್ಲಿ ಬಸ್ ಇಳಿದ ನಂತರ ಕಾಫಿ ಕುಡಿಯಲೆಂದು ಬಸ್ ನಿಲ್ದಾಣದಲ್ಲೇ ಇರುವ ಹೋಟೇಲ್ ಕರೆದೊಯ್ದು ಕಾಫಿ ಜೊತೆ ಮತ್ತುಬರಿಸುವ ಔಷಧಿ ಬೆರೆಸಿ, ಅವರ ಮೈಮೇಲಿದ್ದ ಚಿನ್ನಾಭರಣ ದೋಚಿದ್ದ. ಹೋಟೇಲ್‌ನಲ್ಲೇ ಪ್ರಜ್ಞಾಹೀನರಾಗಿ ಬಿದ್ದಿದ್ದ ವೃದ್ಧರನ್ನು ಸಾರ್ವಜನಿಕರೊಬ್ಬರು ಆಸ್ಪತ್ರೆಗೆ ದಾಖಲಿಸಿದ್ದರು. ಎರಡು ದಿನಗಳ ಬಳಿಕ ವೃದ್ಧನಿಗೆ ಪ್ರಜ್ಞೆ ಮರಳಿದ ನಂತರ ವಿಚಾರ ಬೆಳಕಿಗೆ ಬಂದಿತ್ತು. ಬೆಂಗಳೂರು ಮತ್ತು ಮೈಸೂರು ನಡುವೆ ಸಂಚರಿಸುವ ಬಸ್‌ಗಳಲ್ಲಿ ಚಿನ್ನಾಭರಣ ಧರಿಸಿರುವ ವೃದ್ಧರನ್ನೇ ಗುರಿಯಾಗಿಸಿಕೊಂಡು ಕೃತ್ಯವೆಸಗುತ್ತಿರುವುದು ಆತಂಕಕಾರಿಯಾಗಿದೆ.

ಗೂಗಲ್, ಮೊಬೈಲ್ ಮೇಲೆ ಅವಲಂಬಿತರಾಗಬೇಡಿ; ಪುಸ್ತಕ ಓದಿ

ವಿದ್ಯಾರ್ಥಿಗಳಿಗೆ ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ. ಹೆಚ್.ಎಂ.ರಾಜಶೇಖರ್ ಸಲಹೆ



ಮೈಸೂರು, ನ.27(ಬಿಎಲ್‌ಯು) ವಿದ್ಯಾರ್ಥಿಗಳು ಮೊಬೈಲ್ ಹಾಗೂ ಗೂಗಲ್ ಮೇಲೆ ಹೆಚ್ಚಾಗಿ ಅವಲಂಬಿತರಾಗದೆ ಪುಸ್ತಕಗಳನ್ನು ಓದುವಂತೆ ಮೈಸೂರು ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಎಂ. ರಾಜಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ 74 ನೇ ಸಂವಿಧಾನ ದಿನಾಚರಣೆ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸಗಳ ಮಾಲಿಕೆ ಅಂಗವಾಗಿ ಇಂದು 'ಆಯೋಜಿಸಿದ್ದ ಭಾರತದ ಸಂವಿಧಾನ: ಭಾರತೀಯ ರಾಜಕೀಯ ವ್ಯವಸ್ಥೆ' ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಶಿಕ್ಷಕರು ಹಾಗೂ ಪುಸ್ತಕಗಳ ಮೇಲೆ ಅವಲಂಬಿತರಾದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಜ್ಞಾನಾಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇಂದು ಬಹಳಷ್ಟು ವಿದ್ಯಾರ್ಥಿಗಳು ಪುಸ್ತಕಗಳನ್ನು ಓದದೆ ಮೊಬೈಲ್ ಆ್ಯಪ್ ಹಾಗೂ ಗೂಗಲ್‌ನಲ್ಲಿ ಮಾಹಿತಿ ಕಲೆ ಹಾಕುತ್ತಾರೆ. ಆದರೆ ಅದರಲ್ಲಿ ಬಹಳಷ್ಟು ವಿಚಾರಗಳು ಸೇರ್ಪಡೆಗೊಂಡಿರುವುದಿಲ್ಲ ಮತ್ತು ಅಪ್‌ಡೇಟ್ ಆಗಿರುವುದಿಲ್ಲ ಇದರಿಂದ ವಿದ್ಯಾರ್ಥಿಗಳ ಜ್ಞಾನಾರ್ಜನೆ ಅಪೂರ್ಣವಾಗುತ್ತದೆ ಎಂದು ಡಾ.ರಾಜಶೇಖರ್ ಹೇಳಿದರು.

ಇತ್ತೀಚೆಗೆ ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಹವ್ಯಾಸ ಬಿಟ್ಟಿದ್ದಾರೆ. ಗ್ರಂಥಾಯಗಳತ್ತ ತಲೆ ಕೂಡ ಹಾಕುವುದಿಲ್ಲ. ಈ ಕಾರಣದಿಂದ ಬಹಳಷ್ಟು ಪುಸ್ತಕ ಮಳಿಗೆಗಳು ಮುಚ್ಚುವ ಸ್ಥಿತಿಗೆ ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜಕಾರಣಿಗಳು ಇಲ್ಲಿ ತನಕ ಎಷ್ಟೇ ಕಚ್ಚಾಡಿರಬಹುದು, ಮತದಾರರು ಭಾವನಾತ್ಮಕ ದೃಷ್ಟಿಯಿಂದ ಮತ ಚಲಾವಣೆ ಮಾಡಿರಬಹುದು. ಆದರೆ 74 ವರ್ಷವಾದರೂ ಭಾರತದ ಸಂಸದೀಯ ಸರ್ಕಾರ ಪದ್ಧತಿ ಮಾತ್ರ ಯಶಸ್ವಿಯಾಗಿ ಸಾಗುತ್ತಿದೆ ಎಂದು ಹೇಳಿದರು.

ಭಾರತ ಇನ್ನು 25 ವರ್ಷಕ್ಕೆ ಇಡೀ ವಿಶ್ವದಲ್ಲೆ ಅಭಿವೃದ್ಧಿಯಲ್ಲಿ ಅಗ್ರಸ್ಥಾನ ಪಡೆಯುತ್ತದೆ. ಇದರಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದ ಪ್ರೊ.ರಾಜಶೇಖರ್, ಅಭಿವೃದ್ಧಿ ಪಥದಲ್ಲಿ ಸಾಗಲು ಬುನಾದಿ ಹಾಕಿರುವ ಬಹಳಷ್ಟು ಯೋಜನೆಗಳು ಇದನ್ನು ಬಿಂಬಿಸುತ್ತದೆ ಎಂದರು.

ಭಾರತದ ಸಂಸತ್ತಿನಲ್ಲಿ ಬಹಳಷ್ಟು ಕಾಯ್ದೆಗಳು ಚರ್ಚೆಯಾಗದೆ ಅನುಮೋದನೆಯಾಗುತ್ತಿವೆ. ಇದು ಅಪಾಯಕಾರಿಯಾದುದು. ದೇಶದ ಭವಿಷ್ಯವನ್ನು ರೂಪಿಸುವ ಕಾಯ್ದೆಗಳ ಸಾಧಕ–ಬಾಧಕಗಳ ಬಗ್ಗೆ ಚರ್ಚೆಯಾಗಬೇಕು ಎಂದು ಸಲಹೆ ನೀಡಿದರು.

ಅಧಿಕಾರ ದುರುಪಯೋಗ, ಭ್ರಷ್ಟಾಚಾರ ಹಾಗೂ ಕುಟುಂಬ ರಾಜಕಾರಣ ಕೂಡ ಅಷ್ಟೆ ಅಪಾಯಕಾರಿಯಾಗಿದೆ ಎಂದರು. ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೃಷ್ಣ ಆರ್.ಹೊಂಬಾಳ್, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಪ್ರೊ.ರಾಮಚಂದ್ರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> ಅಧಿಕಾರಕ್ಕೆ ಬರುವ ಪ್ರತಿಯೊಂದು ಸರ್ಕಾರ 5 ವರ್ಷ ಆಳ್ವಿಕೆ ನಡೆಸಬೇಕು. ಆಗ ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತವೆ. ಇಲ್ಲದಿದ್ದರೆ ದೇಶ ಹಾಗೂ ರಾಜ್ಯಗಳ ಬೆಳವಣಿಗೆ ಕುಂಠಿತವಾಗುತ್ತದೆ. ಆದರೆ ಕೆಲವು ಸಂದರ್ಭದಲ್ಲಿ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಎಲ್ಲಾ ಪಕ್ಷಗಳ ನಾಯಕರು ರಾಷ್ಟ್ರಪತಿ ಆಳ್ವಿಕೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇಲ್ಲಿ ತನಕ ದೇಶದಲ್ಲಿ 480 ಬಾರಿ ರಾಷ್ಟ್ರಪತಿ ಆಳ್ವಿಕೆಯನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. ಆದರೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಈಗ ರಾಷ್ಟ್ರಪತಿ ಆಳ್ವಿಕೆಯ ದುರುಪಯೋಗ ತಪ್ಪಿಸಿದೆ ಎಂದು ಹೇಳಿದರು.
>
> – **ಪ್ರೊ.ಹೆಚ್.ಎಂ. ರಾಜಶೇಖರ್,** ಮೈಸೂರು ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ

ಹಕ್ಕು ಕೇಳುವವರು ಜವಾಬ್ದಾರಿ ಮರೆಯಬಾರದು

ಹಿರಿಯ ವಕೀಲ ಚಂದ್ರಮೌಳಿ ಸಲಹೆ



ಮೈಸೂರು, ನ.27(ಬಿಎಲ್‌ಯು) ಸಂವಿಧಾನದತ್ತವಾಗಿ ದೊರೆಯುತ್ತಿರುವ ಹಕ್ಕು ಕೇಳುವ ಬಹಳಷ್ಟು ಜನರು ಜವಾಬ್ದಾರಿ ಮರೆಯುತ್ತಾರೆ ಎಂದು ಹಿರಿಯ ವಕೀಲರೂ ಆದ ಕರ್ನಾಟಕ ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಬಿ.ಆರ್.ಚಂದ್ರಮೌಳಿ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಇಂದು ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಕ್ಕು ಮಾತ್ರ ಕೇಳಿ, ಜವಾಬ್ದಾರಿ ಮರೆತರೆ ಸಂವಿಧಾನಕ್ಕೆ ತೋರುವ ಅಗೌರವವಾಗುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಜವಾಬ್ದಾರಿ ಮರೆಯಬಾರದು ಎಂದು ಸಲಹೆ ನೀಡಿದರು.

ಸಂವಿಧಾನವನ್ನು ಗೌರವಿಸಿ, ರಕ್ಷಣೆ ಮಾಡುವ ಹೊಣೆಗಾರಿಕೆ ಪ್ರತಿಯೊಬ್ಬ ಕಾನೂನು ವಿದ್ಯಾರ್ಥಿ, ವಕೀಲರು ಹಾಗೂ ನ್ಯಾಯಾಧೀಶರ ಮೇಲಿದೆ ಎಂದು ಹೇಳಿದರು.

ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು, ಪಾರದರ್ಶಕವಾಗಿರಬೇಕು, ವಿಳಂಬವಾಗಬಾರದು. ಹೀಗಿದ್ದಾಗ ಮಾತ್ರ ನಾವು ಸಂವಿಧಾನಕ್ಕೆ ಗೌರವ ಕೊಟ್ಟಂತಾಗುತ್ತದೆ. ಆದರೆ ಇತ್ತೀಚೆಗೆ ಬಹಳಷ್ಟು ಪ್ರಕರಣಗಳಲ್ಲಿ ನ್ಯಾಯದಾನ ವಿಳಂಬವಾಗುತ್ತಿದೆ, ಅಮಾಯಕರಿಗೆ ಅನ್ಯಾಯವಾಗುತ್ತಿದೆ. ಆದರೆ ಅನ್ಯಾಯ ಮಾಡುವವರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಚಂದ್ರಮೌಳಿ ಬೇಸರ ವ್ಯಕ್ತಪಡಿಸಿದರು.

ಕಾನೂನಾತ್ಮಕವಾಗಿ ವಿವಾದಗಳನ್ನು ಬಗಹರಿಸುವುದರ ಜೊತೆಗೆ ರಾಜೀ ಪ್ರಕ್ರಿಯೆಗಳ ಮೂಲಕ ವಿವಾದ ಸುಖಾಂತ್ಯಗೊಳಿಸಬೇಕು ಎಂದು ಇದೇ ವೇಳೆ ಸಲಹೆ ನೀಡಿದರು.

ಬಹಳಷ್ಟು ಕಾನೂನು ವಿದ್ಯಾರ್ಥಿಗಳು ಪಿಯುಸಿ ನಂತರ ಐದು ವರ್ಷಗಳ ಎಲ್‌ಎಲ್‌ಬಿಗೆ ದಾಖಲಾಗಿ ಗೊಂದಲಕ್ಕೀಡಾಗುತ್ತಾರೆ. ಆದರೆ ಈ ವಿಚಾರವಾಗಿ ನೀವು ಗೊಂದಲಕ್ಕೀಡಾಗಬೇಡಿ. ನಿಮ್ಮ ಆಯ್ಕೆ ಸರಿಯಾಗಿದೆ. ಶ್ರಮ ಪಟ್ಟು ಹೆಚ್ಚಿನ ಜ್ಞಾನಾರ್ಜನೆ ಮಾಡಿದರೆ ದೊಡ್ಡ ವಕೀಲರಾಗಬಹುದು, ದೊಡ್ಡ ಕಂಪನಿಗಳಿಗೆ ಕಾನೂನು ಸಲಹೆಗಾರರಾಗಬಹುದು ಹಾಗೂ ನ್ಯಾಯಾಧೀಶರಾಗಲೂಬಹುದು. ಈ ನಿಟ್ಟಿನಲ್ಲಿ ನಿಮಗೆ ದೊರೆತಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಚಂದ್ರಮೌಳಿ ಅವರು ಕಾನೂನು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ್ ರಾಮಣ್ಣವರ್, ವಿದ್ಯಾವರ್ಧಕ ಕಾನೂನು ಕಾಲೇಜಿನ ಎಸ್.ಶಿವಲಿಂಗಯ್ಯ, ಪ್ರಿನ್ಸಿಪಾಲ್ ಡಾ.ಪಿ.ದೀಪು, ಕಾನೂನು ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ.ಕೆ.ಬಿ.ವಾಸುದೇವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾಳೆ ಬೀದಿ ನಾಟಕ ಸ್ಪರ್ಧೆ



ಮೈಸೂರು, ನ.27(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ನ.29ರಂದು ಬೆಳಗ್ಗೆ 10.30ರಿಂದ ರಾಜ್ಯಮಟ್ಟದ ಜನಪದ ಹಾಗೂ ಬೀದಿ ನಾಟಕೋತ್ಸವ–2023 ಹಾಗೂ ಬೀದಿ ನಾಟಕ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕರ್ನಾಟಕ ಬೀದಿ ನಾಟಕ ಪರಿಷತ್ ಮುಖ್ಯ ಸಂಚಾಲಕ ಎಚ್.ಪಿ. ವೈರಮುಡಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುವರ್ಣ ಕರ್ನಾಟಕೋತ್ಸವ ಸಂಭ್ರಮಾಚರಣೆ ಅಂಗವಾಗಿ ಕರ್ನಾಟಕ ಬೀದಿ ನಾಟಕ ಪರಿಷತ್, ಮಂಡ್ಯ ಜಿಲ್ಲಾ ಜಾನಪದ ಮತ್ತು ಬೀದಿ ನಾಟಕ ಕಲಾ ತಂಡಗಳ ಒಕ್ಕೂಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತಾಶ್ರಯದಲ್ಲಿ ರಾಜ್ಯಮಟ್ಟದ ಜನಪದ ಹಾಗೂ ಬೀದಿ ನಾಟಕೋತ್ಸವ ಹಾಗೂ ಸ್ಪರ್ಧೆ ಆಯೋಜಿಸಲಾಗಿದೆ. ನ 29ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕೃಷಿ ಸಚಿವ ಚಲುವರಾಯಸ್ವಾಮಿ ಕಲಾಜಾಥಾಗೆ ಚಾಲನೆ ನೀಡಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ರಂಗಕರ್ಮಿ ಹೆಚ್.ಜನಾರ್ಧನ್ 'ಪ್ರಸ್ತುತ ದಿನಗಳಲ್ಲಿ ಬೀದಿ ನಾಟಕದ ಪ್ರಾಮುಖ್ಯತೆ' ಕುರಿತು ವಿಚಾರ ಮಂಡನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಈ ಸ್ಪರ್ಧೆಯಲ್ಲಿ ಮೈಸೂರು, ಬೆಂಗಳೂರು ಬೆಳಗಾವಿ ವಿಭಾಗದ 15 ಜಿಲ್ಲೆಗಳ 15 ತಂಡಗಳು, ವಾರ್ತಾ ಮತ್ತು ಸಂಪರ್ಕ ಇಲಾಖೆಯ 2 ತಂಡ, ಬೀದಿನಾಟಕ ಕಲಾತಂಡಗಳ ಒಕ್ಕೂಟದ ಮೂರು ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಲಿವೆ. ಪ್ರಥಮ ಸ್ಥಾನಕ್ಕೆ ನಾಲ್ಕು ಸಾವಿರ, ದ್ವಿತೀಯ ಮೂರು ಸಾವಿರ ಮತ್ತು ತೃತೀಯ ಸ್ಥಾನಕ್ಕೆ ಎರಡು ಸಾವಿರ ಮತ್ತು ಸಮಾಧಾನಕರವಾಗಿ ಒಂದು ಸಾವಿರ ನಗದು ಬಹುಮಾನ ನೀಡಲಾಗುತ್ತಿದೆ. ಬೀದಿ ನಾಟಕ ಕಲಾ ತಂಡಗಳು ಸ್ಥಳೀಯ ಮಾಧ್ಯಮದಂತೆ ಕೆಲಸ ಮಾಡುತ್ತಿದ್ದು, ಸರ್ಕಾರ ಉತ್ತಮ ಅವಕಾಶ ಒದಗಿಸುವಂತೆ ಕಾರ್ಯಕ್ರಮದಲ್ಲಿ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಸಂಚಾಲಕರಾದ ಸಂತೆಕಸಲಗೆರೆ ಬಸವರಾಜು, ಎನ್. ಶೇಖರ್, ಕಾತ್ಯಾಯಿನಿ, ಸವಿತಾ, ವಿನುತಾ ಇದ್ದರು.

ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಮೂಲಸೌಕರ್ಯ ಕಾಮಗಾರಿಗೆ ಕಾರ್ಯಾದೇಶ ನೀಡಲು ಆಗ್ರಹ



ಮೈಸೂರು,ನ.27(ಎಂಟಿವೈ)– ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯ ಒದಗಿಸಲು ಕರೆದಿರುವ ಟೆಂಡರ್‌ಗಳಿಗೆ ಕೂಡಲೇ ಕಾರ್ಯಾದೇಶ ನೀಡುವುದರೊಂದಿಗೆ 2020–21ನೇ ಸಾಲಿನಲ್ಲಿ ಪೂರ್ಣಗೊಂಡ ಕಾಮಗಾರಿಗಳ ಬಿಲ್ ಪಾವತಿಸಲು ಕ್ರಮ ಕೈಗೊಳ್ಳುವಂತೆ ಎಲೆಕ್ಟ್ರಿಕಲ್ ಇಪಿಸಿ ಗುತ್ತಿಗೆದಾರರ ಸಂಘ ಸದಸ್ಯ ಮಂಜುನಾಥ್ ಆಗ್ರಹಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ 2022–23 ನೇ ಆರ್ಥಿಕ ವರ್ಷದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಒಪ್ಪಿಗೆ ಪಡೆದು 237 ಕೋಟಿ ರೂ.ಗಳ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಕನಿಷ್ಠ ಮೊತ್ತಕ್ಕೆ ಬಿಡ್ ಮಾಡಿರುವ ಗುತ್ತಿಗೆದಾರರನ್ನು ಆಹ್ವಾನಿಸಿ ದರ ಸಂಧಾನ ನಡೆಸಿ, ಬ್ಯಾಂಕ್ ಖಾತರಿ ಪತ್ರವನ್ನು ಪಡೆದು, ಕಾಮಗಾರಿಗಳನ್ನು ನಡೆಸಲು ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ 46 ಗುತ್ತಿಗೆದಾರರಿಗೆ ವಿಸ್ತೃತ ಕಾರ್ಯಾದೇಶ ನೀಡಲಾಗಿದೆ ಕಾಮಗಾರಿಗಳನ್ನು ಪ್ರಾರಂಭಿಸಲು ಅವಶ್ಯವಿರುವ ಸಾಮಗ್ರಿಗಳನ್ನು ಟೆಂಡರ್ ನಿಯಮಗಳಂತೆ ಇಲಾಖಾ ಅಧಿಕಾರಿಗಳು ತಪಾಸಣೆ ನಡೆಸಿ ರವಾನೆ ಆದೇಶ ನೀಡಿದ್ದಾರೆ ಎಂದರು.

ಆದರೂ ಇದುವರೆಗೂ ಕೆಲಸ ಪ್ರಾರಂಭಿಸಲು ಕಾರ್ಯಾದೇಶ ನೀಡಿಲ್ಲ. ಈ ಕುರಿತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕೇಳಿದರೆ, ಕಾಮಗಾರಿಗಳಿಗೆ ಕಾರ್ಯಾದೇಶ ನೀಡಬೇಡಿ, ಸಾಮಗ್ರಿಗಳನ್ನು ನಾವೇ ಖರೀದಿಸಿ ಲೇಬರ್ ಅವಾರ್ಡ್ ಮಾಡೋಣ. ಯಾವುದೇ ಬಿಲ್ಲುಗಳನ್ನು ಪಾಸ್ ಮಾಡಬೇಡಿ ಎಂದು ಸರ್ಕಾರದಿಂದ ಮೌಖಿಕ ಆದೇಶವಿದೆ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಾಸ್ತವಾಂಶ ಬಹಿರಂಗವಾಗಬೇಕು. ಸೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಉದ್ದೇಶಪೂರ್ವಕವಾಗಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವರು ಎಂದು ತಿಳಿದು ಬಂದಿದೆ ಎಂದು ಆರೋಪಿಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹೇಳಿಕೆ ಅವರದ್ದೇ ಆಗಿದ್ದಲ್ಲಿ ಲಂಚಕ್ಕಾಗಿ ಒತ್ತಾಯಿಸುವ ತಂತ್ರವಾಗಿರುತ್ತದೆ. ಆದ್ದರಿಂದ ಕೂಡಲೇ ಕಾರ್ಯಾದೇಶ ನೀಡಬೇಕು. ಹಳೆಯ ಬಿಲ್ ಪಾವತಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಲೆಕ್ಟ್ರಿಕಲ್ ಇಪಿಸಿ ಗುತ್ತಿಗೆದಾರರ ಸಂಘ ಪದಾಧಿಕಾರಿಗಳಾದ ಟಿ.ಎಸ್. ಮಂಜುನಾಥ್, ಪುಟ್ಟಮಾದು, ಕೆಂಪರಾಜು ಹಾಗೂ ಇನ್ನಿತರರು ಇದ್ದರು.

ನಾರಾಯಣ ಆಸ್ಪತ್ರೆಯಲ್ಲಿ ಹಠಾತ್ ಹೃದಯಾಘಾತ ತ್ವರಿತ ನಿರ್ವಹಣೆಗೆ ವಿಶೇಷ ಘಟಕ ಆರಂಭ



ಮೈಸೂರು,ನ.27(ಎಂಟಿವೈ)– ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಹಠಾತ್ ಹೃದಯಾಘಾತ ನಿರ್ವಹಣೆಗೆ ವಿಶೇಷ ಘಟಕ ಆರಂಭಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್. ರವಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ 30ರಿಂದ 40 ವರ್ಷ ವಯಸ್ಸಿನ ಯುವಜನರಲ್ಲಿ ಹೃದಯಾಘಾತ ಹೆಚ್ಚಾಗಿ ಸಂಭವಿಸುತ್ತಿದೆ. ಇದರಿಂದ ಹೃದಯಾಘಾತಕ್ಕೆ ತುತ್ತಾದ ಯುವ ಜನರು ಸಾವಿಗೆ ತುತ್ತಾಗುತ್ತಿದ್ದಾರೆ. ಹೃದಯದ ಕವಾಟದಲ್ಲಿ ದುರ್ಮಾಂಸ ಬೆಳೆಯುವುದರಿಂದ ಹೃದಯಾಘಾತವಾಗುತ್ತದೆ. ಹೃದಯಾಘಾತಕ್ಕೂ ಮುನ್ನ ಉಸಿರಾಟದ ಸಮಸ್ಯೆ, ಎದೆನೋವು, ತಲೆ ತಿರುಗುವಿಕೆ, ಮೂರ್ಛೆ, ಆಯಾಸ ಕಾಡುತ್ತದೆ. ನಿಯಮಿತ ಹೃದಯ ತಪಾಸಣೆಯಿಂದ ಇದನ್ನು ತಡೆಗಟ್ಟಬಹುದು. ಸಮಸ್ಯೆ ತೀವ್ರವಾಗಿದ್ದರೆ ಶಸ್ತ್ರಚಿಕಿತ್ಸೆ ಬೇಕಾಗಬಹುದು. ಆದ್ದರಿಂದ ಇಂತಹ ಲಕ್ಷಣ ಕಂಡು ಬಂದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು.ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯ ಡಾ.ಅಶ್ವಿನ್ ಇದ್ದರು.

ಜಿಲ್ಲಾಮಟ್ಟದ ಯುವಜನೋತ್ಸವಕ್ಕೆ ನೀರಸ ಪ್ರತಿಕ್ರಿಯೆ

ಸ್ಪರ್ಧೆಯಿಂದ ದೂರ ಉಳಿದ ಗ್ರಾಮೀಣ ವಿದ್ಯಾರ್ಥಿಗಳು





ಮೈಸೂರು, ನ.27(ಎಂಟಿವೈ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮಕ್ಕೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವೇ ತಂಡಗಳು ಮಾತ್ರ ಪ್ರದರ್ಶನ ನೀಡಿ ಗಮನ ಸೆಳೆದವು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನೆಹರು ಯುವ ಕೇಂದ್ರದ ಸಹಯೋಗದಲ್ಲಿ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಯುವ ಜನೋತ್ಸವ ಸ್ಪರ್ಧೆಯಲ್ಲಿ ಯುವ ಜನರ ಕೊರತೆ ಎದ್ದು ಕಾಣುತ್ತಿತ್ತು. ಯುವ ಜನೋತ್ಸವದಲ್ಲಿ ಸ್ಟೋರಿ ರೈಟಿಂಗ್, ಪೋಸ್ಟರ್ ಮೇಕಿಂಗ್, ಛಾಯಾಚಿತ್ರ ಸ್ಪರ್ಧೆ, ಭಾಷಣ ಸ್ಪರ್ಧೆ ಆಯೋಜಿಸಲಾಗಿತ್ತು. ಇದಕ್ಕಾಗಿ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಮೈಸೂರು ನಗರ ವ್ಯಾಪ್ತಿಯ ಕೆಲ ಕಾಲೇಜುಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಗಮಿಸಲಿಲ್ಲ. ಸ್ಪರ್ಧೆಯಲ್ಲಿ 18ರಿಂದ 29 ವರ್ಷದೊಳಗಿನ ವಿವಿಧ ಸಂಘ ಸಂಸ್ಥೆಗಳ ಯುವಕ, ಯುವತಿಯರು, ವಿದ್ಯಾರ್ಥಿಗಳು ಭಾಗವಹಿಸುವಂತೆ ಸುತ್ತೋಲೆಯಲ್ಲಿ ಮಾನದಂಡ ನಿಗದಿ ಮಾಡಿದ್ದರಿಂದ ಯುವ ಜನೋತ್ಸವಕ್ಕೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಜನಪದ ನೃತ್ಯ (ಸಮೂಹ), ಜನಪದ ಗೀತೆ (ಸಮೂಹ), ಜನಪದ ಗೀತೆ (ವೈಯಕ್ತಿಕ), ಜನಪದ ನೃತ್ಯ (ವೈಯಕ್ತಿಕ) ಸ್ಪರ್ಧೆಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮರಿಮಲ್ಲಪ್ಪ ಕಾಲೇಜು, ತಾಂಡವಪುರದ ಎಂಐಟಿ ಕಾಲೇಜು ತಂಡಗಳು ಮಾತ್ರ ಭಾಗವಹಿಸಿತ್ತು. ಜನಪದ ಗೀತೆ ವಿಭಾಗದಲ್ಲಿ ಸ್ಪರ್ಧಿಗಳ ಸಂಖ್ಯೆ ಬೆರಳೆಣಿಕೆಯಷ್ಟಿತ್ತು.

ಸ್ಪರ್ಧೆಯಲ್ಲಿ ತಾಂಡವಪುರದ ಎಂಐಟಿ ಕಾಲೇಜಿನ ವಿದ್ಯಾರ್ಥಿನಿಯರು ಮಾರಿ ಕುಣಿತವನ್ನು ಪ್ರದರ್ಶಿಸಿ ಗಮನ ಸೆಳೆದರು. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿನಿಯರು ಮಾದೇವ ಹಾಡಿಗೆ ಕಂಸಾಳೆ ನೃತ್ಯ ಪ್ರದರ್ಶಿಸಿ ಸೈ ಎನಿಸಿಕೊಂಡರು. ಮರಿಮಲ್ಲಪ್ಪ ಕಾಲೇಜಿನ ತಂಡದವರು ಚೆಲುವಯ್ಯ ಚೆಲುವೊ ತಾನಿ ತಂದಾನ ಮತ್ತು ಚೆಲ್ಲಿದರು ಮಲ್ಲಿಗೆಯಾ ಬಾಣಾಸುರ ಏರಿಮೇಲೆ ಗೀತೆಗೆ ನೃತ್ಯ ಪ್ರದರ್ಶಿಸಿದರು. ಮಹದೇಶ್ವರ, ಸಿದ್ದಪ್ಪಾಜಿ, ಕಾವೇರಿ ನದಿ ಹರಿಯುವ ಕುರಿತದ ಜನಪದ ಗೀತೆಗಳನ್ನು ಹಾಡಿದರು.

ಅಪರ ಜಿಲ್ಲಾಧಿಕಾರಿ ಲೋಕನಾಥ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಎಲ್ಲರಲ್ಲೂ ಒಂದಲ್ಲಾ ಒಂದು ಬಗೆಯ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹ ನೀಡುವ ಅಗತ್ಯವಿದೆ. ಪ್ರತಿಭೆ ಅನಾವರಣಗೊಳಿಸಲು ವೇದಿಕೆ ನಿರ್ಮಿಸಿ ಕೊಡಬೇಕು. ಪ್ರತಿಭೆ ಯಾರ ಸ್ವತ್ತಲ್ಲ ಯಾರಿಗೂ ಸೀಮಿತವಾಗಿಲ್ಲ. ಸೂಕ್ತ ವೇದಿಕೆಯನ್ನು ಒದಗಿಸಿ ಪ್ರೋತ್ಸಾಹ ನೀಡಿದರೆ ಪ್ರತಿಭೆ ಹೊರಬರಲಿದೆ. ಪೋಷಕರು ಸೇರಿದಂತೆ ಶಿಕ್ಷಕರು ಮಕ್ಕಳಿಗೆ ಉತ್ತೇಜನ ನೀಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಿಯು ಹಂತದಲ್ಲಿ ಕನ್ನಡ ಭಾಷಾ ಪಠ್ಯ ಬೋಧನೆ ಕುರಿತು ವಿಶೇಷ ಉಪನ್ಯಾಸ



ಮೈಸೂರು, ನ. 27– ನಗರದ ವಿಜಯ ವಿಠಲ ಪದವಿಪೂರ್ವ ಕಾಲೇಜಿನ ಆವರಣದಲ್ಲಿ 68ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲೆ ಪದವಿಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆಯಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಮರ್ಶಕರಾದ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ ಮಾತನಾಡಿ, ಪಿ.ಯು.ಸಿ ಹಂತದಲ್ಲಿ ಕನ್ನಡ ಭಾಷಾ ಪಠ್ಯ ಬೋಧನೆ ಅತ್ಯಂತ ಸವಾಲಿನ ಕೆಲಸವಾಗಿದೆ. ಮಕ್ಕಳು ಹದಿಹರೆಯದ ವಯಸ್ಸಿನಲ್ಲಿದ್ದು ಅವರನ್ನು ತರಗತಿಯಲ್ಲಿ ನಿಯಂತ್ರಿಸುವುದೇ ಕಷ್ಟ ಸಾಧ್ಯ. ವಿದ್ಯಾರ್ಥಿಗಳ ಮನಸ್ಸನ್ನು ಹತೋಟಿಗೆ ತಂದು ಏಕಾಗ್ರತೆಯಿಂದ ಕಲಿಯುವಂತೆ ಮಾಡುವುದೇ ಸವಾಲಿನ ಕೆಲಸ. ಕನ್ನಡ ಭಾಷೆಯನ್ನು ಬೋಧಿಸಿ, ಮಕ್ಕಳಿಗೆ ಅರ್ಥೈಸುವಂತೆ ಮಾಡುವುದೇ ಯಶಸ್ವಿ ಅಧ್ಯಾಪಕನ ಕರ್ತವ್ಯ. ಇಂದು ಕನ್ನಡ ಭಾಷೆಯನ್ನು ಹೆಚ್ಚು ಬಳಸುತ್ತಿರುವವರು ಮಧ್ಯಮ ವರ್ಗ ಹಾಗೂ ತಳ ಸಮುದಾಯ, ಕುಟುಂಬ ಸುರಕ್ಷಿತವಾಗಿದ್ದಷ್ಟು ಕನ್ನಡವನ್ನು ಅಸಡ್ಡೆಯಾಗಿ ನೋಡುತ್ತಿರುವುದನ್ನು ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಕಾಣುತ್ತಿದ್ದೇವೆ ಇದು ಅತ್ಯಂತ ಬೇಸರದ ಸಂಗತಿಯಾಗಿದೆ.

ಇದಕ್ಕೆ ಆಂಗ್ಲ ಭಾಷೆ ವ್ಯಾಮೋಹ, ಜಗತ್ತಿಗೆ ವ್ಯಾಪಾರ ವಹಿವಾಟು ಬಂದ ಮೇಲೆ ವ್ಯಾಪಾರ ಹೀನ ಭಾಷೆಯಾಗಿ ಕನ್ನಡವನ್ನು ಅಸಡ್ಡೆಯಾಗಿ ನೋಡತೊಡಗಿದರು. ಇದನ್ನು ಪ್ರತಿಯೊಬ್ಬ ಕನ್ನಡಿಗನು ಅರಿಯಬೇಕಿದೆ. ಭಾಷೆ ನಿಂತ ನೀರಲ್ಲ, ಹರಿಯುವ ನದಿ ಇದ್ದಂತೆ. ಆದ್ದರಿಂದ ಅಧ್ಯಾಪಕರಾದವರು ಸತತ ಅಭ್ಯಾಸ, ನಿರಂತರ ಪರಿಶ್ರಮದಲ್ಲಿ ತೊಡಗಿದಾಗ ಯಶಸ್ವಿ ಅಧ್ಯಾಪಕನಾಗುತ್ತಾನೆ. ಭಾಷೆ ಜೀವಂತವಾಗಿ ಉಳಿಯುತ್ತದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷಾ ಅಧ್ಯಾಪಕರಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತಿರುವುದನ್ನು ನೋಡುತ್ತಿದ್ದೇವೆ. ಶಿಕ್ಷಣ ಯಾವುದೇ ಇರಲಿ, ಮಾಧ್ಯಮ ಯಾವುದೇ ಇರಲಿ ಮೊದಲು ನಾವು ಭಾಷೆಯನ್ನು ಕಲಿಯಬೇಕು. ಭಾಷೆ ಇಲ್ಲದಿದ್ದರೆ ಶಿಕ್ಷಣ ಮುಂದುವರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ, ವಿಜಯ ವಿಠಲ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಕನ್ನಡ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ಡಾ.ನೀ.ಗೂ.ರಮೇಶ್, ಕವಿ ಡಾ.ಸಂತೋಷ್ ಚೊಕ್ಕಾಡಿ, ಬಾಲಸುಬ್ರಮಣ್ಯಂ, ಡಾ.ಕೆ. ಮಾಲತಿ, ರಮೇಶ್, ಮಹಾದೇವಸ್ವಾಮಿ, ನಾಗಯ್ಯ, ರೇಣುಕಾರಾಧ್ಯ, ಡಾ.ಚಿಕ್ಕಮಾದು, ಪುಟ್ಟಗೌರಮ್ಮ, ಮಹೇಶ್, ಹೆಚ್.ಆರ್.ಸುರೇಶ್, ಜಿಲ್ಲಾ ಪದವಿ ಪೂರ್ವ ಕಾಲೇಜಿನ ಕನ್ನಡ ಅಧ್ಯಾಪಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಜಯನಗರ 2ನೇ ಹಂತದ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ವಿದ್ಯಾರಣ್ಯ ಉದ್ಯಾನವನದಲ್ಲಿ 2023ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಸಿ.ನಾಗಣ್ಣ ಹಾಗೂ 20ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಸುಬ್ಬಯ್ಯ ಅವರನ್ನು ಸನ್ಮಾನಿಸಲಾಯಿತು. ಸಮಿತಿಯ ಅಧ್ಯಕ್ಷ ಶ್ರೀಕಾಂತ್ ಬಡಿಗೇರ್, ಪದಾಧಿಕಾರಿಗಳು ಮತ್ತು ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

ವೈದ್ಯರ ಸಾಹಿತ್ಯ ಪುಸ್ತಕ ಪರಿಚಯ ಕುರಿತು ಸಂವಾದ



ಮೈಸೂರು, ನ. 27– 68ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ವೈದ್ಯರು ನೂತನವಾಗಿ ರಚಿಸಿದ ಸಾಹಿತ್ಯ ಪುಸ್ತಕ ಪರಿಚಯದ ಮೊದಲ 'ಲೇಖಕ–ಪುಸ್ತಕ' ಸಂವಾದ ಜೆಎಸ್ಎಸ್ ದಂತ ವೈದ್ಯಕೀಯ ವಿದ್ಯಾಲಯದ ಶ್ರೀ ಗೌರಿಶಂಕರ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಬಹಳಷ್ಟು ಮಂದಿ ವೈದ್ಯರು, ದಂತವೈದ್ಯರುಗಳಲ್ಲದೇ, ವೈದ್ಯ ಶಿಕ್ಷಣಾರ್ಥಿಗಳು ಭಾಗವಹಿಸಿದ್ದು ವಿಶೇಷ. ಯುವ ಬರಹಗಾರರಾದ ಡಾ ಪ್ರಸನ್ನ ಸಂತೇಕಡೂರು, ಲೇಖಕ ವಿಜಯ್ ಹೆಮ್ಮಿಗೆ, ಜೆಎಸ್ಎಸ್ ಆಸ್ಪತ್ರೆಯ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ ಕಿಶೋರ್, ಡಾ ಗಿರೀಶ್ ಮತ್ತಿತರರು ಇದರಲ್ಲಿ ಭಾಗವಹಿಸಿ ಕನ್ನಡ ಸಾಹಿತ್ಯದ ವಿವಿಧ ಲೇಖಕರುಗಳ ಕೃತಿಗಳ ಬಗ್ಗೆ ಮಾತನಾಡಿದರು. ನಂತರ ಸಭಿಕರೊಂದಿಗೆ ಸಂವಾದ ಕಾರ್ಯಕ್ರಮವೂ ಜರುಗಿತು. ಕಾರ್ಯಕ್ರಮದ ರೂವಾರಿ ಡಾ.ಸುನೀತಾ ಸ್ವಾಗತಿಸಿದರೆ, ಡಾ ಶ್ರೀಶೈಲಾ ನಿರೂಪಣೆ ನಿರ್ವಹಿಸಿದರು.

ಅಮೃತ ವಿಶ್ವವಿದ್ಯಾಪೀಠಂನಲ್ಲಿ ಯುವ ಸಬಲೀಕರಣ ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ

ಮೈಸೂರು, ನ. 27–ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್ ಹಾಗೂ ವಿವೇಕಾನಂದ ಜನೋತ್ಥಾನ ಟ್ರಸ್ಟ್‌ನ ಸಹಯೋಗದಲ್ಲಿ ಯುವ ಸಬಲೀಕರಣ ಕುರಿತು 6ನೇ ರಾಷ್ಟ್ರ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರವು ಇದೇ ನವೆಂಬರ್ 29ರಂದು ಬೆಳಿಗ್ಗೆ 9 ಗಂಟೆಗೆ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನ ಆವರಣದಲ್ಲಿ ನಡೆಯಲಿದೆ. ಅತೀ ವೇಗದಲ್ಲಿ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ವಿದ್ಯಾರ್ಥಿಗಳನ್ನು ಹಾಗೂ ಯುವಶಕ್ತಿಯನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸುವ ಹಾಗೂ ಅವರಲ್ಲಿ ವೃತ್ತಿಪರ ಕೌಶಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಈ ಕಾರ್ಯಾಗಾರವು ಸ್ವಾಮಿ ವಿವೇಕಾನಂದರ ಚಿಂತನೆಗಳು ಹಾಗೂ ಬೋಧನೆಗಳಿಂದ ಪ್ರೇರಿತವಾಗಿದ್ದು, ನಮ್ಮ ಪ್ರಾಚೀನ ಜ್ಞಾನ ಸಂಸ್ಕೃತಿ, ವೇದಾಂತ ಹಾಗೂ ಯೋಗ ಶಾಸ್ತ್ರವನ್ನು ಸಮಕಾಲೀನ ಸಮಾಜದ ಜ್ಞಾನದ ಬೇರುಗಳೊಂದಿಗೆ ಬೆಸೆಯುವುದು ಈ ಕಾರ್ಯಾಗಾರದ ಮುಖ್ಯ ಆಶಯ.

ಇಂದಿನ ಯುವ ಜನತೆ ಎದುರಿಸುತ್ತಿರುವ ಸಮಸ್ಯೆ ಹಾಗೂ ಸವಾಲುಗಳಿಗೆ ಪ್ರಾಯೋಗಿಕ ರೀತಿಯಲ್ಲಿ ಪರಿಹಾರಗಳನ್ನು ಒದಗಿಸುವುದು ಯುವ ಸಬಲೀಕರಣ ಕಾರ್ಯಾಗಾರದ ಪ್ರಾಥಮಿಕ ಉದ್ದೇಶವಾಗಿದೆ.

ವಿಭಿನ್ನ ಕ್ಷೇತ್ರಗಳ ಪ್ರಭಾವಿ ವಾಗ್ಮಿಗಳು, ಕ್ಷೇತ್ರ ಪರಿಣತರು ಈ ಕಾರ್ಯಾಗಾರದಲ್ಲಿ ತಮ್ಮ ಜ್ಞಾನವನ್ನು ಹಂಚಿಕೊಳ್ಳಲಿದ್ದಾರೆ. ಜೊತೆಗೆ 3ಸಿ ಗೋಷ್ಠಿಗಳು, ಪ್ಯಾನೆಲ್ ಡಿಸ್ಕಶನ್‌ಗಳ ಮುಖಾಂತರ ಧರ್ಮ, ಯುವ ನಾಯಕತ್ವದ ಕುರಿತಂತೆ ವಿವೇಕಾನಂದರ ಚಿಂತನೆಗಳನ್ನು ಪರಿಣತರ ಮುಖಾಂತರ ತಿಳಿಸಲಾಗುವುದು.

ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತರು ಈ ಲಿಂಕ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. https://forms.gle/o48Qs9FRbCf5uCqT7. ಮಾಹಿತಿಗಾಗಿ 8438260205 ಸಂಪರ್ಕಿಸಲು ಕೋರಲಾಗಿದೆ.



ಮೈಸೂರಿನ ಕರ್ನಾಟಕ ಮುಕ್ತ ವಿವಿಯಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಕುಲಸಚಿವ ಪ್ರೊ ಕೆ.ಎಲ್.ಎನ್.ಮೂರ್ತಿ, ಅಂಬೇಡ್ಕರ್ ಅಧ್ಯಯನ ಪೀಠದ ಸಂಯೋಜನಾಧಿಕಾರಿ ಡಾ.ಶಿವಕುಮಾರ ಸ್ವಾಮಿ, ಸಹಾಯಕ ಕುಲಸಚಿವ ನಾಗೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಸುರಂಗ ಕುಸಿತದ ಸ್ಥಳಕ್ಕೆ ಪ್ರಧಾನಿ ಮೋದಿ ಕಚೇರಿಯ ನಿಯೋಗ ಭೇಟಿ; ಪರಿಶೀಲನೆ



ಉತ್ತರಕಾಶಿ: ಪ್ರಧಾನಿ ನರೇಂದ್ರ ಮೋದಿ ಅವರ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಕುಮಾರ್ ಮಿಶ್ರಾ ನೇತೃತ್ವದ ನಿಯೋಗ ಸೋಮವಾರ ಉತ್ತರಖಂಡದ ಉತ್ತರಕಾಶಿಯಲ್ಲಿರುವ ಸಿಲ್ಕ್ಯಾರಾ ಸುರಂಗ ಕುಸಿತದ ಸ್ಥಳಕ್ಕೆ ಭೇಟಿ ನೀಡಿ, ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದೆ. ಸುರಂಗ ಕುಸಿತದಿಂದ ಒಳಗಡೆ ಸಿಲುಕಿರುವ 41 ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಇಂದು 16ನೇ ದಿನಕ್ಕೆ ಕಾಲಿಟ್ಟಿದ್ದು, ಕಾರ್ಮಿಕರನ್ನು ರಕ್ಷಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ಮಿಶ್ರಾ ಪರಿಶೀಲಿಸಿದರು.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಮತ್ತು ಉತ್ತರಾಖಂಡ ಮುಖ್ಯ ಕಾರ್ಯದರ್ಶಿ ಎಸ್.ಎಸ್.ಸಂಧು ಅವರು ಪ್ರಮೋದ್ ಕುಮಾರ್ ಮಿಶ್ರಾ ಅವರೊಂದಿಗೆ ಸುರಂಗದ ಒಳಗಿನ ಕಾಮಗಾರಿಯನ್ನು ಪರಿಶೀಲಿಸಿದರು.


ಸುರಂಗದೊಳಗೆ ಸಿಲುಕಿರುವ ಕಾರ್ಮಿಕರಿಗೆ ಕಳುಹಿಸಿದ ಆಹಾರ ಪದಾರ್ಥಗಳ ಬಗ್ಗೆಯೂ ಪ್ರಧಾನ ಕಾರ್ಯದರ್ಶಿ ವಿಚಾರಿಸಿದರು. ಅಲ್ಲದೆ ಸಿಕ್ಕಿಬಿದ್ದ ಕಾರ್ಮಿಕರು ಮತ್ತು ಅವರ ಕುಟುಂಬಗಳೊಂದಿಗೆ ಮಿಶ್ರಾ ಮಾತನಾಡಿದರು. ಆಗರ್ ಯಂತ್ರದ ಎಲ್ಲಾ ಅವಶೇಷಗಳನ್ನು ತೆಗೆದುಹಾಕಲಾಗಿದೆ ಮತ್ತು ಸಿಕ್ಕಿಬಿದ್ದ ಕಾರ್ಮಿಕರನ್ನು ತಲುಪಲು ಕೈಯಿಂದಲೇ ಕೊರೆಯುವಿಕೆಯ ಕೆಲಸ ಕೆಲವೇ ಗಂಟೆಗಳಲ್ಲಿ ಪ್ರಾರಂಭವಾಗಲಿದೆ ಎಂದು ಸೂಕ್ಷ್ಮ ಸುರಂಗ ತಜ್ಞ ಕ್ರಿಸ್ ಕೂಪರ್ ಇಂದು ಬೆಳಗ್ಗೆ ಹೇಳಿದ್ದಾರೆ. ಪೈಪ್‌ನೊಳಗೆ ಸಿಲುಕಿದ್ದ ಸುರಂಗ ಕೊರೆಯಲು ಬಳಸುತ್ತಿದ್ದ ಆಗರ್ ಯಂತ್ರವನ್ನು ಸೋಮವಾರ ಬೆಳಗ್ಗೆ ಪ್ಲಾಸ್ಮಾ ಕಟ್ಟರ್ ಬಳಸಿ ಕತ್ತರಿಸಿ ತೆಗೆಯಲಾಗಿದೆ.

ತಪಾಸಣಾ ಶಿಬಿರ

ಮೈಸೂರು, ನ. 27– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನ. 27 ರಿಂದ ಡಿ. 2 ರವರೆಗೆ ಬೆಳಿಗ್ಗೆ 10 ರಿಂದ 2 ಹಾಗೂ ಸಂಜೆ 4 ರಿಂದ 6 ರವರೆಗೆ ಉಚಿತ ಸ್ತ್ರೀರೋಗ ಮತ್ತು ಪ್ರಸೂತಿ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಸ್ತ್ರೀರೋಗ ತಜ್ಞರಾದ ವೈದ್ಯರಾದ ಡಾ|| ಗೀತಾ ಹೆಚ್.ಎನ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಮುಟ್ಟಿನ ಮತ್ತು ಪ್ರೌಢಾವಸ್ಥೆಯ ಸಮಸ್ಯೆಗಳು, ಬಿಳಿ ವಿಸರ್ಜನೆ, ಹೊಟ್ಟೆನೋವು, ಬಂಜೆತನ, ಸ್ತನದಲ್ಲಿ ನೋವು, ಅಂಡಾಶಯದ ಚೀಲಗಳು, ಥೈರಾಯ್ಡ್ ಅಸ್ವಸ್ಥತೆಗಳು, ಗರ್ಭಾವಸ್ಥೆಯ ತಪಾಸಣೆ, ಇತರ ಸ್ತ್ರೀರೋಗ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ಸಂವಿಧಾನ ಸಮರ್ಪಣಾ ದಿನಾಚರಣೆಯಂದು ಮಂತ್ರ ಮಾಂಗಲ್ಯದಡಿ ಮದುವೆಯಾದ ಚಾಮರಾಜನಗರ ಎಡಿಸಿ



ಮೈಸೂರು, ನ. 27– ಸಂವಿಧಾನ ಸಮರ್ಪಣಾ ದಿನಾಚರಣೆ ಅಂಗವಾಗಿ ನಗರದ ಖಾಸಗಿ ಹೋಟೆಲಿನಲ್ಲಿ ಭಾನುವಾರ ಚಾಮರಾಜನಗರದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ಎಲ್‌ಎಲ್‌ಬಿ ಓದುತ್ತಿರುವ ಎಂ.ಆರ್. ಹರೀಶ್ ಕುಮಾರ್ ಅವರ ವಿವಾಹ ನೆರವೇರಿತು. ಕುವೆಂಪು ಅವರ ಮಂತ್ರ ಮಾಂಗಲ್ಯದಡಿ ನೆರವೇರಿತು.

ಇದಕ್ಕೂ ಮೊದಲು ಅವರು ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಕುವೆಂಪು ಭಾವಚಿತ್ರಗಳಿಗೆ ಪುಷ್ಪಾರ್ಪಣೆ ನೆರವೇರಿಸಿದ ನಂತರ ಹಾರ ಬದಲಾಯಿಸಿಕೊಂಡರು.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕೆಂಗಲ್ ಗ್ರಾಮದಲ್ಲಿ ಶಿಕ್ಷಕರಾಗಿದ್ದ ಈ ಇಬ್ಬರ ಪರಿಚಯ ಸ್ನೇಹವಾಗಿ, ಪ್ರೇಮಿಗಳಾಗಿ ಈಗ ಮದುವೆಯಾಗುವ ಮೂಲಕ ಒಂದಾದರು.

ಗೀತಾ ಅವರ ಹೆತ್ತವರಿಲ್ಲದ ಕಾರಣ ಅವರ ಚಿಕ್ಕಪ್ಪ, ನಿವೃತ್ತ ಸೈನಿಕ ಚೆನ್ನಬಸಪ್ಪ ಹುಡೇದ ಹಾಗೂ ಅವರ ಚಿಕ್ಕಮ್ಮ ಲಕ್ಷ್ಮಿ ಅಲ್ಲದೆ ಹರೀಶ್ ಕುಮಾರ್ ಅವರ ತಂದೆ ಜಿ.ರುದ್ರಪ್ಪ ಹಾಗೂ ತಾಯಿ ಪಾರ್ವತಮ್ಮ ವೇದಿಕೆ ಮೇಲಿದ್ದು ವಧು–ವರನನ್ನು ಆಶೀರ್ವದಿಸಿದರು. ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಅವರು ಮಂತ್ರ ಮಾಂಗಲ್ಯದ ಪ್ರತಿಜ್ಞಾವಿಧಿಯನ್ನು ಮದುಮಕ್ಕಳಿಗೆ ಹಾಗೂ ನೆರೆದವರಿಗೆ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ನಂತರ ಅವರು ಮಾತನಾಡಿ, 1983ರಲ್ಲಿ ಪುರೋಹಿತರ ನೆರವಿಲ್ಲದೆ ರಾಹುಕಾಲದಲ್ಲಿ ಮದುವೆಯಾದೆ. ನನ್ನ ಮೂರು ಮಕ್ಕಳ ಮದುವೆಯನ್ನು ವಚನ ಹಾಗೂ ಮಂತ್ರ ಮಾಂಗಲ್ಯದ ಮೂಲಕ ಮಾಡಿದೆ. ಎಲ್ಲರೂ ಚೆನ್ನಾಗಿದ್ದೇವೆ. ವಚನ ಇಲ್ಲವೆ ಮಂತ್ರ ಮಾಂಗಲ್ಯದ ಮೂಲಕವೇ ನೀವು ಮದುವೆ ಮಾಡಿ. ಈ ಮೂಲಕ ವೈದಿಕ ಪರಂಪರೆ ಧಿಕ್ಕರಿಸಿ ಎಂದು ಸಲಹೆ ನೀಡಿದರು.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಕೊಂಚಗೇರಿ ಗ್ರಾಮದ ಗೀತಾ ಹುಡೇದ ಹಾಗೂ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಮರಡಿಹಳ್ಳಿಯ ಹರೀಶ್ ಕುಮಾರ್ ಅವರು ಮದುವೆಯಾಗುವ ಮೂಲಕ ಪ್ರಾದೇಶಿಕ ಅಂತರ ಕಡಿಮೆ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜಿ.ಪ್ರಭು ಹಾಗೂ ವಸಂತ್ ಮಾಧವ ಅವರು ಮದುವೆಗೆ ಸಂಬಂಧಿಸಿದ ಹಾಡುಗಳನ್ನು ಹಾಡಿದರು. ಶಾಸಕರಾದ ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಎನ್.ಮಹೇಶ್, ಬಾಲರಾಜ್, ನಿರಂಜನ್, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಮೈಸೂರು ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ.ಗಾಯತ್ರಿ, ಶಂಕರ ದೇವನೂರ, ಡಾ.ಮಾದೇವ ಭರಣಿ, ಶಾಸ್ತ್ರೀಯ ಅತ್ಯುನ್ನತ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ ಹಾಜರಿದ್ದರು.

ಭಾರತದ ಬೆಳವಣಿಗೆಗೆ ತಂತ್ರಜ್ಞಾನ ಬಹಳ ಮುಖ್ಯ

ಮೈಸೂರು ವಿವಿ ವಿಜ್ಞಾನಿ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಪ್ರೊ.ಸೋನರ್ ನಂದಪ್ಪ ಅಭಿಮತ



ಮೈಸೂರು, ನ.27 – ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ ಹಾಗೂ ಭೌತಶಾಸ್ತ್ರ ವಿಭಾಗಗಳ ವತಿಯಿಂದ 'ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು' ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಪ್ರೊ ಸೋನರ್ ನಂದಪ್ಪ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ, ಅಭಿವೃದ್ಧಿ ಹೊಂದುತ್ತಿರುವ ಭಾರತಕ್ಕೆ ತಂತ್ರಜ್ಞಾನ ಬಹಳ ಮುಖ್ಯ. ಆ ನಿಟ್ಟಿನಲ್ಲಿ ಕಬ್ಬಿಣದ ಕಡಲೆಯಂತಿರುವ ಗಣಿತ ಮತ್ತು ಭೌತಶಾಸ್ತ್ರ ವಿಷಯಗಳನ್ನು ಅರ್ಥೈಸುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸಿದೆ. ಈ ರೀತಿಯ ತಂತ್ರಜ್ಞಾನ ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಆಸಕ್ತಿಯನ್ನು ಉಂಟುಮಾಡುವುದರ ಜೊತೆಗೆ ಹೊಸ ವಿಚಾರಗಳನ್ನು ತಿಳಿಸಿಕೊಡುತ್ತಿವೆ ಎಂದು ಹೇಳಿದರು.

ಹಿರಿಯ ಪ್ರೊಫೆಸರ್ ಹಾಗೂ ಸಂಶೋಧನಾ ಅಭಿವೃದ್ಧಿ ವಿಭಾಗದ ನಿರ್ದೇಶಕರಾದ ಡಾ.ಪ್ರದೀಪ್ ಜಿ.ಸಿದ್ದೇಶ್ವರ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶಗಳನ್ನು ನೀಡಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಆಸಕ್ತಿಯ ವಿಷಯಗಳನ್ನು ಆಯ್ದುಕೊಂಡು ಅಭ್ಯಸಿಸಬಹುದು. ವಿಜ್ಞಾನ, ವ್ಯವಹಾರ, ಹಾಗೂ ಮಾನವಿಕ ವಿಷಯಗಳ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ಅವುಗಳ ಪರಿಚಯವು ಆಗುತ್ತದೆ. ವಿಜ್ಞಾನ ವಿಷಯಗಳನ್ನು ಬಿಎಸ್ಸಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಯಾವುದೇ ವಿದ್ಯಾರ್ಥಿಗಳು ಸಹ ಅಭ್ಯಸಿಸಬಹುದು ಎಂದು ವಿವರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಸ್ವಾಗತಿಸಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಶೈಕ್ಷಣಿಕ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ಎಸ್, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸುಮತಿ ಎಂ.ಪಿ, ವಿವಿಧ ವಿಭಾಗದ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಭೀಮ ಬಳಗದ ವತಿಯಿಂದ ವಿಶ್ವಜ್ಞಾನಿ ಡಾ.ಅಂಬೇಡ್ಕರ್ ಪ್ರತಿಮೆ, ಗೋಪುರ ಉದ್ಘಾಟನೆ



ಮೈಸೂರು, ನ. 27– ಕುವೆಂಪುನಗರ ಆದಿಚುಂಚನಗಿರಿ ಮುಖ್ಯರಸ್ತೆಯ ಅಶೋಕಪುರಂ ಪೊಲೀಸ್ ಠಾಣೆಯ ಎದುರಿನ ಉದ್ಯಾನವನದಲ್ಲಿ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶ್ವಜ್ಞಾನಿ ಬಾಬಾ ಸಾಹೇಬ್ ಡಾ||ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ ಮತ್ತು ಗೋಪುರ ಉದ್ಘಾಟನೆ ನೆರವೇರಿತು.

ಸಂಸದ ವಿ.ಶ್ರೀನಿವಾಸ ಪ್ರಸಾದ್, ಅಂಬೇಡ್ಕರ್ ಪ್ರತಿಮೆಯನ್ನು ಉದ್ಘಾಟಿಸಿ ಭಾರತ ಸಂವಿಧಾನದ ಪೀಠಿಕೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನಂತರ ಭಾರತದ ಸಂವಿಧಾನ ಜಗತ್ತಿನ ಅತ್ಯಂತ ಶ್ರೇಷ್ಠವಾದ ಸಂವಿಧಾನ. ಅದನ್ನು ಇಂದು ನಮಗೆ ನಾವೇ ಒಪ್ಪಿಸಿಕೊಂಡ ದಿನವೇ ಸಂವಿಧಾನ ದಿನವಾಗಿದೆ. ರಾಜಕೀಯ ಮುಖಂಡರು ಸಂವಿಧಾನದ ವಿಷಯವನ್ನು ತಮ್ಮ ಸ್ವಾರ್ಥಕ್ಕಾಗಿ ಗಲ್ಲಿ ಗಲ್ಲಿಗಳಲ್ಲಿ, ಬೀದಿ ಬೀದಿಗಳಲ್ಲಿ ಮಾತನಾಡುತ್ತಿರುವುದು ವಿಷಾದನೀಯ ಸಂಗತಿ. ಸಂವಿಧಾನಕ್ಕೆ ತನ್ನದೇ ಆದ ಘನತೆ ಮತ್ತು ಶ್ರೇಷ್ಠತೆ ಇದೆ. ಮೊದಲು ಸಂವಿಧಾನವನ್ನು ಓದಿ ಅದನ್ನು ಸಂಪೂರ್ಣ ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವವರು ಮುಂದಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಸಂವಿಧಾನ ದಿನಾಚರಣೆ ನಮ್ಮೆಲ್ಲರ ಬಾಳಿಗೆ ಸುದಿನ. ಇಂತಹ ಶ್ರೇಷ್ಠ ಸಂವಿಧಾನವನ್ನು ನಾವೆಲ್ಲರೂ ಓದಿ ಅರ್ಥ ಮಾಡಿಕೊಳ್ಳಬೇಕೆಂದು ತಿಳಿಸಿದರು. ವೇದಿಕೆಯಲ್ಲಿ ನಿಕಟಪೂರ್ವ ಮಹಾಪೌರರಾದ ಶಿವಕುಮಾರ್, ಮಾಜಿ ನಗರ ಪಾಲಿಕೆ ಸದಸ್ಯ ಎಂ.ಸಿ.ರಮೇಶ್, ಭೀಮ ಬಳಗದ ಅಧ್ಯಕ್ಷ ಷಣ್ಮುಖ, ಭೀಮ ಬಳಗದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಮುಖಂಡರಾದ ವಿ.ರಾಮಸ್ವಾಮಿ, ಮಾಜಿ ಮಹಾಪೌರ ಪುರುಷೋತ್ತಮ್, ಅಶೋಕಪುರಂ ಆದಿಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಸಿದ್ದರಾಜು (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಮಾಜಿ ಉಪಾಧ್ಯಕ್ಷ ಸಿ.ಎಂ.ಮಹಾಲಿಂಗು, ಸಮಾಜ ಸೇವಕ ಇರ್ಫಾನ್, ಭೀಮ ಬಳಗದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಅಂಬೇಡ್ಕರ್ ಅಭಿಮಾನಿ ಬಳಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಿಡಿಲು ಬಡಿದು ನಾಲ್ವರು ಸಾವು

ಭೋಪಾಲ್: ಮಧ್ಯಪ್ರದೇಶದ ವಿವಿಧ ಸ್ಥಳಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ ಸಿಡಿಲು ಬಡಿದು ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು ಓರ್ವ ಬಾಲಕ ಗಂಭೀರವಾಗಿ ಗಾಯಗೊಂಡಿದ್ದಾನೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಭಾನುವಾರ ರಾಜ್ಯದ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗಿದೆ. ಧಾರ್ ಜಿಲ್ಲೆಯ ಉಮರ್ಬನ್ ಗ್ರಾಮದಲ್ಲಿ ಭಾನುವಾರ ಸಂಜೆ ದಂಪತಿ ಮತ್ತು ಅವರ ಅಪ್ರಾಪ್ತ ಮಗನೊಂದಿಗೆ ಮೋಟಾರ್ ಬೈಕ್‌ನಲ್ಲಿ ಮನೆಗೆ ಮರಳುತ್ತಿದ್ದಾಗ ಸಿಡಿಲು ಬಡಿದಿದೆ.

ರೈತರ ಸಮಸ್ಯೆಗಳ ಪರಿಹಾರಕ್ಕೆ ದುಂಡುಮೇಜಿನ ಸಭೆ ನಡೆಸಿ

ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸಲಹೆ

ಶಾಸಕರ ಭವನದಲ್ಲಿ ಸಭಾಂಗಣ ಕೊಡಿಸಿ, ಸಂಬಂಧಪಟ್ಟ ಮಂತ್ರಿಗಳನ್ನು ಕರೆತರುವ ಭರವಸೆ



ಮೈಸೂರು, ನ. 27– ಪ್ರಸ್ತುತ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ದುಂಡು ಮೇಜಿನ ಸಭೆ ನಡೆಸುವಂತೆ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಸಲಹೆ ಮಾಡಿದರು.

ಜಗನ್ಮೋಹನ ಅರಮನೆಯಲ್ಲಿ ಭಾನುವಾರ ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವದ ಮೂರನೇ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇದಕ್ಕಾಗಿ ಬೆಂಗಳೂರಿನ ಶಾಸಕರ ಭವನದ ಸಭಾಂಗಣದಲ್ಲಿ ಜಾಗ ಕೊಡಿಸುತ್ತೇನೆ. ಅಲ್ಲದೇ ಸಂಬಂಧಪಟ್ಟ ಮಂತ್ರಿಗಳನ್ನು ಸಭೆಗೆ ಕರೆತರುವ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ರೈತರು ಈಗ ಬೆಳೆ ಮತ್ತು ಬೆಲೆ ಬಿಟ್ಟರೆ ಏನನ್ನೂ ಕೇಳುತ್ತಿಲ್ಲ. ಇದರಿಂದಾಗಿ ಸರ್ಕಾರಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಮೊದಲೆಲ್ಲಾ ರೈತ ಸಂಘ, ದಲಿತ ಸಂಘರ್ಷ ಸಮಿತಿ ಎಂದರೆ ಎಲ್ಲರೂ ಹೆದರುತ್ತಿದ್ದರು. ವಿದ್ಯಾರ್ಥಿ ಸಂಘಟನೆಗಳು ಜೋರಾಗಿದ್ದವು. ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಕೆ.ಎಸ್. ಪುಟ್ಟಣ್ಣಯ್ಯ ಮೊದಲಾದ ನಾಯಕರ ಮಾತಿಗೆ ಬೆಲೆ ಇತ್ತು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಸಂಘಟನೆಗಳು ಒಡೆದು ಚೂರಾಗಿರುವುದು ಇದಕ್ಕೆ ಕಾರಣ ಎಂದು ಅವರು ವಿಷಾದಿಸಿದರು.

ಈಗ ರಾಜಕಾರಣಿಗಳು ಅಧಿಕಾರಿಗಳ ಗುಲಾಮರಾಗಿದ್ದಾರೆ. ಯಾವ್ಯಾವುದೋ ರಾಜ್ಯಗಳಿಂದ ಬರುವ ಅಧಿಕಾರಿಗಳು ಒಂದಷ್ಟು ಲೂಟಿ ಹೊಡೆದು ಹೋಗುತ್ತಿದ್ದಾರೆ. ರಾಜಕಾರಣಿಗಳು ವೋಟು–ನೋಟು ಎಂದು ಓಡಾಡುತ್ತಿದ್ದಾರೆ. ಆಳುವ ಸರ್ಕಾರ ತಪ್ಪು ಮಾಡಿದಾಗ ಪ್ರಶ್ನಿಸಬೇಕಾದ ವಿರೋಧ ಪಕ್ಷಗಳು ಅಡ್ಜಸ್ಟ್‌ಮೆಂಟ್ ರಾಜಕಾರಣ ಮಾಡುತ್ತಿವೆ ಎಂದು ಅವರು ಕಿಡಿಕಾರಿದರು.

ಹಸಿರುಶಾಲು ಎಂದರೇ ಹಸಿದವನಿಗೆ ಅನ್ನ ನೀಡುವವನು ಎಂದರ್ಥ. ಹೀಗಾಗಿ ರೈತ, ದಲಿತ, ವಿದ್ಯಾರ್ಥಿ ಸಂಘಟನೆಗಳ ಆ ಕಾಲ ಮತ್ತೆ ಬರಬೇಕು. ಈ ಸಂಘಟನೆಗಳು ಪುನರ್ ಸಂಘಟನೆ ಆಗುವುದು ಬದುಕಿಗೆ ಅನಿವಾರ್ಯ ಎಂದರು.

ದೇಶದ ಮೊದಲ ಪ್ರಧಾನಿ ನೆಹರು ಅವರು ಪಂಚವಾರ್ಷಿಕ ಯೋಜನೆಗಳ ಮೂಲಕ ಜನರಿಗೆ ನೆರವಾದರು. ಎರಡನೇ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜೈ ಜವಾನ್, ಜೈ ಕಿಸಾನ್ ಎಂದು ರೈತರು ಹಾಗೂ ಸೈನಿಕರ ಮಹತ್ವವನ್ನು ಸಾರಿದರು.

ಡಿ. ದೇವರಾಜ ಅರಸರು ಭೂಸುಧಾರಣೆ ಕಾನೂನು ಜಾರಿಗೆ ತಂದರು. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಅರಸರನ್ನೇ ನಾವು ಮರೆತುಬಿಟ್ಟಿದ್ದೇವೆ ಎಂದರು.

ರೈತ ಪರ್ವ ಸಂಸ್ಥಾಪಕ ಅಧ್ಯಕ್ಷ ಟಿ.ವಿ. ಅರುಣ್ ಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿ, ರೈತರನ್ನು ಅಧಿಕಾರಿಗಳು, ದಲ್ಲಾಳಿಗಳಿಂದ ಕಾಪಾಡಬೇಕು. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ದರ ನಿಗದಿ ಮಾಡಬೇಕು. ಸಹಾಯಧನ ದುರುಪಯೋಗ ತಪ್ಪಿಸಬೇಕು ಎಂದು ಆಗ್ರಹಿಸಿದರು.

ರೈತರ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕಾದರೆ ರೈತರು ಒಗ್ಗೂಡಿ ಹೋರಾಟ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ, ಬೆಂಗಳೂರಿನ ಉದ್ಯಮಿ ವಿಶ್ವನಾಥ್, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್, ಎಪಿಎಂಸಿ ದಲ್ಲಾಳಿ ಸಂಘದ ಅಧ್ಯಕ್ಷ ಮಿಲಿಟರಿ ಮಹದೇವಪ್ಪ ಮುಖ್ಯ ಅತಿಥಿಗಳಾಗಿದ್ದರು. ರೈತ ಪರ್ವ ರಾಜ್ಯ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ ಅಧ್ಯಕ್ಷ ಶಿವಣ್ಣ ಮೊದಲಾದವರು ಇದ್ದರು.

ಸೊಳ್ಳೇಪುರ ಏಕಲವ್ಯ ಮಾದರಿ ವಸತಿ ಶಾಲೆ

ಪ್ರಾಂಶುಪಾಲರ ವರ್ಗಾವಣೆ ಖಂಡಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಹೆಚ್.ಡಿ.ಕೋಟೆ, ನ.27– ತಾಲೂಕಿನ ಸೊಳ್ಳೇಪುರ ದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆ ಪ್ರಾಂಶುಪಾಲ ಕೆ.ಪಿ.ಚಂದ್ರು ಅವರನ್ನು ಬೇರೆಡೆ ವರ್ಗಾವಣೆ ಮಾಡಿರುವುದನ್ನು ಖಂಡಿಸಿ ವಸತಿ ಶಾಲೆ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ವಸತಿ ಶಾಲೆ ಎದುರು ತರಗತಿ ಬಹಿಷ್ಕರಿಸಿ ಜಮಾಯಿಸಿದ ಶಾಲೆಯ 396ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಾಂಶುಪಾಲ ಕೆ.ಪಿ.ಚಂದ್ರು ಅವರ ವರ್ಗಾವಣೆ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು ಬರುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ವಿದ್ಯಾರ್ಥಿಗಳಾದ ತರುಣ್, ಕೀರ್ತನಾ ಮಾತನಾಡಿ, ನಮ್ಮ ವಸತಿ ಶಾಲೆ ಪ್ರಾಂಶುಪಾಲ ಕೆ.ಪಿ. ಚಂದ್ರು ಸರ್ ಅವರನ್ನು ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ವರ್ಗಾವಣೆ ಮಾಡಲಾಗಿದೆ. ಚಂದ್ರು ಸರ್ ಶಾಲೆಗೆ ಬಂದು 8 ತಿಂಗಳು ಕಳೆದಿದ್ದು, ಶಾಲೆ ಪರಿಸ್ಥಿತಿ ಸುಧಾರಿಸಿದೆ. ಅವರ ಮಾರ್ಗದರ್ಶನದಲ್ಲಿ ಉತ್ತಮ ಫಲಿತಾಂಶ ದೊರಕುತ್ತಿದೆ. ಶಾಲೆಯಲ್ಲಿ ಓದದ ಮಕ್ಕಳು ಸಹ ಉತ್ತಮವಾಗಿ ಓದಲು ಆರಂಭಿಸಿದ್ದಾರೆ. ಆದರೆ ಇದೀಗ ಅವರ ವರ್ಗಾವಣೆಯಾಗಿರುವುದರಿಂದ ಶಾಲೆಯ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ. ಚಂದ್ರು ಸರ್ ಬಂದ ಬಳಿಕ ಹಲವು ಬದಲಾವಣೆಗಳಾಗಿವೆ. ಅಲ್ಲದೇ ಮುಂದಿನ ದಿನಗಳಲ್ಲಿ ನಮ್ಮ ವಸತಿ ಶಾಲೆ ಮಾದರಿ ಶಾಲೆಯಾಗುವುದರಿಂದ ಅವರು ನಮ್ಮ ಶಾಲೆಯಲ್ಲೇ ಮುಂದುವರೆಯಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಶಾಲೆಗೆ ಜಿಲ್ಲಾ ಸಮನ್ವಯಾಧಿಕಾರಿ ಮುನಿರಾಜ್ ಆಗಮಿಸಲಿದ್ದಾರೆ ಎಂಬ ಮಾಹಿತಿ ಪಡೆದ ಶಿಕ್ಷಕರು, ಪ್ರತಿಭಟನಾನಿರತ ಮಕ್ಕಳ ಮನವೊಲಿಸಿ ಅವರ ಬಳಿ ಮಾತನಾಡಲು ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದ ಬಳಿಕ ಮಕ್ಕಳು ಪ್ರತಿಭಟನೆ ನಿಲ್ಲಿಸಿ ಶಾಲೆಯ ತಮ್ಮ ಕೊಠಡಿಗಳಿಗೆ ತೆರಳಿದರು.

ಶಾಲೆಗೆ ಆಗಮಿಸಿದ ಸಮನ್ವಯಾಧಿಕಾರಿ ಮುನಿರಾಜ್ ಮಾಹಿತಿ ಪಡೆದು ಮಾತನಾಡಿ, ಪ್ರಾಂಶುಪಾಲ ಚಂದ್ರು ತಮ್ಮ ಸ್ವಇಚ್ಛೆಯಿಂದ ಬೇರೆಡೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅವರ ಮೇಲಿರುವ ಪ್ರೀತಿಯಿಂದಾಗಿ ಮಕ್ಕಳು ಈ ರೀತಿ ಪ್ರತಿಭಟಿಸಿದ್ದಾರೆ. ಇದು ಸರ್ವೇ ಸಾಮಾನ್ಯ. ಶಿಕ್ಷಕರನ್ನು ಅಚ್ಚು ಕೊಂಡ ವಿದ್ಯಾರ್ಥಿಗಳು ಈ ರೀತಿ ಮಾಡುತ್ತಾರೆ. ಬಹುತೇಕ ಶಾಲೆಗಳಲ್ಲಿ ಈ ರೀತಿಯ ಘಟನೆಗಳನ್ನು ಕೇಳಿದ್ದೇವೆ. ಅದೇ ರೀತಿ ಇಲ್ಲಿಯೂ ನಡೆದಿದೆ. ಮುಂದಿನ ದಿನಗಳಲ್ಲಿ ಮುಂಬರುವ ಶಿಕ್ಷಕರು ಮತ್ತು ಪ್ರಾಂಶುಪಾಲರು ಸಹ ಈ ವಿದ್ಯಾರ್ಥಿಗಳ ಪ್ರೀತಿ ಗಳಿಸುತ್ತಾರೆ ಎಂದು ತಿಳಿಸಿದರು.

ಇಲ್ಲಿನ ವಸತಿ ಶಾಲೆ ಪ್ರಾಂಶುಪಾಲ ಚಂದ್ರು ಅವರು ವರ್ಗಗೊಂಡ ಕಾರಣ ಇಲ್ಲಿರುವ ಶಿಕ್ಷಕರನ್ನೇ ಪ್ರಭಾರ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಯಾವುದೇ ಶಿಕ್ಷಕರು ಮುಂದೆ ಬಾರದ ಕಾರಣ ಹುಣಸೂರು ತಾಲೂಕಿನ ಧರ್ಮಾಪುರ ಶಾಲೆ ಪ್ರಾಂಶುಪಾಲ ರಂಗರಾಜು ಅವರನ್ನು ಪ್ರಭಾರ ಪ್ರಾಂಶುಪಾಲರನ್ನಾಗಿ ನೇಮಿಸಲಾಗಿದೆ. ಆದರೆ ಅವರು ಭ್ರಷ್ಟ ಪ್ರಾಂಶುಪಾಲರು, ಅಲ್ಲದೇ ಇದೇ ಶಾಲೆಯಿಂದ ಅಮಾನತು ಮಾಡಿ ಕಳುಹಿಸಲಾಗಿತ್ತು ಎಂದು ವಿದ್ಯಾರ್ಥಿಗಳ ತಲೆಗೆ ಯಾರೋ ತುಂಬಿದ ಹಿನ್ನೆಲೆ ಈ ಘಟನೆ ನಡೆದಿದೆ. ಈ ಸಂಬಂಧ ಪ್ರಾಂಶುಪಾಲರು ಹಾಗೂ ಶಿಕ್ಷಕರ ಸಭೆ ಕರೆದು ಚರ್ಚಿಸಿ, ಇಂತಹ ಘಟನೆಗಳು ಮರುಕಳಿಸಬಾರದೆಂದು ಸೂಚಿಸಲಾಗಿದೆ.

–ಮುನಿರಾಜ್, ಜಿಲ್ಲಾ ಗಿರಿಜನ ಸಮನ್ವಯಾಧಿಕಾರಿ.

ಇಂದು ಶ್ರೀಕಂಠೇಶ್ವರ ಚಿಕ್ಕಜಾತ್ರೆ ಮಹೋತ್ಸವ



ನಂಜನಗೂಡು: ನಗರದ ಪುರಾಣ ಪ್ರಸಿದ್ಧ ಶ್ರೀಕಂಠೇಶ್ವರ ದೇವಾಲಯದಲ್ಲಿ ನ.28 ರಂದು ಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವ ಅದ್ಧೂರಿಯಾಗಿ ನಡೆಯಲಿದೆ.

ಜಾತ್ರೆ ಅಂಗವಾಗಿ ದೇವಾಲಯದಲ್ಲಿ ನ.21ರಿಂದ ಡಿ.2ರವರೆಗೆ 12 ದಿನಗಳ ಕಾಲ ಶ್ರೀಕಂಠೇಶ್ವರ ಸ್ವಾಮಿಗೆ ಶಾಸ್ತ್ರೋಕ್ತವಾಗಿ ಹಲವು ಉತ್ಸವ ಹಾಗೂ ವಿವಿಧ ಸೇವೆಗಳು ದೇವಾಲಯದ ಆಗಮಿಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ನಡೆಯಲಿದೆ. ಜಾತ್ರೆ ಆರಂಭ ದಿನವಾದ ನ.21ರಂದು ದೇವಾಲಯದಲ್ಲಿ ಶತಭಿಷ ನಕ್ಷತ್ರದಲ್ಲಿ ಶ್ರೀಕಂಠೇಶ್ವರನಿಗೆ ಅಂಕುರಾರ್ಪಣ ವೃಷಭಾಧಿವಾಸ ಪೂರ್ವಕ ಸೇವೆ ಆರಂಭಿಸಲಾಯಿತು. ನ.22ರಂದು ಪೂರ್ವಭಾದ್ರ ನಕ್ಷತ್ರದ ಮಕರ ಲಗ್ನದಲ್ಲಿ ಬೆಳಗ್ಗೆ 10.30 ರಿಂದ 11.30 ಗಂಟೆಗೆ ಸಲ್ಲುವ ಮಕರ ಲಗ್ನದಲ್ಲಿ ಧ್ವಜಾರೋಹಣ ಪೂರ್ವಕ ಭೇರಿತಾಡನಾ ಶಿಬಿರೋಹಣೋತ್ಸವ ಹಾಗೂ ಭಾನುವಾರ ವೃಷಭಾರೋಹಣೋತ್ಸವ ಮತ್ತು ಶಿವ ದಿಪೋತ್ಸವ ನಡೆಸಲಾಯಿತು.

ನ.28ರಂದು ಬೆಳಗ್ಗೆ 10.45 ರಿಂದ 11.45 ಗಂಟೆವರೆಗೆ (ಶ್ರೀಮನ್ನಹಾರಥಾ ರೋಹಣ) ಚಿಕ್ಕಜಾತ್ರಾ ಮಹೋತ್ಸವ ನಡೆಯಲಿದೆ. ಚಿಕ್ಕ ಜಾತ್ರೆಯಲ್ಲಿ ಮೊದಲಿಗೆ ಗಣಪತಿ ರಥ ನಂತರ ಚಂಡಿಕೇಶ್ವರ ರಥಗಳು ಹೊರಟ ನಂತರ ಸರ್ವಲಂಕಾರ ಭೂಷಿತ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಮತ್ತೊಂದು ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವ ನಡೆಸಲಾಗುವುದು. ಮೂರು ರಥಗಳು ನಗರದ ರಥದ ಬೀದಿಯಲ್ಲಿ 1.5 ಕಿಮೀ ಸಂಚರಿಸಿ ಸ್ವಸ್ಥಾನ ತಲುಪಲಿವೆ. ಈ ವೇಳೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರು ದೇವರ ದರ್ಶನ ಪಡೆದು ರಥ ಎಳೆದು ಸ್ವಾಮಿಗೆ ಜೈಕಾರ ಕೂಗಿ ಭಕ್ತಿಭಾವ ಪ್ರದರ್ಶಿಸುವರು. ಚಿಕ್ಕಜಾತ್ರೆ ಅಂಗವಾಗಿ ಭಕ್ತರಿಗೆ ದೇವಾಲಯದ ದಾಸೋಹ ಭವನದಲ್ಲಿ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿದೆ.

ನ.30ರಂದು ತೆಪ್ಪೋತ್ಸವ: ಕಪಿಲಾ ನದಿಯಲ್ಲಿ ತೇಲುವ ದೇವಾಲಯದಲ್ಲಿ ನ.30ರಂದು ಶ್ರೀಕಂಠೇಶ್ವರ ಹಾಗೂ ಪಾರ್ವತಿ ಅಮ್ಮನವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವ ನಡೆಸಲಾಗುವುದು. ಡಿ.2ರಂದು ಜಾತ್ರೆ ಕೊನೆ ವಿಧಿ ವಿಧಾನದಂತೆ ದೇವಾಲಯದಲ್ಲಿ ಮಹಾ ಸಂಪ್ರೋಕ್ಷಣೆ, ನಂದಿ ವಾಹನ ಉತ್ಸವ ಮತ್ತು ರಾತ್ರಿ ಶಯನೋತ್ಸವ ನಡೆಸಲಾಗುವುದು.

ಗಿರಿಜನರಿಗೆ ನಿರ್ಮಿಸಿರುವ ಮನೆ ಕಳಪೆ ಆರೋಪ

ನಿರ್ಮಿತಿ ಕೇಂದ್ರದ ವಿರುದ್ಧ ಕ್ರಮಕ್ಕೆ ಒತ್ತಾಯ



ಹುಣಸೂರು, ನ27– ಗಿರಿಜನ ಉಪ ಯೋಜನೆಯಡಿ ತಾಲೂಕಿನ ಮಂಗಳೂರು ಮಾಳದ ಜೇನು ಕುರುಬ ಹಾಡಿ ಕುಟುಂಬಗಳಿಗೆ ನಿರ್ಮಿಸಿ ಕೊಟ್ಟಿರುವ ಮನೆಗಳು ಸಂಪೂರ್ಣ ಶಿಥಿಲಗೊಂಡಿವೆ. ಕಳಪೆ ಗುಣಮಟ್ಟದ ವಸತಿ ನಿರ್ಮಿಸಿರುವ ನಿರ್ಮಿತಿ ಕೇಂದ್ರದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಲದೇ ಅಲ್ಲಿಯ ಮನೆಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕುಪತ್ರ ನೀಡಿ, ಹಾಡಿಯ ಜೇನು ಕುರುಬ ಗಿರಿಜನರನ್ನು ಮನೆ ಮಾಲೀಕರನ್ನಾಗಿ ಮಾಡುವಂತೆ ಒತ್ತಾಯಿಸಿ ಹುಣಸೂರಿನ ಗಿರಿಜನ ಅಭಿವೃದ್ಧಿ ಸಹಾಯಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು ಎಂದು ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ ತಿಳಿಸಿದರು.

ಮೂಲಸೌಕರ್ಯಗಳಿಲ್ಲದೆ ಡೇರೆಗಳಲ್ಲಿ ಬದುಕುತ್ತಿದ್ದ ಜೇನು ಕುರುಬ ಗಿರಿಜನ ಹಾಡಿ ಕುಟುಂಬಗಳಿಗೆ ವಸತಿ, ಇನ್ನಿತರ ಮೂಲಸೌಕರ್ಯ ಕಲ್ಪಿಸಲು, ಹಿಂದಿನ ಜಿಲ್ಲಾಧಿಕಾರಿಗಳು ವಿಶೇಷ ಆಸ್ಥೆ ವಹಿಸಿ ಮಂಗಳೂರು ಮಾಳ ಬಳಿಯ ಸರ್ವೇ ನಂ.90ರಲ್ಲಿ 2 ಎಕರೆ 34 ಗುಂಟೆ ಜಮೀನನ್ನು 2011ನೇ ಸಾಲಿನಲ್ಲಿ ಕಾಯ್ದಿರಿಸಿ, ಹುಣಸೂರಿನ ಇಓಗೆ ಹಸ್ತಾಂತರಿಸಲಾಗಿದೆ. 3 ವರ್ಷದ ಹಿಂದೆ ಮಂಗಳೂರು ಮಾಳದ ಜೇನು ಕುರುಬ ಗಿರಿಜನ ಹಾಡಿಯ 30 ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ಮನೆಗಳ ನಿರ್ಮಾಣದ ಗುತ್ತಿಗೆ ಪಡೆದಿದ್ದ ನಿರ್ಮಿತಿ ಕೇಂದ್ರ ಕಳಪೆ ಗುಣಮಟ್ಟದ ವಸತಿ ನಿರ್ಮಿಸಿದ್ದು, ಮನೆಗಳು ಸಂಪೂರ್ಣ ಶಿಥಿಲಗೊಂಡು ಮಳೆ ಬಂದರೆ ಸೋರುತ್ತಿವೆ. ಅವು ಯಾವುದೇ ವೇಳೆ ಬೀಳುವ ಆತಂಕದಿಂದಲೇ ಆ ಮನೆಗಳಲ್ಲೇ ಗಿರಿಜನ ಕುಟುಂಬಗಳು ಜೀವನ ಸಾಗಿಸುತ್ತಿವೆ. ಹಾಗಾಗಿ ಗಿರಿಜನರಿಗೆ ಕಳಪೆ ಗುಣಮಟ್ಟದ ಮನೆ ನಿರ್ಮಿಸಿ ಕೊಟ್ಟಿರುವ ನಿರ್ಮಿತಿ ಕೇಂದ್ರದ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಹಾಡಿಯಲ್ಲಿನ ಮನೆಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕುಪತ್ರ ನೀಡಿ ಮನೆಯ ಮಾಲೀಕರನ್ನಾಗಿ ಮಾಡುವಂತೆ ಆಗ್ರಹಿಸಿದರು.

ಮೂಲಸೌಕರ್ಯಗಳಿಂದ ವಂಚಿತರಾಗಿರುವ ಜೇನು ಕುರುಬ ಗಿರಿಜನರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಲು ಹುಣಸೂರಿನ ತಾಪಂ ಇಓ ಹಾಗೂ ಸಂಬಂಧಪಟ್ಟ ಗ್ರಾಪಂಗಳು ಆದ್ಯತೆ ಮೇರೆಗೆ ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದರೆ ಮಂಗಳೂರು ಮಾಳದ ಗಿರಿಜನ ಹಾಡಿ ಕುಟುಂಬಗಳ ಅಭಿವೃದ್ಧಿಗಾಗಿ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಜೇನು ಕುರುಬ ಗಿರಿಜನರ ಮಹಿಳಾ ಮುಖಂಡರಾದ ಲಕ್ಷ್ಮಮ್ಮ ಈರಮ್ಮ, ಪಟ್ಟಮ್ಮ, ತಿಮ್ಮಮ್ಮ ಸೇರಿದಂತೆ ಅನೇಕ ಗಿರಿಜನ ಮಹಿಳೆಯರು ಹಾಜರಿದ್ದರು.


ಹುಲಿ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ



ನಂಜನಗೂಡು, ನ.27– ತಾಲೂಕಿನ ತಾಂಡವಪುರದಲ್ಲಿ ಸೋಮವಾರ ಬೆಳಗ್ಗೆ ಹುಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.


ಗ್ರಾಮದ ಯುವಕರಾದ ರಘು, ರೇವಣ್ಣ ಹಾಗೂ ರೈತ ಮಹದೇವು ಬೆಳಗ್ಗೆ ತಮ್ಮ ಜಮೀನುಗಳಲ್ಲಿ ಕೆಲಸ ಮಾಡುವಾಗ ಹುಲಿ ಪ್ರತ್ಯಕ್ಷಗೊಂಡಿದೆ. ಈ ವೇಳೆ ಭಯಗೊಂಡ ಈ ಮೂವರು ಅಲ್ಲಿಂದ ಓಡಿ ಬಂದು ತಕ್ಷಣ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪ್ರತ್ಯಕ್ಷದರ್ಶಿಗಳಿಂದ ಮಾಹಿತಿ ಪಡೆದು ಹುಲಿ ಓಡಾಡಿರುವ ಮಾರ್ಗದಲ್ಲಿ ಹೆಜ್ಜೆ ಗುರುತುಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ಗ್ರಾಮದ ಮಹೇಶ ಹಾಗೂ ಕರಿಗೌಡರ ಜಮೀನುಗಳಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದೆ. ಇಲ್ಲಿ ಹುಲಿಯೂ ಇರಬಹುದು. ಆದರೆ ಚಿರತೆ ಮತ್ತು ಹುಲಿ ಎರಡೂ ಒಂದೇ ಕಡೆ ಇರುವುದಿಲ್ಲ. ಈ ಪ್ರದೇಶ ವ್ಯಾಪ್ತಿಯಲ್ಲಿ ಓಡಾಡುತ್ತಿರಬಹುದು. ಮೊನ್ನೆ ಹಳ್ಳಿದಿಡ್ಡಿಯಲ್ಲಿ ಹುಲಿ ಕರುವನ್ನು ಕೊಂದು ಹಾಕಿದೆ. ಹೀಗಾಗಿ ಹುಲಿ ಸೆರೆಗೆ ಬೋನು ಇರಿಸಲಾಗಿದೆ ಎಂದರು.

ತಾಂಡವಪುರ ಗ್ರಾಮದ ಸುತ್ತಮುತ್ತಲ ಗ್ರಾಮಸ್ಥರು ಜಮೀನುಗಳಿಗೆ ಹೋಗುವಾಗ ಒಂಟಿಯಾಗಿ ಹೋಗಬೇಡಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.



ನಂಜನಗೂಡು ತಾಲೂಕಿನ ದೇವರಾಯಶೆಟ್ಟಿಪುರದಲ್ಲಿ ನಡೆದ 14ನೇ ವರ್ಷದ ಶ್ರೀಮಲೆ ಮಹದೇಶ್ವರ ಆರಾಧನೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರನ್ನು ಡಾ.ಮಳವಳ್ಳಿ ಮಹದೇವಸ್ವಾಮಿ ಸನ್ಮಾನಿಸಿದರು. ಈ ವೇಳೆ ಗುಡ್ಡಪ್ಪ ಮಹೇಶ್, ಸ್ವಾಮಿಗೌಡ, ಮೋಹನ್, ಶಿವಣ್ಣ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಶ್ರೀತ್ರಿಪುರ ಸುಂದರಿ ಅಮ್ಮನವರ ಹುಂಡಿಯಲ್ಲಿ 31.31 ಲಕ್ಷ ರೂ.ಸಂಗ್ರಹ



ಮೂಗೂರು: ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಹುಂಡಿಯಲ್ಲಿ 31,31,875 ಲಕ್ಷ ರೂ. ಸಂಗ್ರಹವಾಗಿದೆ.

ಇಲ್ಲಿನ ನಾಡ ಕಚೇರಿಯ ಉಪ ತಹಸೀಲ್ದಾರ್ ಲಕ್ಷ್ಮಿ ಅವರ ನೇತೃತ್ವದಲ್ಲಿ ದೇವಾಲಯದ ಆವರಣದಲ್ಲಿ ನಡೆದ ಹುಂಡಿ ಎಣಿಕೆ ವೇಳೆ 31,31,875 ಲಕ್ಷ ರೂ. ದೊರೆತಿದ್ದು, ಅಮಾನ್ಯಗೊಂಡ ಸಾವಿರ, ಐನೂರು ನೋಟುಗಳ ಜೊತೆಗೆ 20 ಅಮೆರಿಕನ್ ಡಾಲರ್ ಸಹ ಸಿಕ್ಕಿದೆ. ಹುಂಡಿ ಎಣಿಕೆ ಬಳಿಕ ಹಣವನ್ನು ಮೂಗೂರಿನ ಎಸ್‌ಬಿಐ ಶಾಖೆಯ ದೇವಾಲಯದ ಖಾತೆಗೆ ಜಮಾ ಮಾಡಲಾಗಿದೆ ಎಂದು ಕಂದಾಯ ಇಲಾಖೆ ವಿಎ ಆನಂದ್ ತಿಳಿಸಿದರು.

ಹುಂಡಿಯಲ್ಲಿ ಬರೆದಿರುವ ಹಲವು ಪತ್ರಗಳು ದೊರೆತಿವೆ. ಈ ವೇಳೆ ಗ್ರಾಮ ಲೆಕ್ಕಿಗರಾದ ಸಂತೋಷ್, ಆನಂದ್, ಗೌಡರ ಎಂ.ಪಿ. ನಾಗರಾಜು, ಪಾರುಪತ್ತೆದಾರ ಎಂ.ಬಿ.ಸಾಗರ್, ಚೈತ್ರ, ಪದ್ಮಶ್ರೀ, ಶ್ರುತಿ, ಎಸ್‌ಬಿಐ ಶಾಖೆಯ ರವೀಂದ್ರನಾಥ ಶೆಟ್ಟಿಗಾರ್, ನೇಹಾ, ಕಾರ್ತಿಕ್, ಮೂಗೂರು ಉಪಠಾಣೆ ಹೇಮೇಶ್, ಗ್ರಾಮ ಸಹಾಯಕರು ಹಾಜರಿದ್ದರು.

ಬಾಬು ಜಗಜೀವನರಾಮ್ ಯುವ ಸೇನಾ ಟ್ರಸ್ಟ್ ಉದ್ಘಾಟನೆ



ನಂಜನಗೂಡು, ನ.27– ಪರಿಶಿಷ್ಟ ಜನಾಂಗದ ಯುವಕರು ಕುಲ ಕಸುಬುಗಳಿಗೆ ಮೀಸಲಾಗದೆ ವಿದ್ಯಾವಂತರಾಗಿ ಉನ್ನತ ಉದ್ದೆಗಳನ್ನು ಅಲಂಕರಿಸಬೇಕು. ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಸುಶಿಕ್ಷಿತರಾಗಿ ಉತ್ತಮ ಜೀವನ ನಡೆಸುವಂತಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ಅಶೋಕಪುರಂ ಬಡಾವಣೆಯಲ್ಲಿ ಬಾಬು ಜಗಜೀವನ ರಾಮ್ ಟ್ರಸ್ಟ್ ಉದ್ಘಾಟಿಸಿ ಮಾತನಾಡಿದ ಅವರು, ಟ್ರಸ್ಟ್ ಕಟ್ಟಡಕ್ಕೆ ನನ್ನ ತಂದೆ ಧ್ರುವನಾರಾಯಣ್ ಅವರು ತಮ್ಮ ಸಂಸದರ ನಿಧಿಯಿಂದ 5 ಲಕ್ಷ ಅನುದಾನ ನೀಡಿದ್ದಾರೆ. ಇಲ್ಲಿನ ಯುವಕರ ಆಶಯದಂತೆ ಕಟ್ಟಡದಲ್ಲಿ ಗ್ರಂಥಾಲಯ ನಿರ್ಮಾಣಕ್ಕೆ ಅನುದಾನ ನೀಡಿ ಸಂಪೂರ್ಣಗೊಳಿಸುತ್ತೇನೆ. ಯುವಕರು ಸೇವಾ ಟ್ರಸ್ಟ್ ಮೂಲಕ ಬಡಾವಣೆ ಜನರ ಆರೋಗ್ಯ ತಪಾಸಣೆ, ವಿದ್ಯಾರ್ಥಿಗಳಿಗೆ ನೆರವು ನೀಡುವ ಕಾರ್ಯಕ್ರಮಗಳನ್ನು ಮುಂದುವರೆಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ತಿಮ್ಮಯ್ಯ ಮಾತನಾಡಿ, ನೂತನವಾಗಿ ನಿರ್ಮಿಸಿರುವ ಟ್ರಸ್ಟ್ ಕಚೇರಿಯನ್ನು ಉತ್ತಮ ಕೆಲಸಕ್ಕೆ ಬಳಸಿಕೊಳ್ಳಿ. ಪರಿಶಿಷ್ಟ ಜನಾಂಗ ಶ್ರಮಿಕ ವರ್ಗವಾಗಿದ್ದು, ಯುವಕರು ಯಾವುದೇ ಕೆಟ್ಟ ಹವ್ಯಾಸಗಳಿಗೆ ಬಲಿಯಾಗದೆ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿರುವುದು ಸಂತೋಷ ತಂದಿದೆ. ಯುವಕರ ಆಶಯದಂತೆ ಬಡಾವಣೆಯಲ್ಲಿ ಗರಡಿ ಮನೆ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ನೀಡಿ ಯುವಕರ ಕುಸ್ತಿ ಮುಂತಾದ ಸಾಹಸ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಕಳಲೆ ಕೇಶವಮೂರ್ತಿ, ಸಿ.ಎಂ.ಶಂಕರ್, ನಗರಸಭೆ ಸದಸ್ಯರಾದ ಪ್ರದೀಪ್, ವಿಜಯಲಕ್ಷ್ಮಿ, ಮಂಗಳಮ್ಮ, ಟ್ರಸ್ಟ್ ಅಧ್ಯಕ್ಷ ನಿಂಗರಾಜು, ಚಂದ್ರು, ಶರಣ್ ಕುಮಾರ್, ಸುರೇಶ್, ರವಿ, ಬಿ. ರಾಜು, ಜಗದೀಶ್, ಸ್ವಾಮಿ, ಕೃಷ್ಣ, ದಾಸ್, ಮುಖಂಡರಾದ ದೇವರಾಜು, ಸ್ವಾಮಿ, ರಾಜೇಶ್, ಸುಂದರರಾಜ್, ಕಾಳಯ್ಯ, ಎಸ್.ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆಧಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಫಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟೈಗರ್ 3(ಹಿಂ): ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಗರುಪಲ್ಯ (ಕ): ಮ.1.20ಕ್ಕೆ.
ಸ್ಕ್ರೀನ್ 2	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ರಾಜಯೋಗ (ಕ): ಮ.1.15ಕ್ಕೆ, ನೇತ್ರಂ (ಕ): ಸಂ.4.30ಕ್ಕೆ, ಗರಡಿ (ಕ): ರಾ.7.10ಕ್ಕೆ, ಸ್ಪಾರ್ಕ್ ಲೈಫ್ (ತೆ): ರಾ.10ಕ್ಕೆ.
ಸ್ಕ್ರೀನ್ 3	ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ): ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, ಬೆಂಬಿಡದ ನಾವಿಕ (ಕ): ಮ.1ಕ್ಕೆ, ಶೇಶಮ್ ಮೈಕ್ ಇಲ್ ಫಾತಿಮಾ (ಮ): ರಾ.7.30ಕ್ಕೆ, ದಿ ಹಂಗರ್ ಗೇಮ್ಸ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ಟೈಗರ್ 3 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಮಂಗಳವಾರಂ (ತೆ): ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, ಗರಡಿ (ಕ): ಮ.3.40ಕ್ಕೆ, ಟೈಗರ್ 3 (ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಾದಪ್ಪನಿಗೆ 35ನೇ ವರ್ಷದ ಹೂವಿನ ಅಲಂಕಾರ ಸೇವೆ



ತಿ.ನರಸೀಪುರ, ನ.27– ಪಟ್ಟಣದ ನಿವಾಸಿ ಅನಾಥ ಶವಗಳ ಮುಕ್ತಿದಾತ ಡಾ.ಎಂ. ಮಾದೇಶ್ ತಮ್ಮ ತಂದೆ ದಿ.ಕೆ.ಮಹದೇವಪ್ಪನವರ ಜ್ಞಾಪಕಾರ್ಥ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದ ಸ್ವಾಮಿಯ ಸನ್ನಿಧಿಯಲ್ಲಿ ಸೋಮವಾರ 35ನೇ ವರ್ಷದ ಹೂವಿನ ಅಲಂಕಾರ ಸೇವೆ ನೆರವೇರಿಸಿದರು.

ಕಳೆದ 34 ವರ್ಷಗಳಿಂದಲೂ ಮಾದಪ್ಪನ ಸನ್ನಿಧಿಯಲ್ಲಿ ಹೂವಿನ ಅಲಂಕಾರ ಸೇವೆ ನೆರವೇರಿಸಿಕೊಂಡು ಬಂದಿರುವ ಮಾದೇಶ್, 2ನೇ ಕಾರ್ತಿಕ ಸೋಮವಾರ ಸುಮಾರು 950 ಕೆಜಿ ಹೂ ಬಳಸಿ 25ಕ್ಕೂ ಹೆಚ್ಚು ಹೂಗಾರರ ಸಹಕಾರದೊಂದಿಗೆ ದೇವಸ್ಥಾನದ ಗರ್ಭಗುಡಿ, ಚಪ್ಪರ ಮಾಳಿಗೆ, ಪ್ರಾಂಗಣ, ಗಣೇಶನಗುಡಿ, ಹುಲಿ ವಾಹನ, ಬಸವ ವಾಹನ, ರುದ್ರಾಕ್ಷಿ ಮಂಟಪ ಹಾಗೂ ಚಿನ್ನದ ರಥ ಸೇರಿದಂತೆ ಸಾಲೂರು ಮಠ ಮೊದಲಾದ ಸ್ಥಳಗಳನ್ನು ಸೇವಂತಿಗೆ, ಚೆನ್ನ ಮಲ್ಲಿಗೆ, ಗಣಗಲೆ, ಸುಗಂಧರಾಜ, ಜಾಲ್ವೇರ, ಆಸ್ಟರಸ್, ಗುಲಾಬಿ, ಚೆಂಡು ಮಲ್ಲಿಗೆ ಸೇರಿದಂತೆ ಬಗೆ ಬಗೆಯ ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿ ಮಾದಪ್ಪನ ಸೇವೆ ಮಾಡಿದರು.

ಬೆಳಗ್ಗೆಯಿಂದಲೇ ಮಹದೇಶ್ವರನ ಬೆಟ್ಟಕ್ಕೆ ಆಗಮಿಸಿದ ಸಾವಿರಾರು ಭಕ್ತರು ಹೂವಿನ ಅಲಂಕಾರದಿಂದ ಕಂಗೊಳಿಸುತ್ತಿದ್ದ ದೇವಸ್ಥಾನ ಹಾಗೂ ಮಾದಪ್ಪನನ್ನು ಕಣ್ತುಂಬಿಕೊಂಡರು.

ಇನ್ನು 2ನೇ ಕಾರ್ತಿಕ ಸೋಮವಾರ ಅಂಗವಾಗಿ ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮಿಯವರ ನೇತೃತ್ವದಲ್ಲಿ ಅಭಿಷೇಕ, ಮಹಾಮಂಗಳಾರತಿ, ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಹೂವಿನ ಅಲಂಕಾರ ತಂಡದಲ್ಲಿ ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ತಿ.ನರಸೀಪುರದ ಸುರೇಶ್, ಮಹೇಶ್, ಅಭಿ, ರಘು, ಆನಂದ್, ಆಸೀಫ್, ಭೈರಾಪುರ ಬಾಲು ಇದ್ದರು.

ಪ್ರಸಾದ ವ್ಯವಸ್ಥೆ: ಚಾಮರಾಜನಗರ ಜಿಲ್ಲೆ ಆಲತ್ತೂರುಹುಂಡಿ ಗ್ರಾಮದ ದಿ.ಸಿದ್ದಪ್ಪನವರ ನೆನಪಿನಲ್ಲಿ ಅವರ ಪುತ್ರ ನಂಜುಂಡಸ್ವಾಮಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಿದ್ದರು.

ಖಾಸಗಿ ಬಸ್ ಏಜೆಂಟರ ಸಂಘದಿಂದ ಕನ್ನಡ ರಾಜ್ಯೋತ್ಸವ

ಪ್ರತಿಯೊಬ್ಬರೂ ಕನ್ನಡ ಭಾಷೆ ಬಳಕೆಗೆ ಮುಂದಾಗಿ: ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್



ತಿ.ನರಸೀಪುರ, ನ.27– ನಮ್ಮ ನೆಲ, ಜಲ ಭಾಷೆ ಉಳಿವಿಗಾಗಿ ಅನೇಕ ಸಾಹಿತಿಗಳು, ಹೋರಾಟಗಾರರು ಶ್ರಮಿಸಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ಕನ್ನಡ ಭಾಷೆ ಹೆಚ್ಚು ಬಳಸುವಂತಾಗಬೇಕು ಎಂದು ತಾಲೂಕಿನ ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ತಿಳಿಸಿದರು.


ಪಟ್ಟಣದ ಖಾಸಗಿ ಬಸ್ ಏಜೆಂಟರ ಸಂಘದಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಕನ್ನಡ ನಾಡು ನುಡಿಗಾಗಿ ಹೋರಾಡಿದ ಸಾಧಕರನ್ನು ನಾವು ಸ್ಮರಿಸಬೇಕು. ಆ ಮೂಲಕ ಕನ್ನಡ ಭಾಷೆ ಉಳಿವಿಗೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದ ಅವರು ಜೀವನದಲ್ಲಿ ಕಷ್ಟಪಟ್ಟು ಪ್ರಾಮಾಣಿಕವಾಗಿ ಮುಂದೆ ಬಂದವರನ್ನು ಆದರ್ಶವನ್ನಾಗಿ ಇಟ್ಟುಕೊಳ್ಳಬೇಕು. ಅಲ್ಲದೇ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಬರಲು ಕಾರಣರಾದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರನ್ನು ಸ್ಮರಿಸಬೇಕು ಎಂದರು.

ಸಾಮಾಜಿಕ ಹಾಗೂ ವಿಚಾರ ಪ್ರಜ್ಞೆ ಬೆಳೆಯಲು ಮಾತೃಭಾಷೆ ಹಾಗೂ ನೆಲದ ಭಾಷೆಯಿಂದ ಮಾತ್ರ ಸಾಧ್ಯ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕನ್ನಡ ಭಾಷೆ ಉಳಿವಿನ ಬಗ್ಗೆ ಚಿಂತಿಸುವಂತಾಗಬೇಕು ಎಂದರು.

ಖಾಸಗಿ ಬಸ್ ಏಜೆಂಟರ ಸಂಘದ ನೂತನ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಹೇಳಿದಂತೆ ಕನ್ನಡಿಗರು ಯಾವುದೇ ದೇಶದಲ್ಲಿದ್ದರೂ, ಮನೆಗಳಲ್ಲಿ ಮಾತೃಭಾಷೆ ಕನ್ನಡದ ಬಗ್ಗೆ ವಿಶೇಷ ಒಲವಿರಬೇಕು. ಯಾವುದೇ ಭಾಗದಲ್ಲಿದ್ದರೂ ನಿಮ್ಮ ಮನೆಗಳಲ್ಲಿ ಕನ್ನಡ ಭಾಷೆ ಮನೆ ಮಾಡಿರಬೇಕು ಎಂದು ಸಲಹೆ ನೀಡಿದ ಅವರು ಇಂಗ್ಲಿಷ್ ಮಾತನಾಡುವವರು ಮಾತ್ರ ಶ್ರೇಷ್ಠರು, ಕನ್ನಡ ಮಾತನಾಡುವವರು ಕನಿಷ್ಠರು ಎಂಬ ಕೀಳರಿಮೆ ತ್ಯಜಿಸಬೇಕು. ಕನ್ನಡ ನಮ್ಮ ತಾಯಿ ಭಾಷೆ. ಈ ಕನ್ನಡ ನುಡಿಯಿಂದಲೇ ನಮ್ಮ ಜೀವ ಮತ್ತು ಭಾವ ಅರಳಿರುವುದು. ಕನ್ನಡ ಸಾಹಿತ್ಯದ ಪುಸ್ತಕ ಮತ್ತು ಪತ್ರಿಕೆಗಳನ್ನು ಓದುವ ಮೂಲಕ ಜ್ಞಾನ ಸಂಪಾದನೆ ಮಾಡಬಹುದು. ಜೊತೆಗೆ ವರ್ತಮಾನದ ವಿದ್ಯಮಾನಗಳನ್ನು ಗ್ರಹಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ ಪಿ.ಸ್ವಾಮಿನಾಥ್‌ಗೌಡ, ಸಂಘದ ಗೌರವಾಧ್ಯಕ್ಷ ಮಹದೇಶ್ವರ ಭವನ್ ರಾಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲೀಪುರ ರಾಜಣ್ಣ, ಭತ್ತದ ವ್ಯಾಪಾರಿ ಮಲ್ಲಣ್ಣ, ಹೋಟೆಲ್ ಉಮೇಶ್ ಶೆಟ್ಟಿ, ಆರ್‌ಟಿಓ ಶಿವಣ್ಣ, ಡೈರಿ ಗುರುಮೂರ್ತಿ, ತಿರುಮಕೂಡಲು ಲಕ್ಷ್ಮಣ್, ಸಂಘದ ಉಪಾಧ್ಯಕ್ಷ ಕೆ.ಕುಮಾರ್, ಕಾರ್ಯದರ್ಶಿ ರಾಜಣ್ಣ, ಖಜಾಂಚಿ ನಾಗಲಿಂಗು, ಬಸ್ ಮಾಲೀಕ ರಮೇಶ್, ನಾಗರಾಜು, ಸಂಘದ ನಿರ್ದೇಶಕರಾದ ಮಾಧು, ಶಂಕರ್, ಮಂಜುನಾಥ್, ಸೂರಿ, ಗಿರೀಶ್, ಮಹದೇವಣ್ಣ, ಅಶೋಕ್, ಹನುಮಂತ, ಸಿದ್ದಪ್ಪಾಜಿ, ಮಹೇಶ್, ಮಹದೇವ್, ಲೋಕೇಶ್ ಮತ್ತಿತರರಿದ್ದರು.

ಡಿ.ಚೇತನ್‌ಕುಮಾರ್‌ಗೆ ಪಿಹೆಚ್.ಡಿ



ಮೈಸೂರು: ಡಾ.ಎಸ್. ಚಂದ್ರಮ್ಮ ಅವರ ಮಾರ್ಗದರ್ಶನದಲ್ಲಿ ಡಿ. ಚೇತನ್‌ಕುಮಾರ್ ಅವರು ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.


ಮೈಸೂರಿನ ಮೊದಲ ಫ್ಲೈ ಓವರ್ ಅಲಂಕರಿಸಿರುವ ಅರಳಿ ಗಿಡಗಳು!

● ಅಲಕ್ಷಿಸಿದರೆ ಅಪಾಯಕಾರಿಯಾಗಬಹುದು
● ಈಗಾಗಲೇ ಸ್ಲ್ಯಾಬ್‌ಗಳ ಹೊಕ್ಕಿರುವ ಬೇರುಗಳು

ಮೈಸೂರು, ನ.27(ಎಸ್‌ಬಿಡಿ)– ಮೈಸೂರಿನ ಮೊದಲ ಫ್ಲೈ ಓವರ್ (ಮೇಲ್ಸೇತುವೆ)ನಲ್ಲಿ ಅರಳಿ ಗಿಡಗಳು ಸೊಂಪಾಗಿ ಬೆಳೆಯುತ್ತಿದ್ದು, ಅವುಗಳನ್ನು ತೆರವುಗೊಳಿಸುವ ಕಾರ್ಯ ತುರ್ತಾಗಿ ಆಗಬೇಕಿದೆ. ನಗರದ ಹೊರವರ್ತುಲ ರಸ್ತೆ–ಹುಣಸೂರು ರಸ್ತೆ ಹಿನಕಲ್ ಜಂಕ್ಷನ್‌ನಲ್ಲಿರುವ ಮೇಲ್ಸೇತುವೆಯ ಎರಡೂ ಬದಿಯ ಗೋಡೆಗಳು ಹಾಗೂ ಸೇತುವೆ ಕೆಳಭಾಗದಲ್ಲಿ ಅರಳಿ ಗಿಡಗಳು ಬೆಳೆಯುತ್ತಿವೆ. ಸೇತುವೆಯಲ್ಲಿ 90ಕ್ಕೂ ಹೆಚ್ಚು ಅರಳಿ ಗಿಡಗಳು ಕಾಣಸಿಗುತ್ತವೆ. ಸಂದುಗಳಲ್ಲಿ ಮತ್ತಷ್ಟು ಸಣ್ಣ ಸಸಿಗಳು ಚಿಗುರುತ್ತಿವೆ. ಮೂರ್‍ನಾಲ್ಕು ಗಿಡಗಳ ಕಾಂಡ ದಪ್ಪವಾಗುತ್ತಿದ್ದು, ಕೆಲವು ದಿನಗಳಲ್ಲೇ ಮರವಾಗಿ ಬೆಳೆಯುವ ಹಂತದಲ್ಲಿವೆ. ಸೇತುವೆ ಮೇಲಿನ ರಸ್ತೆ ತಡೆಗೋಡೆಯಲ್ಲೂ ಒಂದೆರಡು ಗಿಡಗಳು ಬೆಳೆದಿವೆ.



ಮೈಸೂರಿನ ಹಿನಕಲ್ ಫ್ಲೈಓವರ್‌ನ ಗೋಡೆಗಳಲ್ಲಿ ಅರಳಿ ಗಿಡಗಳು ಬೆಳೆದಿರುವುದು.







ನಿರ್ಲಕ್ಷಿಸಿದರೆ ಅಪಾಯ: ಮೇಲ್ಸೇತುವೆಯಲ್ಲಿ ಸಣ್ಣ ಅರಳಿ ಗಿಡಗಳು ಬೆಳೆದಿರುವುದೇನು ಗಂಭೀರ ವಿಚಾರವೇ? ಎಂದು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಸೇತುವೆ ಸುಭದ್ರತೆಗೆ ಆಪತ್ತಾಗಬಹುದು. ಸೇತುವೆ ಗೋಡೆಯುದ್ದಕ್ಕೂ ಸ್ಲ್ಯಾಬ್‌ಗಳ ನಡುವಿನ ಸಂದುಗಳಲ್ಲಿ ಅರಳಿ ಗಿಡಗಳು ಬೆಳೆಯುತ್ತಿದ್ದು, ದಿನಕಳೆದಂತೆ ದೊಡ್ಡದಾಗುವುದರ ಜೊತೆಗೆ ಬೇರುಗಳು ಗಟ್ಟಿಯಾಗುತ್ತವೆ. ಅಲ್ಲದೆ ಒಳಭಾಗದಲ್ಲಿ ಬೇರುಗಳು ಹರಡುವುದರಿಂದ ಸ್ಲ್ಯಾಬ್‌ಗಳು ಸಡಿಲವಾಗಬಹುದು. ಒಂದು ಸ್ಲ್ಯಾಬ್ ಸಡಿಲವಾದರೆ ಅಕ್ಕಪಕ್ಕದ ಸ್ಲ್ಯಾಬ್‌ಗಳಿಗೂ ಹಾನಿಯಾಗಬಹುದು. ಹೀಗಾಗದಂತೆ ಈಗಲೇ ಕ್ರಮ ವಹಿಸಿ, ಅರಳಿ ಗಿಡಗಳನ್ನು ತೆರವು ಮಾಡುವುದು ಅವಶ್ಯವಾಗಿದೆ.

ನಿರಂತರ ಗಮನವಿರಲಿ: ಕೇಂದ್ರ ಸರ್ಕಾರದ ಶೇ.60ರಷ್ಟು ಅನುದಾನದೊಂದಿಗೆ ರಾಜ್ಯ ಸರ್ಕಾರ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಂತಿಕೆ ಸೇರಿ 23.50 ಕೋಟಿ ರೂ. ವೆಚ್ಚದಲ್ಲಿ ಈ ಮೇಲ್ಸೇತುವೆ ನಿರ್ಮಿಸಲಾಗಿದೆ. 2016ರ ಜೂನ್‌ನಲ್ಲಿ ಆರಂಭವಾದ ಕಾಮಗಾರಿ ಎರಡು ವರ್ಷಗಳಲ್ಲಿ ಪೂರ್ಣಗೊಂಡು 2018ರ ಡಿಸೆಂಬರ್ 23ರಂದು ಅಂದು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಜಿ.ಟಿ. ದೇವೇಗೌಡರು(ಹಾಲಿ ಶಾಸಕ) ಲೋಕಾರ್ಪಣೆ ಮಾಡಿದ್ದರು. ಈ ಯೋಜನೆ ಅನುಷ್ಠಾನವಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು. ಈ ಮೇಲ್ಸೇತುವೆ ಸಾರ್ವಜನಿಕ ಬಳಕೆಗೆ ಮುಕ್ತಗೊಂಡು ಐದು ವರ್ಷಗಳಾಗಿದ್ದು, ಅಪಾಯವಾಗಬಹುದಾದ ಅರಳಿ ಗಿಡಗಳನ್ನು ತೆರವು ಮಾಡುವುದರ ಜೊತೆಗೆ ಸೂಕ್ತ ನಿರ್ವಹಣೆಗೆ ಗಮನ ಹರಿಸಬೇಕಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ

ಸುರಕ್ಷತಾ ಕ್ರಮವಾಗಬೇಕು: ಮೇಲ್ಸೇತುವೆ ಇಕ್ಕೆಲಗಳಲ್ಲಿರುವ ಸೇವಾ ರಸ್ತೆ ಹಾಗೂ ರಿಂಗ್ ರಸ್ತೆ ಕೂಡುವ ಸ್ಥಳದಲ್ಲಿ ಸುಗಮ ವಾಹನ ಸಂಚಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ನಾಲ್ಕು ಕಡೆಯಿಂದ ವಾಹನಗಳು ಬರುತ್ತವೆ. ಮಧ್ಯದಲ್ಲಿ ವೃತ್ತವಿದ್ದರೂ ಕೆಲವರು ಅಡ್ಡಾದಿಡ್ಡಿ ವಾಹನ ಓಡಿಸುವುದರಿಂದ ಅಪಘಾತವಾಗುವ ಸಾಧ್ಯತೆ ಇದೆ. ರಿಂಗ್ ರಸ್ತೆಯಲ್ಲಿ ಎರಡೂ ಕಡೆ ವೇಗ ನಿಯಂತ್ರಣಕ್ಕೆ ಬ್ಯಾರಿಕೇಡ್ ಅಳವಡಿಸಲಾಗಿದೆ. ಆದಾಗ್ಯೂ ಕೆಲವರು ಅತೀ ವೇಗವಾಗಿ ವಾಹನಗಳನ್ನು ಚಾಲಿಸಿಕೊಂಡು ಬಂದು ಜಂಕ್ಷನ್ ದಾಟುತ್ತಾರೆ. ರಸ್ತೆ ಮಧ್ಯೆ ಸಿಮೆಂಟ್ ಇಟ್ಟಿಗೆಗಳು ಹಾಗೂ ಮಣ್ಣಿನ ಗುಡ್ಡೆಯಿದ್ದು, ಇದರಿಂದ ದ್ವಿಚಕ್ರ ವಾಹನಗಳ ಅಪಘಾತಕ್ಕೀಡಾಗಬಹುದು. ಇಲ್ಲಿನ ತ್ಯಾಜ್ಯ ತೆರವುಗೊಳಿಸಿ, ಪ್ರತಿಫಲಿಸುವ ಬ್ಯಾರಿಕೇಡ್ ಅಳವಡಿಸುವುದು ಉತ್ತಮ.

ಹಿನಕಲ್ ಫುಟ್‌ಪಾತ್ ಅಧೋಗತಿ



ಮೇಲ್ಸೇತುವೆ ಇಕ್ಕೆಲಗಳಲ್ಲಿರುವ ಸೇವಾ ರಸ್ತೆಗೆ ಕಾಯಕಲ್ಪ ಬೇಕಿದೆ. ರಸ್ತೆ ಅಲ್ಲಲ್ಲಿ ಗುಂಡಿ ಬಿದ್ದಿದೆ. ಇಲ್ಲಿನ ಫುಟ್‌ಪಾತ್ ಕೂಡ ಸುಸ್ಥಿತಿಯಲ್ಲಿಲ್ಲ. ಇಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಪಾದಚಾರಿಗಳಿಗೆ ತೊಂದರೆಯಾಗಿದೆ. ಇನ್ನು ಸೇತುವೆ ನಂತರದ ಮುಖ್ಯರಸ್ತೆಯೂ ಹಾಳಾಗಿದೆ. ಎರಡೂ ಕಡೆಯ ಫುಟ್‌ಪಾತ್ ಅಧೋಗತಿ ತಲುಪಿದೆ. ಹಳ್ಳದಿಣ್ಣೆಯ ಫುಟ್‌ಪಾತ್‌ನಲ್ಲಿ ಕಲ್ಲುಗಳು ಕಿತ್ತು ಬಂದಿವೆ. ಶಾಲಾ ಮಕ್ಕಳು ಸೇರಿದಂತೆ ಪಾದಚಾರಿಗಳು ವಾಹನ ದಟ್ಟಣೆ ನಡುವೆ ರಸ್ತೆಯಲ್ಲೇ ಓಡಾಡುವಂತಾಗಿದೆ. ಸೂಕ್ತ ರೀತಿಯಲ್ಲಿ ಫುಟ್‌ಪಾತ್ ನಿರ್ಮಿಸಿಕೊಟ್ಟರೆ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಶಾಲೆಯ ಮಾನ್ಯತೆ ನವೀಕರಿಸಿಕೊಳ್ಳಲು ಸೂಚನೆ

ಮೈಸೂರು, ನ.27– ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರದಿಂದ ಅನುಮತಿ ಪಡೆದು ನಡೆಯುತ್ತಿರುವ ಅನುದಾನಿತ, ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳ ಆಡಳಿತ ಮಂಡಳಿಗಳಿಗೆ 2021–22, 2022–23 ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ, ಮಾನ್ಯತೆ ನವೀಕರಣವಾಗದಿರುವಂತಹ ಶಾಲೆಗಳು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಹಾಗೂ 2023–24ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಸಂಬಂಧ ಶಾಲಾ ಆಡಳಿತ ಮಂಡಳಿಗಳು ಇಲಾಖೆಯ ವೆಬ್‌ಸೈಟ್‌ನಲ್ಲಿ ಸೃಜಿಸಿರುವ ತಂತ್ರಾಂಶದ ಮೂಲಕ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ತಮ್ಮ ಶಾಲೆಯ ಮಾನ್ಯತೆ ನವೀಕರಿಸಿಕೊಳ್ಳಲು ಸೂಚನೆ ನೀಡಲಾಗಿರುತ್ತದೆ. ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆಯುವ ಸಂಬಂಧ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 29 ಅಂತಿಮ ಗಡುವಾಗಿರುತ್ತದೆ.

ಒಂದು ವೇಳೆ ನಿಗದಿತ ಅವಧಿ ಒಳಗೆ ಮಾನ್ಯತೆ ಪಡೆಯದ ಆಡಳಿತ ಮಂಡಳಿಗಳಿಗೆ ತಿಳಿಯಪಡಿಸುವುದೇನೆಂದರೆ ತಮ್ಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಹಾಗೂ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಸರ್ಕಾರಿ, ಮಾನ್ಯತೆ ಹೊಂದಿರುವ ಹತ್ತಿರದ ಶಾಲೆಗಳಿಗೆ ಟ್ಯಾಗ್ ಮಾಡಲಾಗುವುದು ಹಾಗೂ ಆರ್‌ಟಿಇ ಶುಲ್ಕ ಮರುಪಾವತಿ ಸುಬಂಧಿಸು ಎಲ್ಲಾ ಪರಿಣಾಮಗಳಿಗೂ ಸಂಬಂಧಿಸಿದ ಆಡಳಿತ ಮಂಡಳಿಯವರನ್ನೇ ಹೊಣೆಗಾರರನ್ನಾಗಿಸುವುದಲ್ಲದೇ, ಮಾನ್ಯತೆ ನವೀಕರಣ ಮಾಡಿಕೊಳ್ಳದ ಪ್ರಾಥಮಿಕ/ ಪ್ರೌಢಶಾಲೆಗಳ ಕುರಿತಂತೆ ಇಲಾಖಾ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಎಚ್.ಕೆ.ಪಾಂಡು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಕ್ಯಾಪ್ಟನ್ ಪ್ರಾಂಜಲ್ ಸೇರಿ ಹುತಾತ್ಮ ಇತರೆ ಯೋಧರಿಗೆ ಶ್ರದ್ಧಾಂಜಲಿ



ಮೈಸೂರು, ನ.27(ಎಂಕೆ)– ಜಮ್ಮು – ಕಾಶ್ಮೀರದ ರಜೌರಿ ಜಿಲ್ಲೆ ಬಾಜಿ ಮಾಲ್ ಅರಣ್ಯ ಪ್ರದೇಶದಲ್ಲಿ ಉಗ್ರರ ವಿರುದ್ಧ ನಡೆದ ಕಾಳಗದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಹಾಗೂ ಇತರೆ ಹುತಾತ್ಮ ಯೋಧರಿಗೆ ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಮೊಂಬತ್ತಿ ಬೆಳಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಮೆಟ್ರೊಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಪ್ರತಿಮೆ ಎದುರು ಜಮಾವಣೆಗೊಂಡ ಬಳಗದ ಪದಾಧಿಕಾರಿಗಳು, ಮುಖಂಡರು ಕ್ಯಾಪ್ರಾಂಜಲ್ ಅವರ ಭಾವಚಿತ್ರವನ್ನಿಡಿದು ಮೊಂಬತ್ತಿ ಬೆಳಗಿಸಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ಬಳಿಕ ಕ್ಯಾಪ್ರಾಂಜಲ್ ಅಮರ್ ರಹೇ ಘೋಷಣೆಗಳನ್ನು ಕೂಗಿ ಹುತಾತ್ಮ ಯೋಧರನ್ನು ಸ್ಮರಿಸಿದರು. ಬಿಜೆಪಿ ಮುಖಂಡರಾದ ಕೆ.ಜಿ.ರಮೇಶ್, ಜಗದೀಶ್, ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ಸಂದೇಶ್, ದೀಪಕ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕಡಕೊಳ ಜಗದೀಶ್, ಚಕ್ರಪಾಣಿ, ರಂಗನಾಥ್, ಜೀವನ್, ಮಧು ಮತ್ತಿತರರಿದ್ದರು.

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

WANTED IMMEDIATELY
BRANCH MANAGERS
for Mysore for a
MNC Life Insurance Company
Face to Face Channel
Salary upto
Rs. 7,50,000/- per annum.
Agency & Direct Marketing Preferred.
Call : 74118 78999


DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಕಳೆದಿದೆ
ಮೂಗೂರು ಗ್ರಾಮ ಪಂಚಾಯಿತಿ, ಮೂಗೂರು ಗ್ರಾಮದವರಾದ ಎಸ್.ಎಸ್. ಬಸವಣ್ಣನವರ ಸೇಲ್ ಡೀಡ್ ನಂ. 677, ದಿನಾಂಕ 20–11–2023 ರಂದು ಮನೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಕಳೆದುಹೋಗಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ:
Mob: 9513862714

ಕಳೆದಿದೆ
ಬೋಗಾದಿ, 5ನೇ ಫೇಸ್, ಬಡಾವಣೆಯಲ್ಲಿ ಎಂ.ಐ.ಜಿ.–2 ಹುಡ್ಕೋ ಮನೆ ನಂ. 1415 ರ ನಿವೇಶನವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ ರಾಜಗೋಪಾಲ್ ರವರಿಗೆ ಮಂಜೂರು ಮಾಡಲಾಗಿರುತ್ತದೆ. ಸದರಿ ಮಂಜೂರಾತಿ ದಾಖಲಾತಿಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರಗಳು ಕಳೆದುಹೋಗಿರುತ್ತದೆ.
ಯಾರಿಗಾದರು ಸಿಕ್ಕಿದಲ್ಲಿ ಸಂಪರ್ಕಿಸಿ:
Mob: 7259768668


ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
ಕಮರ್ಷಿಯಲ್ ಅಸಲುದಾವೆ
ಸಂಖ್ಯೆ : 154/2022
ವಾದಿ : ಚಂದ್ರಶೇಖರ
ವಿರುದ್ಧ
ಪ್ರತಿವಾದಿ : ಶಿವಪಾದಸ್ವಾಮಿ
ಪ್ರಸ್ತಾಪಿತ ಪ್ರತಿವಾದಿ: ಚಾಮರಾಜೇಶ್ವರಿ ಎಸ್. ಕೋಂ. ಶಿವಪಾದಸ್ವಾಮಿ
Proprietorship. CHR SOLAR TECHNOLOGIES, ಎಸ್‌ಪಿ ಕಛೇರಿ ಎದುರು, ಚಾಮರಾಜನಗರ –571313.
ಪತ್ರಿಕಾ ಪ್ರಕಟಣೆಗಾಗಿ
ಈ ಮೇಲ್ಕಂಡ ಪ್ರಕರಣದಲ್ಲಿ ವಾದಿಯು ಪ್ರತಿವಾದಿಗಳ ವಿರುದ್ಧ ಹಣ ವಸೂಲಾತಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ಪ್ರಸ್ತಾಪಿತ 2ನೇ ಪ್ರತಿವಾದಿ ಹಾಜರಾತಿಗೆ ನಿಗಧಿಯಾಗಿರುತ್ತದೆ. ಆದುದರಿಂದ ನೀವು ಘನ ನ್ಯಾಯಾಲಯದ ಮುಂದೆ ಹಾಜರಾಗಿ ದಿನಾಂಕ: 11–01–2024 ರಂದು ಬೆಳಿಗ್ಗೆ 11 ಗಂಟೆಗೆ ಖುದ್ದಾಗಿ ಇಲ್ಲ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿ ದಾವೆ ನಡೆಸಲು ಕ್ರಮ ಕೈಗೊಳ್ಳುವುದು ಒಂದು ವೇಳೆ ತಪ್ಪಿದ್ದಲ್ಲಿ ಘನ ನ್ಯಾಯಾಲಯವು ತಮ್ಮ ವಿರುದ್ಧ ಏಕಪಕ್ಷಿಯವಾಗಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮೈಸೂರು
ವಾದಿಯ ಪರ ವಕೀಲರು
ಹೇಮಲತಾ ಎಸ್.ಎನ್. ಬಿ.ಎ., ಎಲ್.ಎಲ್.ಬಿ
ಕೆ.ಎಂ. ಸತೀಶ್‌ಚಂದ್ರ, #777, ಅಭಿಷೇಕ್ ಸರ್ಕಲ್, ಹೆಬ್ಬಾಳು, ಮೈಸೂರು
ದಿನಾಂಕ:20–11–2023 ಸ್ಥಳ: ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಉಬ್ಬಿರುವ ರಕ್ತನಾಳಗಳಿಗೆ ಶಾಶ್ವತ ವಿದಾಯ ಹೇಳಿ ಆಧುನಿಕ ಎಂಡೊ ವೀನಸ್ ಲೇಸರ್ ಅಬಲೇಶನ್ ಮುಖಾಂತರ
29.11.2023
ಬುಧವಾರ
ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
ಡಾ. ವಿನಯ್ ನ್ಯಾಪತಿ
ಸ್ಥಳ : ರಾಮಕೃಷ್ಣ ಆಸ್ಪತ್ರೆ, ಶಾಪ್ ನಂ.1120, ಎಫ್-58 ಬಿ, 1ನೆ ಮೆಯಿನ್, ಲಕ್ಷ್ಮೀ ಭಾಯಿ ರಸ್ತೆ,ಸೆಂಟ್ ಮೇರಿಸ್ ಶಾಲೆ ಎದುರುಗಡೆ, ವಿದ್ಯಾರಣ್ಯಪುರ, ಮೈಸೂರು,
ನೇಮಕಾತಿಗಳಿಗಾಗಿ
808 883 7000
Avis Vascular Centre
/avisvascularcentre
www.avisvascularcentre.com

ವೈಕುಂಠ ಸಮಾರಾಧನೆ



ಶ್ರೀ ಎಂ.ವಿಜಯರಾಜ್
ಮಾಲೀಕರು: ಫೋಟೋ ಆಲ್ಬಂ ಸೆಂಟರ್, ಮೈಸೂರು
ಇವರು ದಿನಾಂಕ: 17.11.2023ನೇ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆಯನ್ನು ದಿನಾಂಕ: 29.11.2023ನೇ ಬುಧವಾರದಂದು ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ದುಃಖತಪ್ತರು: ತಂದೆ, ತಾಯಿ, ಸಹೋದರ, ಸಹೋದರಿ, ಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು.
ಸ್ಥಳ: ಆಲಮ್ಮ ಚೌಲ್ಟ್ರೀ, ವಿನೋಬ ರಸ್ತೆ, ಶಿವರಾಂಪೇಟೆ, ಮೈಸೂರು
ಭೋಜನ: ಮಧ್ಯಾಹ್ನ 12.30ಕ್ಕೆ, ಮೊ: 98451–65522

HONDA BIG WING
WE ARE HIRING !
RECEPTIONIST - Any Degree
Female candidate with good sales communication skills & computer knowledge, Experienced candidates is a plus point, freshers can also apply.
SALES ASSOCIATES - PUC / Degree
Male / Female candidate with good communication skills in sales, Experienced candidates preferably, freshers can also apply.
FIELD SALES ASSOCIATE - PUC / Degree
Male / Female candidate with good communication skills, Experience in field sales for motorcycles must have driving licence, Freshers can also apply.
Interested candidates may walk in for an Interview from Monday to Friday between 11 am to 5pm.
Opposite PALACE HONDA CH 67,1st Main, New Kantha Raj Urs Road, Next to Fire Brigade, Saraswathipuram,Mysore-09
bigwingmysore@gmail.com | Ph: +91 76765 23911

SAVENSA
BUSINESS SOLUTIONS PRIVATE LIMITED
LOOKING FOR A JOB?
WANTED
SALES MANAGER - 35 NO'S
Contact : 9986316666
Freshers also Welcome
Attractive : Salary + Allowance + Incentives
WALK IN DIRECTLY
SAVENSA BUSINESS SOLUTIONS PVT LTD.
No. 527/ 486, Pooja Complex, 2nd Floor, Dr. Rajkumar Road, Yaraganahalli, Mysore - 570019
Above Muthoot Finance
Timings : 10.30 am to 1 pm

USED COMPUTERS FOR SALE
1) Dual Core/2GB Ram / 80GB HDD / 17"LCD Rs.6,000/-
For Quantity of 10 No's. Rs.5,000/- per system
For Quantity of 10 No's without Monitor Rs.3,000/- per system
For Quantity of 30 No's without Monitor Rs.2,500/- per system
2) Dual Core LAPTOP / 2GB Ram / 250 GB HDD / Adaptor. Rs.6,000/-
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

ಹಸಿರು ನಮ್ಮ ಉಸಿರು

ಸಾರ್ವಜನಿಕರ ತಿಳುವಳಿಕೆಗಾಗಿ
ನನ್ನ ಕಕ್ಷಿದಾರರಾದ ಪಿ & ಪಿ ಇನ್ಫ್ರಾಸ್ಟ್ರಕ್ಚರ್ & ಡೆವಲಪ್ಪರ್ಸ್, ನಂ. 433, 1ನೇ ಮಹಡಿ, ಗದ್ದಿಗೆ ಮುಖ್ಯರಸ್ತೆ, ಕರ್ನಾಟಕ ಬ್ಯಾಂಕ್ ಪಕ್ಕ, ಬೋಗಾದಿ, ಮೈಸೂರು–570026 ಇದರ ಪಾಲುದಾರರಾದ ಶ್ರೀ ಎಂ.ಪಿ. ವೀರಭದ್ರಪ್ರಸಾದ್ ಬಿನ್ ಲೇಟ್ ಪುಟ್ಟಸ್ವಾಮಿ, ವಾಸ ಮಾದಹಳ್ಳಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು ಮತ್ತು ಶ್ರೀ ಮುನಿಕೃಷ್ಣ ಬಿನ್ ಲೇಟ್ ದೊಡ್ಡಮುನಿಯಪ್ಪ, ವಾಸ ನಂ. 11, ಮಂಜುನಾಥ ನಿಲಯ, ಬಾಲಾಜಿ ಎನ್‌ಕ್ಲೇವ್, ದ್ವಾರಕಾ ನಗರ, ಯಲಹಂಕ, ಬೆಂಗಳೂರು–560 064 ರವರುಗಳು ಅನುಸೂಚಿ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ ಹೊಂಬಮ್ಮ ಕೋಂ ಲೇಟ್ ಚಲುವಯ್ಯ, ಇವರ ವಾಸ ಶಿಂಡೇನಹಳ್ಳಿ ಗ್ರಾಮ, ಆಲನಹಳ್ಳಿ ಅಂಚೆ, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂಧ ವಾಗಿ ಬೇರೆ ಯಾರಿಗಾದರೂ, ಬ್ಯಾಂಕ್, ಸಂಘ ಸಂಸ್ಥೆ ಗಳಿಗಾಗಲೀ ಅಥವಾ ಹಣಕಾಸು ಸಂಸ್ಥೆಗಳಿಗಾಗಲೀ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಹದಿ ನೈದು ದಿನಗಳ ಒಳಗಾಗಿ ತಮಗಿರುವ ಹಕ್ಕು, ಆಸಕ್ತಿ ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೆ ಸಹಿತ ನನ್ನ ಕಕ್ಷಿದಾರರಿಗಾಗಲೀ ಅಥವಾ ನನಗಾಗಲೀ ಲಿಖಿತವಾಗಿ ತಿಳಿಸ ತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆಯವವರಿದ್ದು, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.
ಅನುಸೂಚಿ ಸ್ವತ್ತಿನ ವಿವರ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 144 ರಲ್ಲಿರುವ 5–00 (ಐದು) ಎಕರೆ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿ ಅಭಿವೃದ್ಧಿ ಹೊಂದದ ಸ್ವತ್ತು, ಇದಕ್ಕೆ ಚಕ್ಕುಬಂದಿ ಪೂರ್ವ: ಸರ್ವೆ ನಂ. 123 ರ ಜಮೀನು ಪಶ್ಚಿಮ: ಸರ್ವೆ ನಂ. 145 ರ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಜಮೀನು ; ಉತ್ತರ: ಸರ್ವೆ ನಂ. 143 ಮತ್ತು 146 ರ ಜಮೀನು ; ದಕ್ಷಿಣ: ಸರ್ವೆ ನಂ. 123 ರ ಜಮೀನು.
ಸಹಿ/– ಜಯಕುಮಾರ್. ಎಸ್., B.A., LL.B, ವಕೀಲರು, KAR-171/2014, ನಂ. 42, ಶ್ರೀವನ ಲೇಔಟ್, ಬೋಗಾದಿ, ಮೈಸೂರು.
Mob: 9901264007

ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾ ರರು ಅದರ ಮಾಲೀಕರಾದ, ನಂಬರ್ 401, 2ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆ, ಐ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು–570022, ಇಲ್ಲಿ ವಾಸವಾಗಿರುವ ಶ್ರೀಮತಿ. ಬಿ. ಎಸ್. ಸುವರ್ಣ ಕೋಂ. ಬಿ. ಪಿ. ಪ್ರಸನ್ನ ಕುಮಾರ್, ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಭಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾ ಗುವುದು.
ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳ, ಕೇರಗಳ್ಳಿ ಗ್ರಾಮದ ಸರ್ವೆ ನಂಬರ್: 3, 5/1, 15, 16/1, 17/1, 17/2, 18/1, 18/2, 19, 20, 21, 22/2, 22/3, 22/4, 23/1, 23/2, 23/3, 24 ಮತ್ತು 26/1 ಒಟ್ಟು ವಿಸ್ತೀರ್ಣ 45 ಎಕರೆ 25 ಗುಂಟೆ ಇಲ್ಲಿ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ) ನಿರ್ಮಿಸಿರುವ ಬಡಾವಣೆ ಇಲ್ಲಿರುವ ಪೂರ್ವ– ಪಶ್ಚಿಮ: 20.20 ಮೀಟರ್, ಉತ್ತರ–ದಕ್ಷಿಣ: 12.00 ಮೀಟರ್, ಒಟ್ಟು ವಿಸ್ತೀರ್ಣ: 242.4 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ: 80 ಮತ್ತು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:–ನಿವೇಶನ ಸಂಖ್ಯೆ: 73, ಪಶ್ಚಿಮಕ್ಕೆ:–9 ಮೀಟರ್ ರಸ್ತೆ, ಉತ್ತರಕ್ಕೆ: –ನಿವೇಶನ ಸಂಖ್ಯೆ: 79, ದಕ್ಷಿಣಕ್ಕೆ:–ನಿವೇಶನ ಸಂಖ್ಯೆ: 81
Sd/- M.N.Prakash kalappa, Advocate, KAR- 1996-2000, # 2-3, First Floor, PRI Complex, 67/7A, New Sayyajirao Road, Fort Mohalla, Mysore 570004, India. Cell: 93431 12535
E-mail: mnprakashkalappa@gmail.com
ಮೈಸೂರು: 27/11/2023